# ಐಕ್ಯರಂಗ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 | ಸಂಚಿಕೆ 47 | ನವೆಂಬರ್ 25, 1990 | ರೂ 1-50


# ರಾಷ್ಟ್ರೀಯ ಐಕ್ಯತೆಗಾಗಿ ಇಂದಿನ ಹೋರಾಟ ಸ್ವಾತಂತ್ರ್ಯ ಹೋರಾಟದಷ್ಟೇ ಮಹತ್ವದ್ದು.

## ಏಕೆಂದರೆ ನಮ್ಮ ಸ್ವಾತಂತ್ರ್ಯದ ಎಲ್ಲಾ ಉತ್ತಮ ಫಲಗಳು ಇಲ್ಲಿ ಪಣಕ್ಕೊಡ್ಡಲ್ಪಟ್ಟಿವೆ.

ಕಳೆದ ವಾರ ತೀವ್ರ ರಾಜಕೀಯ ಚಟುವಟಿಕೆಗಳ ವಾರ. ರಾಷ್ಟ್ರೀಯ ಐಕ್ಯತೆಗೆ ವಿ.ಹೆಚ್.ಪಿ. - ಬಿ.ಜೆ.ಪಿ. ಸವಾಲನ್ನು ಎದುರಿಸಿದ ವಿ.ಪಿ.ಸಿಂಗ್ ಸರ್ಕಾರ ಕಾಂಗ್ರೆಸ್(ಐ), ಬಿ.ಜೆ.ಪಿ. ಹಾಗೂ ಜನತಾದಳ ಭಿನ್ನಮತೀಯರ ಸಮಯಸಾಧಕ ಕೂಟ ದಿಂದಾಗಿ ಉರುಳಿಸಲ್ಪಟ್ಟಿತು. ನಂತರ ಕಾಂಗ್ರೆಸ್ - ವಿರೋಧಿ ವೇದಿಕೆಯ ಮೇಲೆ ತಮ್ಮನ್ನು ಚುನಾಯಿಸಿದ ಜನತೆಯ ಆದೇಶವನ್ನು ಉಲ್ಲಂಘಿಸಿ ಈ ಭಿನ್ನ ಮತೀಯರು ಕಾಂಗ್ರೆಸ್(ಐ) ಬೆಂಬಲ ದಿಂದ ಸರಕಾರ ರಚಿಸಲು ಸಾಧ್ಯವಾಗಿದೆ.

ಈ ವಾರ ಬಿ.ಜೆ.ಪಿ., ವಿ.ಹೆಚ್.ಪಿ.ಯ ದುಷ್ಟಯೋಜನೆಗಳು ಜನರ ಮುಂದೆ ಬಂದಿವೆ. ಮುಂದಿನ ಚುನಾವಣೆ ನಡೆಯುವರೆಗೆ ಹಿಂದೂ ಭಾವನೆಗಳ ಲಾಭ ಗಿಟ್ಟಿಸುವ ಪ್ರಯತ್ನಗಳು ಇವು. ಎಲ್.ಕೆ. ಅಡ್ವಾಣಿಯವರು ರಥಯಾತ್ರೆ' ಹೋಗಿರದ 600 ಜಾಗಗಳಲ್ಲಿ ಸಭೆಗಳನ್ನುದ್ದೇಶಿಸಿ ಮಾತನಾಡುತ್ತಾರಂತೆ. ಇದು ರಾಜಕೀಯ ಲಾಭ ಪಡೆಯಲು ಧರ್ಮದ ಹೆಸರಿನಲ್ಲಿ ಕೋಮು ಭಾವನೆಗಳನ್ನು ಉದ್ರೇಕಿಸುವ ಯೋಜನೆಯಲ್ಲದೆ ಬೇರೇನೂ ಅಲ್ಲ.

ವಿ.ಹೆಚ್.ಪಿ.ಯ 'ಕರಸೇವಾ'ದ ಎರಡನೇ ಘಟ್ಟ ಡಿಸೆಂಬರ್ 6 ರ 'ಶುಭ ದಿನ'ದಂದು ಆರಂಭವಾಗಲಿದೆಯಂತೆ. ಪ್ರತೀ ಹಳ್ಳಿ, ಪಟ್ಟಣದಿಂದ ತಂಡ - ತಂಡಗಳಾಗಿ ಕರಸೇವಕರು ಅಯೋಧ್ಯೆಗೆ ಹೋಗಿ ಸಾಮೂಹಿಕ ಸತ್ಯಾಗ್ರಹ ನಡೆಸಿ. ಇದಕ್ಕೆ ನೇತೃತ್ವ ನೀಡುವವರು ಧಾರ್ಮಿಕ ಮುಖಂಡರು ಅಥವಾ ರಾಜಕೀಯ ಮುಖಂಡರು ಎಂದಿದ್ದಾರೆ ವಿ.ಹೆಚ್.ಪಿ ಮುಖಂಡ ಅಶೋಕ ಸಿಂಘಾಲ್.

ಈ ಕಾರ್ಯಕ್ರಮದ ಮೊದಲು ದೇಶಾದ್ಯಂತ "ಅಯೋಧ್ಯೆಯಲ್ಲಿ ನಡೆದ ಅಭೂತಪೂರ್ವ ದಮನ ಕ್ರಮ"ಗಳ ಬಗ್ಗೆ ಜನರಿಗೆ ತಿಳಿಸಲು ಸಭೆಗಳು ನಡೆಯುತ್ತವೆ. ಇದಕ್ಕಾಗಿ ಒಂದು ಲಕ್ಷಕ್ಕೂ ಹೆಚ್ಚು ಅಯೋಧ್ಯೆಯಲ್ಲಿ ಪೋಲೀಸ್ ಕಾರ್ಯಾಚರಣೆಯಲ್ಲಿ ಸತ್ತವರ ಅಸ್ಥಿಗಳಿರುವ ಅಸ್ಥಿ ಕಲಶಗಳನ್ನು ದೇಶಾದ್ಯಂತ ಕಳಿಸುವುದು ಮತ್ತಿತರ ಉದ್ರೇಕಕಾರಿ ಕಾರ್ಯಕ್ರಮಗಳನ್ನು ವಿ.ಹೆಚ್.ಪಿ. ಹಾಕಿಕೊಂಡಿದೆ.

ಈ ದುಷ್ಟ ಯೋಜನೆಗಳ ಮೂಲಕ ವಿ.ಹೆಚ್.ಪಿ., ಬಿ.ಜೆ.ಪಿ. ದೇಶದ ಜಾತ್ಯತೀತ ಸ್ವರೂಪವನ್ನು ನಾಶಮಾಡಲು, ತನ್ಮೂಲಕ ದೇಶದ ಐಕ್ಯತೆಗೆ ಗಂಭೀರ ಬೆದರಿಕೆಯೊಡ್ಡಲು ಕಟಿಬದ್ಧವಾಗಿರುವುದು ಸ್ಪಷ್ಟವಾಗುತ್ತದೆ.

ಇಂತಹ ಸನ್ನಿವೇಶದಲ್ಲಿ ತಮ್ಮ ಅಲ್ಪ ವೈಯಕ್ತಿಕ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ಭರದಲ್ಲಿ ದೇಶದ ರಾಜಕೀಯದ ಬಗ್ಗೆ ಸ್ವಲ್ಪವೂ ಯೋಚಿಸದ ಜನತಾದಳ

ಪುಟ 4ಕ್ಕೆ

## ರಾಜ್ಯ ಸಮಿತಿ ಪತ್ರಿಕಾ ಹೇಳಿಕೆ

ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆ ದಿನಾಂಕ 20-11-90 ರಂದು ಬೆಂಗಳೂರಿನಲ್ಲಿ ಸಭೆ ಸೇರಿ ದೇಶದ ಹಾಗೆಯೇ ರಾಜ್ಯದ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿತು. ಕೇಂದ್ರ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯ ಶ್ರೀ ಪಿ. ರಾಮಚಂದ್ರನ್ ರವರು ದೇಶದಲ್ಲಿ ಉದ್ಭವಿಸಿರುವ ಗಂಡಾಂತರಕಾರಿ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಅದಕ್ಕಾಗಿ ತುರ್ತು ರಾಜಕೀಯ ಪ್ರಚಾರ ಪ್ರಕ್ಷೋಭೆಯ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಸಲಹೆ ಮಾಡಿದರು.

### ಮಾನವ ಸರಪಳಿ:

ಆ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸಮಿತಿ ಡಿಸೆಂಬರ್ 6 ರಂದು ರಾಜ್ಯಾದ್ಯಂತ ಮಾನವ ಸರಪಳಿ ಕಾರ್ಯಕ್ರಮ ನಡೆಸಬೇಕೆಂದು, ಜನತಾ ದಳ, ಕಮ್ಯುನಿಸ್ಟ್ ಪಕ್ಷ, ರೈತ, ಕಾರ್ಮಿಕ, ವಿದ್ಯಾರ್ಥಿ ಯುವಜನತೆಯನ್ನೆಲ್ಲ ಆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದೂ ಅದಕ್ಕೆ ಪೂರ್ವಭಾವಿಯಾಗಿ ರಾಮಜನ್ಮಭೂಮಿ ಬಾಬರಿ ಮಸೀದಿಯ ಸಮಸ್ಯೆ, ಬಿ.ಜೆ.ಪಿ.ಯವರಿಂದ ರಾಜಕೀಯವನ್ನು ಧರ್ಮವನ್ನು ಒಂದಾಗಿಸುವ ಪ್ರಯತ್ನ, ವಿ.ಪಿ.ಸಿಂಗ್ ಸರ್ಕಾರವನ್ನು ಉರುಳಿಸುವುದರಲ್ಲಿ ಬಿ.ಜೆ.ಪಿ. ಕಾಂಗ್ರೆಸ್‌ಗಳ ಕೆಲವು ಕೈಗಾರಿಕೋದ್ಯಮಿಗಳ ಪಾತ್ರ, ಹಾಗೆಯೇ ಬೆಲೆಯೇರಿಕೆ, ಕೈಗಾರಿಕಾ ಬಿಕ್ಕಟ್ಟು, ಆರ್ಥಿಕ ಬಿಕ್ಕಟ್ಟುಗಳ ಕುರಿತು ತಿಳಿಸಿ ಹೇಳಿ ಜನತೆಯಲ್ಲಿ ಜಾಗ್ರತೆಯನ್ನುಂಟುಮಾಡಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಕೈಗೊಂಡಿರುವ ದೃಢ ನಿಲುಮೆಯನ್ನು ವಿವರಿಸಲು ಎಲ್ಲ ನಗರ ಪಟ್ಟಣಗಳಲ್ಲಿ ನೂರಾರು ಸಭೆಗಳನ್ನು ನಡೆಸಬೇಕೆಂದು ಮಾನವ ಸರಪಳಿ ಕಾರ್ಯಕ್ರಮಕ್ಕೆ ಜನ ಬೆಂಬಲ ಪಡೆಯಬೇಕೆಂದು ನಿರ್ಧರಿಸಿತು.

ಪುಟ 3ಕ್ಕೆ

# ಡಿಸೆಂಬರ್ 6: ಕರ್ನಾಟಕದಲ್ಲಿ ಮಾನವ ಸರಪಳಿ

### ರಾಜ್ಯ ಸಮಿತಿ ಕರೆ

ಬಿಜೆಪಿ, ವಿಶ್ವ ಹಿಂದೂ ಪರಿಷತ್, ಭಜರಂಗ ಬಲಿ ಮತ್ತು ಆರ್‌ಎಸ್‌ಎಸ್ ಮತೀಯ ಶಕ್ತಿಗಳು ನವಂಬರ್ 30 ರಂದು, ಅಯೋಧ್ಯೆಯಲ್ಲಿ ನಡೆಸಬೇಕೆಂದಿದ್ದ ಕರ ಸೇವೆ ಕಾರ್ಯಕ್ರಮ ವಿಫಲಗೊಂಡ ಹಿನ್ನೆಲೆಯಲ್ಲಿ, ಕರಸೇವೆಯ ಎರಡನೇ ಹಂತದ ಕಾರ್ಯಕ್ರಮವನ್ನು ಪ್ರಕಟಿಸಿದ್ದಾರೆ.

ಮತೀಯ ಶಕ್ತಿಗಳ ಕರಸೇವೆಯನ್ನು ಮುಂದುವರಿಸುವ ನಿರ್ಣಯ ಅತ್ಯಂತ ಅಪಾಯಕಾರಿ. ಹಿಂದೂ, ಮುಸ್ಲಿಮ್, ಸಿಖ್‌ರಲ್ಲಿಯ ಮೂಲಭೂತವಾದಿಗಳು ದೇಶದ ಐಕ್ಯತೆಗೆ, ಜಾತೀಯ ಸೌಹಾರ್ದತೆಗೆ ಗಂಡಾಂತರವನ್ನು ತಂದೊಡ್ಡಿದ್ದಾರೆ. ನಮ್ಮ ಎಲ್ಲ ಶಕ್ತಿಯನ್ನು ಕ್ರೋಢೀಕರಿಸಿ ಅಂಥ ವಿನಾಶಕಾರಿ ಶಕ್ತಿಯನ್ನು ನಾಶ ಮಾಡಬೇಕು. ಅದಕ್ಕಾಗಿ ರಾಮಜನ್ಮಭೂಮಿ-ಬಾಬ್ರಿಮಸೀದಿ ಸಮಸ್ಯೆಯ ಕುರಿತು, ಅದಕ್ಕೆ ಪರಿಹಾರದ ಕುರಿತು ಜನರಲ್ಲಿ ತಿಳುವಳಿಕೆ ಉಂಟು ಮಾಡಬೇಕು. ಜಾತೀಯ ಸೌಹಾರ್ದತೆಗಾಗಿ ಪ್ರಚಾರ ಪ್ರಕ್ಷೋಭೆ ಮಾಡಬೇಕು. ಕೊನೆಯಲ್ಲಿ, ಗಣ್ಯಮಾನ್ಯರ ಮಾನವ ಸರಪಳಿಯಿಂದ ಅಂಥ ದೇಶದ್ರೋಹಿ, ಜನದ್ರೋಹಿ ಶಕ್ತಿಗಳನ್ನು ಬಹಿಷ್ಕಾರ ಹಾಕಗೊಳಿಸಬೇಕು.

ಇಂದು ಅಪಾಯದ ಅಂಚನ್ನು ತಟ್ಟಿದ ರಾಜಕೀಯ ಪರಿಸ್ಥಿತಿಯಲ್ಲಿ, ಈ ಮಹಾಧ್ಯೇಯ ಸಾಧನೆಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇತರ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೊಡನೆ ಕೂಡಿಕೊಂಡು ಪರಿಣಾಮಕಾರಿ ಚಳುವಳಿ ನಡೆಸುವುದು ಅವಶ್ಯಕ.

ದಿ. 20-11-90 ರಂದು ಸೇರಿದ ಸಿ.ಪಿ.ಐ(ಎಂ) ಪಕ್ಷದ ರಾಜ್ಯ ಸಮಿತಿ ಸಭೆ ಮತೀಯ ವಿಷಜಂತುಗಳನ್ನು ಬಯಲಿಗೆಳೆದು ಜನರಿಂದ ದೂರೀಕರಿಸುವ ಉದ್ದೇಶದಿಂದ ಎರಡನೇ ಹಂತದ ಕರ ಸೇವೆ ಪ್ರಾರಂಭವಾಗುವ ದಿನ ಅಂದರೆ ಡಿಸೆಂಬರ 6ರಂದು ರಾಜ್ಯಾದ್ಯಂತ ಮಾನವ ಸರಪಳಿ ನಿರ್ಮಿಸಬೇಕೆಂದು ನಿರ್ಣಯಿಸಿದೆ. ಈ ಕಾರ್ಯಕ್ರಮದಲ್ಲಿ, ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನತೆ, ವಿಜ್ಞಾನಿಗಳು, ವಿದ್ವಾಂಸರುಗಳನ್ನು ಎಲ್ಲಾ ಜಾತಿ ಮತದವರನ್ನು ಸೇರ್ಪಡಿಸಬೇಕೆಂದು ಕರೆ ನೀಡಿದೆ. ಈ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಂತೆ ಮಾಡಲು, ರಾಮನ ಹೆಸರಿನಲ್ಲಿ, ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಬಿ.ಜೆ.ಪಿ. ವಿ.ಹೆಚ್.ಪಿ. ಆರ್.ಎಸ್.ಎಸ್. ಮುಂತಾದ ಮತೀಯ ಶಕ್ತಿಗಳ ಅಪಪ್ರಚಾರಕ್ಕೆ ಬಲಿಯಾಗುತ್ತಿರುವ ನಿರಪರಾಧಿ ಜನತೆಯಲ್ಲಿ ನಿಜವಾದ ಪರಿಸ್ಥಿತಿಯನ್ನು ವಿವರಿಸಿ ಜಾತೀಯ ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗುವಂತೆ ಮಾಡಲು ನಿರಂತರ ಪ್ರಚಾರ ನಡೆಸಬೇಕೆಂದೂ ನಿರ್ಣಯಿಸಿದೆ.

ರಾಮಮಂದಿರ ನಿರ್ಮಿಸಲಿಕ್ಕೆ ಯಾರದೂ ವಿರೋಧವಿಲ್ಲೆಂದೂ, ಅಸ್ತಿತ್ವದಲ್ಲಿರುವ ಬಾಬ್ರಿಮಸೀದಿಯನ್ನು ಕೆಡವಿ, ಆ ಸ್ಥಳದಲ್ಲಿ ಮಂದಿರ ಕಟ್ಟುವುದು ಮಾತ್ರ ಸರಿಯಲ್ಲೆಂದೂ, ಚರ್ಚೆ ಮೂಲಕ ಪ್ರಶ್ನೆ ಬಗೆಹರಿಯದಿದ್ದರೆ, ಕೋರ್ಟಿನ ನಿರ್ಣಯವನ್ನು ಒಪ್ಪಿಕೊಳ್ಳುವುದು ಹಿಂದೂ ಮುಸಲ್ಮಾನ ಕರ್ತವ್ಯವೆಂದೂ, ರಾಜಕೀಯವನ್ನೂ ಧರ್ಮವನ್ನೂ ಸೇರಿಸಬಾರದೆಂದೂ, ಧರ್ಮ ವ್ಯಕ್ತಿಗತ ಪ್ರಶ್ನೆಯಾಗಿರುವುದರಿಂದ ಅದನ್ನು ಪ್ರತ್ಯೇಕಿಸಬೇಕೆಂದೂ, ಜನರಿಗೆ ತಿಳಿಸಿ ಹೇಳಬೇಕು. ಮಸ್‌ಜೀದನ್ನು ಐಕ್ಯತೆ ಸೌಹಾರ್ದತೆ ಮುರಿದು, ಪಂಜಾಬ, ಕಾಶ್ಮೀರ, ಅಸ್ಸಾಮ್‌ಗಳಲ್ಲಿ, ಪ್ರತ್ಯೇಕತಾವಾದಿಗಳ ಅಪಾಯ ತೀವ್ರಗೊಳ್ಳಲು ಸಹಾಯಕವಾಗುವದೆಂದೂ, ಶತ್ರುಗಳಿಗೆ ಪ್ರೋತ್ಸಾಹ ನೀಡುವುದೆಂದೂ ಜನರಿಗೆ ವಿವರಿಸಿ ಸಹಾನುಭೂತಿದಾರರಿಗೆ ಸಲಹೆ ನೀಡಿದೆ. ಇಂಥ ಪ್ರಚಾರ-ಪ್ರಕ್ಷೋಭೆ ಮತೀಯ ಶಕ್ತಿಗಳ ವಿರುದ್ಧ ರಾಜಕೀಯ ಹೋರಾಟವಾಗಿ ಪರಿವರ್ತನೆಗೊಂಡರೆ ಮಾತ್ರ ಜನರ ತಪ್ಪು ತಿಳುವಳಿಕೆಯಲ್ಲಿ ಬದಲಾವಣೆ ತರಲು ಸಾಧ್ಯ.

ದಿ. 20 ರಂದು ಸೇರಿದ ರಾಜ್ಯಸಮಿತಿಗೆ ಸಿ.ಪಿ.ಐ(ಎಂ) ಕೇಂದ್ರ ಸಮಿತಿಯ ಕಾರ್ಯದರ್ಶಿಗಳಾದ ಪಿ. ರಾಮಚಂದ್ರನ್ ಅವರು ಇಂದಿನ ರಾಜಕೀಯ ಪರಿಸ್ಥಿತಿಯನ್ನೂ, ಕೇಂದ್ರ ಸಮಿತಿಯ ನಿರ್ಣಯವನ್ನೂ ವಿವರಿಸಿದರು.

ರಾಮಜನ್ಮಭೂಮಿ-ಬಾಬ್ರಿಮಸ್‌ಜೀದ ಸಮಸ್ಯೆ, ಬಿಜೆಪಿಯ ರಥಯಾತ್ರೆ, ಬಿಜೆಪಿ, ವಿ.ಹೆಚ್.ಪಿ. ಯವರ ಕರಸೇವೆ ಹಾಗೆಯೇ ಪಂಜಾಬ, ಅಸ್ಸಾಮ್, ಕಾಶ್ಮೀರಗಳಲ್ಲಿಯ ಪರಿಸ್ಥಿತಿ ದೇಶದಲ್ಲಿ, ಗಂಡಾಂತರ ಪರಿಸ್ಥಿತಿಯನ್ನುಂಟು ಮಾಡಿದೆ. ಕಳೆದೆರಡು ತಿಂಗಳಲ್ಲಿ, ದೇಶದಲ್ಲಿ, ಸಂಭವಿಸಿದ ಜಾತಿಯ ದಂಗೆ, ಛಿದ್ರಕಾರಿ ಶಕ್ತಿಗಳ ಚಟುವಟಿಕೆಗಳಿಂದಾಗಿ ನೂರಾರು ಜನ ಮೃತಪಟ್ಟಿದ್ದಾರೆ. ನವಂಬರ್ 7 ರಂದು ವಿ.ಪಿ.ಸಿಂಗ್ ಸರ್ಕಾರದ ವಿಶ್ವಾಸ ಮತ ಬಿದ್ದು ಹೋಗಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ. ಇಂಥ ಪರಿಸ್ಥಿತಿಯಲ್ಲಿ ಸಿ.ಪಿ.ಐ(ಎಂ) ಮತ್ತು ಎಡಪಕ್ಷಗಳು

ಪುಟ 3ಕ್ಕೆ

# ಆಹಾರ ಉತ್ಪಾದನೆಯ ಸಮಸ್ಯೆ ಪರಿಹಾರಕ್ಕೆ ಅದೇ 'ಹಸಿರು ಕ್ರಾಂತಿ' ಹಳಸಲು ತಂತ್ರ

ಹಿಂದಿನ ರಾಷ್ಟ್ರೀಯ ರಂಗ ಸರ್ಕಾರದಲ್ಲಿ ಕೃಷಿ ಖಾತೆ ದೇವಿಲಾಲರ ನಾಯಕತ್ವದಲ್ಲಿದ್ದಾಗ ಹನುಮಂತರಾವ್ ಸಮಿತಿ ಮಂಡಿಸಿದ ಶಿಫಾರಸುಗಳನ್ನು ಉಳಿದ ಎರಡು ಸಮಿತಿಗಳ ಶಿಫಾರಸುಗಳ ಆಧಾರದ ಮೇಲೆ ಪೂರ್ತಿಯಾಗಿ ಭೂಮಾಲಕ ಪರ ನೀತಿಯಾಗಿ ಬದಲಾಯಿಸಲಾಯಿತು ಎಂದು 'ಪಕ್ಷರಂಗ' ದಲ್ಲಿ ಈಗಾಗಲೇ ಓದಿರುವಿರಿ. ಲಾಭದಾಯಕ ಬೆಲೆಗೆ ಸಂಬಂಧಪಟ್ಟಂತೆ ಇದು ಹೇಗೆ ಕೆಲಸ ಮಾಡಿದೆ ಎಂದೂ ಓದಿರುವಿರಿ. ಇಲ್ಲಿ, ಆಹಾರ ಉತ್ಪಾದನೆ ಹೆಚ್ಚಳದ ಪ್ರಯತ್ನದಲ್ಲೂ ಭೂಮಾಲಕ ಪರ ಹಿತಾಸಕ್ತಿ ಹೇಗೆ ಕೆಲಸ ಮಾಡುತ್ತಿದೆ– ಓದಿ. ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಪ್ರಕಟವಾದ ಕಾಂ. ಪಿ.ಕೆ. ಚಂದನ್‌ರ ಲೇಖನದ ಸಂಗ್ರಹಾನುವಾದ ಇದು.

ನಮ್ಮ ದೇಶದಲ್ಲಿ ಸಿಗುವ ನೆಲ ಹಾಗೂ ನೀರಿನ ಸಂಪನ್ಮೂಲಗಳ ಪೂರ್ಣ ಬಳಕೆಯ ಅಗತ್ಯವಿದೆ ಎಂದು ಹಿಂದಿನ ರಾಷ್ಟ್ರೀಯರಂಗ ಸರ್ಕಾರ ನೇಮಿಸಿದ ಕೃಷಿ ಬೆಲೆ ಹಾಗೂ ನೀತಿಗಳ ಕುರಿತ ಉಚ್ಚ ಮಟ್ಟದ ಸಮಿತಿ ಹೇಳಿದೆ. ಇದು ಖಂಡಿತವಾಗಿಯೂ ಹೌದು.

ದೇಶದ 65 ಶೇಕಡಾ ಜನ ಅವಲಂಬಿಸಿರುವ ಕೃಷಿ ವಲಯ ದೇಶದ ಒಟ್ಟು ಉತ್ಪಾದನೆಗೆ ನೀಡುವ ಪಾಲು 1950-51 ರಲ್ಲಿ 59 ಶೇಕಡಾ ಇದ್ದದ್ದು 1988-89 ರಲ್ಲಿ 32 ಶೇಕಡಾಕ್ಕೆ ಇಳಿದಿದೆ. ಈ ಅವಧಿಯಲ್ಲಿ ಕೃಷಿ ಉತ್ಪಾದನೆ ಮೂರು ಪಟ್ಟು ಹೆಚ್ಚಿದ್ದರೂ 31 ವರ್ಷ ನಾವು ಆಹಾರ ಧಾನ್ಯ ಆಮದು ಮಾಡಬೇಕಾಯಿತು. ನಾಲ್ಕು ವರ್ಷಗಳಷ್ಟೇ ಈ ಆಮದು ಮಾಡಿರಲಿಲ್ಲ. ಈ ಸ್ವಾವಲಂಬನೆ ಕೂಡಾ ಕನಿಷ್ಠ ಬದುಕಿಗೆ ಅವಶ್ಯಕವಾದ ಆಹಾರ ಮಟ್ಟದಲ್ಲಿನಷ್ಟೆ ಉತ್ಪಾದನೆ.

ಅದೇ ರೀತಿ ಉಳುಮೆಗೆ ಒಳಪಡುವ ನೆಲವನ್ನು ಇನ್ನೂ 30% ಹೆಚ್ಚಿಸಲು ಸಾಧ್ಯ ಎಂದು ಈ ಸಮಿತಿ ಹೇಳಿದೆ.

ನೀರಾವರಿ ಸಾಮರ್ಥ್ಯ 17 8 ಕೋಟಿ ಹೆಕ್ಟೇರುಗಳಷ್ಟು ಇದ್ದರೂ ಇದುವರೆಗೆ ಬಳಸಿರುವುದು 79ಕೋಟಿಹೆಕ್ಟೇರುಗಳಷ್ಟೆ.

ನಮ್ಮ ಕೃಷಿ ಸಂಪನ್ಮೂಲಗಳ ಪೂರ್ಣ ಬಳಕೆಮಾಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈಗ ನಮ್ಮೆದುರು ಇರುವ ನಿರ್ಣಾಯಕ ಪ್ರಶ್ನೆಗಳೆಂದರೆ ಇದುವರೆಗೆ ಪೂರ್ಣ ಬಳಕೆಯಾಗದಿರಲು ಕಾರಣವೇನು? ಗ್ರಾಮೀಣ ಬಡವರಿಗೆ ಈ ಸಂಪನ್ಮೂಲಗಳು ಸುಲಭವಾಗಿ ದೊರೆಯುವಂತಾಗಿ ಆ ಮೂಲಕ ಉತ್ಪಾದನೆ ಈಗಿನದಕ್ಕಿಂತ ಹೆಚ್ಚು ನ್ಯಾಯಯುತವಾಗಿ ಹಂಚಲ್ಪಡುವಂತಾಗಲು ಏನು ಮಾಡಬೇಕು?

ಮೇಲೆ ಹೇಳಿದ ಉಚ್ಚ ಮಟ್ಟದ (ಭಾನುಪ್ರತಾಪ್ ಸಿಂಗ್ ಅಧ್ಯಕ್ಷತೆಯ) ಸಮಿತಿಯಪ್ರಕಾರ ಇದುವರೆಗೆ ಸರಕಾರಕ್ಕೆ ಕೃಷಿ ನೀತಿಯೆಂಬುದೇ ಇರಲಿಲ್ಲ. ಇದು ನಿಜವಲ್ಲ. ಒಂದು ಅಧಿಕೃತ 'ಕೃಷಿ ನೀತಿ ನಿರ್ಣಯ' ಎಂಬುದು ಇರದಿದ್ದರೂ ಈ ಸಮಿತಿಯನ್ನು ನೇಮಿಸಿದ ರಾಷ್ಟ್ರೀಯ ರಂಗ ಸರ್ಕಾರದಂತೆ ಹಿಂದಿನ ಸರಕಾರಗಳೂ ಬೂರ್ಜ್ವಾ – ಭೂಮಾಲಕ ವರ್ಗಗಳನ್ನು ಪ್ರತಿನಿಧಿಸುತ್ತಿದ್ದುದರಿಂದ ತೀವ್ರ ಆಹಾರ ಅಭಾವ ಹಾಗೂ ತೀವ್ರ ಆಹಾರ ಆಮದಿನ ಗಂಭೀರ ಸ್ಥಿತಿ ಎದುರಿಸಬೇಕಾಗಿ ಬಂದ ಹಿಂದಿನ ಕಾಂಗ್ರೆಸ್ ಸರಕಾರಗಳು ಈ ಬಗ್ಗೆ ಸೂಕ್ತ ನೀತಿ ಅಂಗೀಕರಿಸಲೇಬೇಕಾಗಿ ಬಂದಿತ್ತು.

ಆ ಸರಕಾರಗಳು ಅನುಸರಿಸಿದ ಮಾರ್ಗವೆಂದರೆ ಪಾಳೆಯಗಾರಿ ಅರೆ ಪಾಳೆಯಗಾರಿ ಭೂಸಂಬಂಧಗಳನ್ನು ಕೊನೆಗೊಳಿಸದೆ, ಗ್ರಾಮೀಣ ಜೀವನದ ಮೇಲೆ ಭೂಮಾಲಕರ ಪ್ರಾಬಲ್ಯವನ್ನು ಕೊನೆಗೊಳಿಸದೆ ಕೃಷಿ ಉತ್ಪಾದನೆಯ ತಂತ್ರ ಜ್ಞಾನವನ್ನಷ್ಟೇ ಸುಧಾರಿಸುವ ಮಾರ್ಗ.

ಈ ಮಾರ್ಗ ಅನುಸರಿಸಿದುದರಿಂದ ಉತ್ಪಾದನೆಯೇನೋ ಹೆಚ್ಚಿತು ಆದರೆ ಅಂತರವೂ ಅಷ್ಟೇ ಹೆಚ್ಚಿತು. ಕೇವಲ ಹತ್ತು ಶೇಕಡಾ ಭೂಹಿಡುವಳಿದಾರರು ಇದರಿಂದ ಸ್ಥಿತಿವಂತರಾದರೆ 75 ಶೇಕಡಾಕ್ಕಿಂತಲೂ ಹೆಚ್ಚು ಸಣ್ಣ ಹಾಗೂ ಅತಿ ಸಣ್ಣ ಹಿಡುವಳಿದಾರರ ಸ್ಥಿತಿ ಇನ್ನಷ್ಟು ಹದಗೆಟ್ಟಿತು ಒಂದೆಡೆ ಆ ಹತ್ತು ಶೇಕಡಾ ಹಿಡುವಳಿದಾರರು ಮಿಗುತೆ ಉತ್ಪಾದಕರಾಗಿ ಆಹಾರ ಮಾರು ಕಟ್ಟೆಯ ಬಹು ಪಾಲು ಪಡೆದರೆ, ಟ್ರಾಕ್ಟರುಗಳು ಪಂಪ್ ಸೆಟ್ಟುಗಳ ಒಡೆಯರಾದರೆ ಬಹುಪಾಲು ರೈತರ ಬಡತನ, ನಿರುದ್ಯೋಗ, ಸಾಲ ಹೊರೆ ಹೆಚ್ಚುತ್ತಾ ಹೋಯಿತು ಅವರ ಮೇಲಿನ ಸಾಮಾಜಿಕ ಅತ್ಯಾಚಾರಗಳು ಕೂಡಾ.

ಹೀಗೆ ಸಾಧಿಸಿದ ಕೃಷಿ ಉತ್ಪಾದನಾ ದರ ಕೂಡಾ ಬಹಳದಿನ ಉಳಿಯಲಿಲ್ಲ. ಅದೂ ನಿಧಾನ ಗತಿಗಿಳಿಯಲಾರಂಭಿಸಿದೆ. ಮುಂದಿನ 15 ವರ್ಷಗಳಲ್ಲಿ ಉತ್ಪಾದನೆ ದ್ವಿಗುಣಗೊಳಿಸದಿದ್ದರೆ ವ್ಯಾಪಕ ಆಹಾರ ಅಭಾವದ ಭಯ ಆವರಿಸುತ್ತಿದೆ.

ಅಂದರೆ ಈಗ ಅಗತ್ಯವಿರುವುದು ಸಾಮಾಜಿಕ – ಆರ್ಥಿಕ ರಚನೆಯಲ್ಲಿ ಬದಲಾವಣೆ ತರಬಲ್ಲ, ಭೂಮಾಲಕರ ಪ್ರಾಬಲ್ಯ ತಗ್ಗಿಸಬಲ್ಲ, ಇಡೀ ದೇಶದಲ್ಲಿ ಎಲ್ಲಾ, ಸಣ್ಣ, ದೊಡ್ಡ ರೈತರಿಗೆ ಹೊಸ ತಂತ್ರಜ್ಞಾನ, ಅಗತ್ಯ ಸಾಮಗ್ರಿಗಳ ಸಾಲಗಳ ಸೌಲಭ್ಯ ದೊರಕಿಸಬಲ್ಲ ಒಂದು ನೀತಿ. ಒಂದು ಮಾರ್ಗ. ಇದು ಉತ್ಪಾದನೆಯಲ್ಲಿ ಸರ್ವ ವ್ಯಾಪಕ ಹೆಚ್ಚಳ ತಂದು ಬಡತನ, ನಿರುದ್ಯೋಗ, ತಾರತಮ್ಯಗಳನ್ನು ನಿವಾರಿಸುವಂತಿರಬೇಕು.

ಆದರೆ ಭಾನುಪ್ರತಾಪ್ ಸಿಂಗ್‌ರ ಅಧ್ಯಕ್ಷತೆಯ ಉಚ್ಚ ಮಟ್ಟದ ಸಮಿತಿ ಹಳ್ಳಿಗಳಲ್ಲಿಯಾವುದೇ ರೀತಿಯ ಶೋಷಣೆ, ಪ್ರಾಬಲ್ಯ ಇದೆ ಎಂಬುದನ್ನೇ ನಿರಾಕರಿಸುತ್ತದೆ. ಬಡ ಹಳ್ಳಿಗ ತನ್ನ ಪ್ರತ್ಯೇಕತೆ ಕಳೆದು, ಸಂಪನ್ಮೂಲಗಳನ್ನು ಪಡೆದು, ಜೀವನ ವಿಧಾನ ಸುಧಾರಿಸಿ ಕೊಂಡು, ತನ್ನ ಆರ್ಥಿಕ ಸ್ಥಿತಿ ಸುಧಾರಿಸಲು ದೃಢ ಪ್ರಯತ್ನ ಮಾಡಿದರೆ ಸಾಕು ಆತನ ಬಡತನ ನಿವಾರಣೆಯಾಗುತ್ತದೆ ಇದು ಈ ಉಚ್ಚ ಸಮಿತಿಯ ಅಭಿಪ್ರಾಯ. ಬಡ ಹಳ್ಳಿಗ ಬಡವನಾಗಿ ಉಳಿಯಬಾರದು. ಆಗ ಬಡತನವೂ ಉಳಿಯುವುದಿಲ್ಲ!

ಭೂಮಿಯ ಮರುಹಂಚಿಕೆ ಉತ್ಪಾದನೆ ಹೆಚ್ಚಳಕ್ಕೆ ಯಾವುದೇ ರೀತಿಯಲ್ಲಿ ಪ್ರಯೋಜನವಾಗಲಾರದು ಎನ್ನುತ್ತದೆ ಈ ಉಚ್ಚ ಸಮಿತಿ. ಏಕೆ? ಏಕೆಂದರೆ ಯಾವುದೇ ತರ್ಕಬದ್ಧ ರೀತಿಯಲ್ಲಿ ಹಂಚಲು ಭೂಮಿಯೇ ಇಲ್ಲ ಎಂದು ಅದರ ಅಭಿಪ್ರಾಯ. ಅಂದರೆ ಭೂಮಿತಿ ಕಾನೂನುಗಳಲ್ಲಿ ಬೇಕೆಂದೇ ಇಟ್ಟ ತೂತುಗಳ ಲಾಭ ಪಡೆದು ಎಷ್ಟೊಂದು ಪ್ರಮಾಣದಲ್ಲಿ ನಿಜವಾದ ಮಿಗುತೆಭೂಮಿಯನ್ನು ಭೂಮಾಲಕರು ಉಳಿಸಿಕೊಂಡಿದ್ದಾರೆ ಎಂಬ ವಾಸ್ತವಾಂಶವನ್ನು ಈ ಸಮಿತಿ ಗಮನಿಸಲು ಸಿದ್ಧವಿಲ್ಲ. ಭೂಮಿಯ ಇತರ ಕೃಷಿ ಸಂಪನ್ಮೂಲಗಳ ನ್ಯಾಯಯುತ ವಿತರಣೆಗಾಗಿ ಭೂಮಿತಿ ಕಾನೂನುಗಳ ಮರು ವಿಮರ್ಶೆ ನಡೆಸುವುದಾಗಿ, ಬೇಸಾಯ ವರ್ಗಾವಣೆ ಮೂಲಕ ಮರೆಮಾಚಿದ ಮಿಗುತೆ ಭೂಮಿಯನ್ನು ಕಂಡು ಹಿಡಿಯುವುದಾಗಿ ಹರಿಜನ-ಗಿರಿಜನರಿಗೆ ಮಿಗುತೆ ಭೂಮಿ ಹಂಚುವುದಾಗಿ ರಾಷ್ಟ್ರೀಯ ರಂಗ ಸರ್ಕಾರ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಇತ್ತಿರುವ ಆಶ್ವಾಸನೆಯ ಹಿಂದಿನ ಸಂಗತಿಯನ್ನೇ ಅದೇ ರಾಷ್ಟ್ರೀಯ ರಂಗದ ಸರ್ಕಾರ ನೇಮಿಸಿದ ಈ ಉಚ್ಚ ಮಟ್ಟದ ಸಮಿತಿ ಒಪ್ಪುವಂತೆ ಕಾಣುತ್ತಿಲ್ಲ. ಬದಲಾಗಿ ಭೂಮಿತಿಯನ್ನು ಇನ್ನಷ್ಟು ಇಳಿಸಬಹುದೆಂಬ ಭಯ ಕೃಷಿ ವಲಯದಲ್ಲಿ ಅಭದ್ರತೆ, ಅಸ್ಥಿರತೆ ಉಂಟು ಮಾಡಿರುವುದರಿಂದ ಅಂತಹ ಮಾತುಗಳನ್ನು ಆಡಬಾರದು ಎಂದು ಅದು ಉಪದೇಶಿಸುತ್ತದೆ. ವಾಸ್ತವವಾಗಿ ಈಗಿನ ಭೂಮಿತಿಗಳನ್ನು ಮತ್ತಷ್ಟು ದುರ್ಬಲಗೊಳಿಸಿ, ಉಳುಮೆಯೋಗ್ಯ ಬಂಜರು ಭೂಮಿಗಳನ್ನು ವನೀಕರಣ,ವಾಣಿಜ್ಯ ಪ್ಲಾಂಟೇಶನ್‌ಗಳಿಗಾಗಿ ಕೈಗಾರಿಕಾ ಗುಂಪುಗಳಿಗೆ ನೀಡಬೇಕು. ಇಂತಹ ಭೂಮಿಯನ್ನು ಅಭಿವೃದ್ಧಿ ಪಡಿಸಿದ ನಂತರ ಅವುಗಳಲ್ಲಿ 50% ಅಷ್ಟಕ್ಕೆ ಯಾವುದೇ ಭೂಮಿತಿ ಶಾಸನ ಅನ್ವಯವಾಗದಂತೆ ಮಾಡಬೇಕು ಎಂದು ಅದು ಬಯಸುತ್ತದೆ!

ಇನ್ನೂ ಕನಿಷ್ಠ ಕೂಲಿ ಬಗ್ಗೆ ಅದರ ಅಭಿಪ್ರಾಯ ನೋಡಿ– "ಇಡೀ ಕೃಷಿ ವಲಯ ತರ್ಕಬದ್ಧ ಕೂಲಿ ನೀಡುವ ಸಾಮರ್ಥ್ಯಪಡೆದಾಗ ಮಾತ್ರವೇ, ಕೂಲಿಯ ಪೂರೈಕೆ ಬೇಡಿಕೆಗಿಂತ ಕಡಿಮೆ ಅಥವಾ ಅದಕ್ಕೆ ಸಮಾನವಾಗಿದ್ದರೆ ಮಾತ್ರವೇ ಕನಿಷ್ಠ ಕೂಲಿಯ ಶಾಸನ ಜ್ಯಾರಿ ಮಾಡಲು ಸಾಧ್ಯ". ಅಂದರೆ ಅತ್ಯಂತ ಕೆಳಮಟ್ಟದಲ್ಲಿ ನಿಗದಿ ಪಡಿಸಿರುವ ಕನಿಷ್ಠ ಕೂಲಿಯನ್ನು ಕೂಡಾ ಭೂಮಾಲಕ ಗುಂಪು ಸಿದ್ಧವಿಲ್ಲ. ತನ್ನ ಉತ್ಪನ್ನಗಳಿಗೆ ಬೆಲೆ ಹೆಚ್ಚಿಸಿದರೂ ತನ್ನ ಲಾಭಾಂಶದಿಂದ ಲಾದರೂ ಕನಿಷ್ಠ ಕೂಲಿ ನೀಡಲು ಸಿದ್ಧವಿಲ್ಲ. ಏಕೆಂದರೆ ಹಿಂದಿಯಷ್ಟು ಉದ್ಯೋಗಾವಕಾಶಗಳಿಗೆ ಅಸಂಖ್ಯ ನಿರುದ್ಯೋಗಿ ಕೈಗಳು ಚಾಚಿರುವಾಗ ಕೃಷಿ ಕೂಲಿಗಾರರ ಚೌಕಾಶಿ ಸಾಮರ್ಥ್ಯ ದುರ್ಬಲವಾಗಿರುತ್ತದೆ.

ಹೀಗೆ ಭೂಮಿಯ ಮರು ಹಂಚಿಕೆ ಹಾಗೂ ಕನಿಷ್ಠ ಕೂಲಿ ಸಾಧ್ಯವಿಲ್ಲ ಎನ್ನುವ ಈ ಉಚ್ಚಮಟ್ಟದ ಸಮಿತಿ ಭಾರತೀಯ ಕೃಷಿಯ ಸಾಮರ್ಥ್ಯದ ಪೂರ್ಣ ಬಳಕೆಗೆ ತೋರುವ ದಾರಿ ಯಾವುದು? ಬಂಡವಾಳದ ಅಭಾವವೇ ನಮ್ಮ ಕೃಷಿ ಹಿಂದುಳಿಯಲು ಏಕೈಕ ಕಾರಣ ಎನ್ನುತ್ತದೆ ಈ ಸಮಿತಿ. ಆದ್ದರಿಂದ ಹೆಚ್ಚಿನ ಬೆಲೆಗಳ ಮೂಲಕ ದೊರೆತ ಲಾಭವನ್ನು ರೈತ ಬಂಡವಾಳವಾಗಿ ತೊಡಗಿಸುವಂತಾಗಬೇಕು. ಯೋಜನೆಯಲ್ಲಿ ಕೃಷಿಗೆ ಕನಿಷ್ಠ 50% ಬಂಡವಾಳ ಮೀಸಲಿಡಬೇಕು. ಇದು ಇನ್ನಷ್ಟು ಉದ್ಯೋಗಾವಕಾಶ ನಿರ್ಮಿಸಬಲ್ಲದು. ಇದರಿಂದ ನಿರುದ್ಯೋಗ, ಬಡತನ ನಿವಾರಣೆಯಾಗುತ್ತದೆ! ಇದು ಈ ಉಚ್ಚ ಸಮಿತಿ ನಮ್ಮ ಕೃಷಿ ಸಮಸ್ಯೆಗೆ ಸೂಚಿಸುವ ರಾಮಬಾಣ. ಆದರೆ ಇದು ಕೃಷಿ ವಲಯದಲ್ಲಿ ತೀವ್ರ ಅಸಮಾನತೆ ಸೃಷ್ಟಿಸಿದ 'ಹಸಿರು ಕ್ರಾಂತಿ' ತಂತ್ರದ ಚರ್ವಿತ ಚರ್ವಣ ಸುಧಾರಿತ ರೂಪವಷ್ಟೆ. ವಾಸ್ತವವಾಗಿ ಬೇಕಾಗಿರುವುದು ಈಚರ್ವಿತ ಚರ್ವಣದ ಸ್ಥಾನದಲ್ಲಿ ಬೇರೊಂದು ನೀತಿ, ಅದರ ಸುಧಾರಣೆಯಲ್ಲ.

# ಪತ್ರಕರ್ತರೋ ಕರ ಸೇವಕರೋ?

"ಅದೊಂದು ದೈವೀ ಚಮತ್ಕಾರವೇ ಭಜರಂಗ ಬಲಿಯ ಈ ಸೇನೆ ಜನ್ಮ ಭೂಮಿಯ ಹತ್ತಿರ ಬರುತ್ತಿದ್ದಂತಲೇ ಅಲ್ಲಿಯ ವಿಶಾಲ ಕಾಯ ಕಬ್ಬಿಣದ ದ್ವಾರ ತಂತಾನೇ ತೆರೆಯಿತು ರಾಮ ದೇವರೇ ಸ್ವತಃ ತನ್ನ ಭಕ್ತರ ಸ್ವಾಗತಕ್ಕೆ ಆತುರತೆಯಿಂದ ಕಾದಿದ್ದರೋಎಂಬಂತೆ".

ಇದು ಯಾವುದೇ ಹರಿಕಥೆಯ ಪ್ರಸಂಗವಲ್ಲ. ಅಜ್ಜಿ ಮೊಮ್ಮಕ್ಕಳಿಗೆ ಹೇಳುತ್ತಿದ್ದ ಅದ್ಭುತ ಕಥೆಯ ಭಾಗವಲ್ಲ. ನವಂಬರ್ 1 ರಂದು ಕಾನಪುರದ "ದೈನಿಕ ಜಾಗರಣ" ಪತ್ರಿಕೆಯಲ್ಲಿ ಪ್ರಕಟವಾದ ಒಂದುಸುದ್ದಿ! ಅಕ್ಟೋಬರ್ 30ರಿಂದ ನವಂಬರ್ 5 ರಂದು ವಿ.ಹೆಚ್.ಪಿ. 'ಕರಸೇವೆ'ಯನ್ನು ಅಧಿಕೃತವಾಗಿ ಹಿಂತೆಗೆದು ಕೊಳ್ಳುವವರೆಗೆ ಉತ್ತರ ಪ್ರದೇಶದ ಹಿಂದಿ ಪತ್ರಿಕೆಗಳು ಇಂತಹ ಸುದ್ದಿಗಳಿಂದಲೇ ತುಂಬಿದ್ದವು.

ಕೆಲವು ಶಿರೋನಾಮೆಗಳನ್ನು ನೋಡಿ.

ಜನರಲ್ ಡಾಮರನು ನಡುಗ ಬಹುದಾದ ಭಯಾನಕ ಸನ್ನಿವೇಶ ಅಯೋಧ್ಯೆಯಲ್ಲಿ, ಬಲಿದಾನೀ ಜಾಥಾಗಳ ಮೇಲೆ ಸಿಕ್ಕಾಪಟ್ಟೆ ಗೋಳೀಬಾರು; ಸುರಕ್ಷಾ ದಳದವರಿಂದ ಕ್ರೂರತೆಯ ನಗ್ನ ನರ್ತನ; ರಾಮಾಯಣ ಅಥವಾ ಓಂಬರೆದ ಬಾವುಟಗಳನ್ನು ಸುಟ್ಟರು; ಗಾಯಾಳುಗಳನ್ನು ನೋಡಿ ಡಾಕ್ಟರು, ನರ್ಸುಗಳೂ ಅತ್ತುಬಿಟ್ಟರು; ಕರಸೇವಕರು ಗುಂಡುಗಳಿಗೆ ಉತ್ತರ ರಾಮಮಂತ್ರದಿಂದ ನೀಡಿದರು! .... ಇತ್ಯಾದಿ ಇತ್ಯಾದಿ ಇವು ನವಂಬರ್ 3ರ 'ದೈನಿಕ ಜಾಗರಣ'ದಲ್ಲಿ ಪ್ರಕಟವಾದ ಸುದ್ದಿಗಳ ತಲೆ ಬರಹಗಳು ಇಷ್ಟರಿಂದಲೂ ಪರಿಸ್ಥಿತಿ ಉದ್ರೇಕಗೊಳ್ಳಲಿಲ್ಲವೇನೋ ಎಂಬ ಸಂಶಯದಿಂದೆಂಬಂತೆ ಮರುದಿನ ಅದೇ ಪತ್ರಿಕೆ "ಪ್ರತೀಕಾರ ಬೆಂಕಿಯಲ್ಲಿ ಉರಿಯುತ್ತಿರುವ ಕರಸೇವಕರು" ಎಂದು ಮುಖಪುಟದಲ್ಲಿ ವರದಿ ಮಾಡಿತು. 'ಆಜ್' ಎಂಬ ಇನ್ನೊಂದು ದೈನಿಕ, 'ಜನಸತ್ತಾ' ಎಂಬ ಮತ್ತೊಂದು ದೈನಿಕ ಇಂತಹ ಉದ್ರೇಕಕಾರಿ ಸುದ್ದಿಗಳನ್ನು, ಸಂಪಾದಕೀಯಗಳನ್ನು ಪ್ರಕಟಿಸಿ ಪರಸ್ಪರ ಸ್ಪರ್ಧೆಗೇ ಇಳಿದಂತಿತ್ತು.

ಇವನ್ನೆಲ್ಲಾ ನೋಡಿದ ಟೈಂಸ್ ಆಫ್ ಇಂಡಿಯಾ'ದ ಪತ್ರಕರ್ತರೊಬ್ಬರು ಇದನ್ನು "ಭಗವಾ ಪತ್ರಿಕಾರಿತೆ" ಎಂದು ವರ್ಣಿಸಿದ್ದಾರೆ. ಅರುಣ್ ಶೌರಿ ಈ ವರದಿಗಳಿದುರು ಕೇವಲ ಬಚ್ಚಾ ಎಂದು ವ್ಯಂಗ್ಯ ಮಾಡಿದ್ದಾರೆ. ಈ ಪತ್ರಿಕೆಗಳು (ಇಂಗ್ಲಿಷ್ ಪತ್ರಿಕೆಗಳೂ ಬಹಳ ಹಿಂದೆ ಬೀಳಲಿಲ್ಲ) ಅಯೋಧ್ಯೆಗೆ ಪತ್ರಕರ್ತರನ್ನು ಕಳಿಸಿದವೋ ಅಥವಾ ಕರಸೇವಕರನ್ನೇ ಕಳಿಸಿದವೋ ಎಂಬ ಸಂಶಯ ಬರುವಂತಿದೆ ಎಂದಿದ್ದಾರೆ. ತಮ್ಮ ಪ್ರಸಾರ ಹೆಚ್ಚಿಸಲು ಇದು ಸದವಕಾಶ ಎಂಬುದು ಈ ತರದ ಬೇಜವಾಬ್ದಾರಿ ತನಕ್ಕೆ ಒಂದು ಕಾರಣವಿರಬಹುದು, ಇನ್ನೊಂದು ಕಾರಣ ಈ ಪತ್ರಿಕೆಗಳ ಸಂಪಾದಕರುಗಳಿಗೂ ವಿ.ಹೆಚ್.ಪಿ., ಆರ್.ಎಸ್.ಎಸ್.ಗೂ ಬಹಳ ನಿಕಟ ಸಂಪರ್ಕವಿರುವುದು ಎಂದಿದ್ದಾರೆ. ಈ ಪತ್ರಕರ್ತ. ಇದೇ ಪತ್ರಿಕೆಗಳ ದೆಹಲಿ ಆವೃತ್ತಿಗಳ ಸುದ್ದಿ ಸಂಪಾದಕೀಯಗಳು ಇಷ್ಟೊಂದು ಬೇಜವಾಬ್ದಾರಿತನದ್ದಾಗಿಲ್ಲ ಎಂದೂ ಅವರು ಗಮನಿಸಿದ್ದಾರೆ.

ಬಿ.ಜೆ.ಪಿ./ವಿ.ಹೆಚ್.ಪಿ./ಆರ್.ಎಸ್.ಎಸ್.ಗೂ ಈ ಪತ್ರಕರ್ತರಿಗೂ ಸಂಪರ್ಕವಿದೆಯೆಂಬುದು ಇನ್ನೂ ಹಲವಾರು ರೀತಿಯಲ್ಲಿ ಸ್ಪಷ್ಟವಾಗಿದೆ. ನವಂಬರ್ 3 ರ 'ದೈನಿಕ ಜಾಗರಣ' ಹಿಂದಿನ ದಿನದ ಅಯೋಧ್ಯೆಯ ಘಟನೆಗಳನ್ನು ಜಾಲಿಯಾನ್‌ವಾಲಾ ಬಾಗ್ ಹತ್ಯಾಕಾಂಡಕ್ಕೆ ಹೋಲಿಸುತ್ತಿದ್ದಾಗ, ಅದೇ ವೇಳೆಗೆ ನವದೆಹಲಿಯಲ್ಲಿ ಬಿ.ಜೆ.ಪಿ. ಮುಖಂಡರು ಪ್ರಧಾನ ಮಂತ್ರಿಗಳ ನಿವಾಸದೆದುರು ಪ್ರಧಾನಿಗಳ ಮೇಲೂ ಇದೇ ಆಪಾದನೆ ಮಾಡುತ್ತಿದ್ದರು.

ಈ ಗಲಭೆಗಳಲ್ಲಿ ಸತ್ತವರ ಸಂಖ್ಯೆಯನ್ನು ಅತಿರಂಜಿತ ಗೊಳಿಸುವುದಂತೂ ಕೋಮುವಾದಿಗಳ ಅಪಪ್ರಚಾರದ ಪ್ರಮುಖ ಅಂಶವಾಗಿತ್ತು.

ಅಧಿಕೃತ ವಕ್ತಾರರ ಪ್ರಕಾರ ನವಂಬರ್ 2 ರ ಗೋಳಿಬಾರಿನಲ್ಲಿ ಸತ್ತವರ ಸಂಖ್ಯೆ 9. ಪಿ.ಟಿ.ಐ. ಪ್ರಕಾರ 18 ಆದರೆ ಈ ಪತ್ರಿಕೆಗಳ ಅಂದಾಜು 40 ರಿಂದ 400 ರವರೆಗೂ ಹೋಗಿದೆ.

'ಜನಸತ್ತಾ'ದ ವರದಿಗಾರ 40 ಎಂದ. ದಿಲ್ಲಿಯ ಬಿ.ಜೆ.ಪಿ. ಮುಖಂಡರಾದ ಎಂ.ಎಲ್. ಖುರಾನಾ, ರಾಮಭಟ್ 100 ಎಂದರು. ಅದೇ ವೇಳೆಗೆ ಇನ್ನೊಂದೆಡೆ ಬಿ.ಜೆ.ಪಿ.ಪ್ರಧಾನ ಕಾರ್ಯದರ್ಶಿ ಮುರಳಿ ಮನೋಹರ ಜೋಶಿ 168 ಎಂದು ತಾನೇ ಕಂಡಷ್ಟು ನಿಖರವಾಗಿ ಹೇಳಿದರು. ವಿ.ಹೆಚ್.ಪಿ. ಯವರು ಹಿಂದೆ ಬೀಳಲು ಹೇಗೆಸಾಧ್ಯ? ಅವರ ಮುಖಂಡ ಆಚಾರ್ಯ ಗಿರಿಜಾ ಕಿಶೋರ್ ಅದನ್ನು 400 ಕ್ಕೇರಿಸಿ ತಾನೇ ಎಲ್ಲರಿಗಿಂತಲೂ ಹೆಚ್ಚು 'ಹಿಂದೂ' ಎಂದು ಬೆನ್ನು ತಟ್ಟಿಕೊಂಡರು.

> ಕೋಮು ಸಂಘಟನೆಗಳ ಮುಖಂಡರು ಹೇಳಿದ ಸಂಖ್ಯೆ, ಘಟನೆಗಳು ಈ ಪತ್ರಿಕೆಗಳಲ್ಲಿ ಸುದ್ದಿಗಳಾಗಿ ಪ್ರಕಟವಾದವು. ನಂತರ ಆ ಸುದ್ದಿಗಳೇ ಈ ಮುಖಂಡರ ಹೇಳಿಕೆಗಳಿಗೆ ಪುರಾವೆಗಳಾದವು! ಕೋಮು ಭಾವೋದ್ರೇಕ ಹರಡಲು ಸುಯೋಜಿತ ಸಂಚು ಸ್ಪಷ್ಟವಾಗಿ ಕಾಣುತ್ತಿತ್ತು.

ತಮಾಷೆಯೆಂದರೆ ಈ ಕೋಮುವಾದೀ ಸಂಘಟನೆಗಳ ಮುಖಂಡರು ಹೇಳಿದ ಸಂಖ್ಯೆಗಳನ್ನೇ ಈ ಪತ್ರಿಕೆಗಳು ಪ್ರಕಟಿಸಿದವು. ಆ ನಂತರ ಆ ಪತ್ರಿಕಾ ಸುದ್ದಿಗಳನ್ನೇ ಅದೇ ಮುಖಂಡರು ತಮ್ಮ ಹೇಳಿಕೆಗಳಿಗೆ ಸಾಕ್ಷಿಯಾಗಿ ಮುಂದಿಡುತ್ತಿದ್ದರು! ಕೋಮು ಭಾವೋದ್ರೇಕ ಎಬ್ಬಿಸಲು ಒಂದು ಸಂಯೋಜಿತ ಸಂಚು ಮಾಡಿದ್ದದ್ದು ಸ್ಪಷ್ಟವಾಗಿದೆ.

ಪತ್ರಿಕೆಗಳಲ್ಲಿ ಕೋಮುವಾದದ ಈ ಭರತ ಎಷ್ಟು ಜೋರಾಗಿತ್ತೆಂದರೆ 'ಜನಸತ್ತಾ' ಪತ್ರಿಕೆ ನಾವು ಹಿಂದೂಗಳು ಎಂಬ ಪದವನ್ನೇ ಒಮ್ಮೆ ಬಳಸಿ ಬಿಟ್ಟಿತು. ಈ ಪತ್ರಿಕೆಗಳು ಕೋಮುವಾದಿಗಳ ಮುಖವಾಣಿಗಳಾಗಿ ಬಿಟ್ಟವು ಎಂಬುದನ್ನು ಹೀಗೆ ಬೇರೆ ಬೇರೆ ರೀತಿಯಲ್ಲಿ ತಾವೇ ತೋರಿಸಿಕೊಟ್ಟವೆ.

ಈ ಬೇಜವಾಬ್ದಾರಿ ಪತ್ರಕಾರಿತೆ ಎಷ್ಟು ಉದ್ರೇಕಕಾರಿಯಾಗಿತ್ತೆಂಬುದು ಅಕ್ಟೋಬರ್ 30 ರಿಂದ ನವಂಬರ್ 5 ರ ವರೆಗೆ ನಡೆದ ಕೋಮು ಗಲಭೆಗಳಲ್ಲಿ ಪ್ರತಿ ದಿನ ಸರಾಸರಿ ಐವತ್ತರಂತೆ ಜನ ಸತ್ತರು.

ಈ ಒಂದು ವಾರ ಕೆಲವು ಪತ್ರಿಕೆಗಳ "ಹಿಂದೂ ಸರ್ವಾಧಿಕಾರೀ ಮನೋಭಾವನೆಯನ್ನು ಬಯಲಿಗೆಳೆದಿದೆ ಎಂದರೆ ತಪ್ಪಾಗಲಾರದು. ಈ ಅಪಾಯ ಕಾರಿ ಪ್ರವೃತ್ತಿಯನ್ನು ಎದುರಿಸಲು ಭಾರತೀಯ ಪತ್ರಿಕಾ ರಂಗದಲ್ಲಿ ಹಾಗೂ ಹೊರಗೆ ಕೂಡಾ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳನ್ನು ಈ ಒಟ್ಟುಗೂಡಿಸುವುದು ಎಷ್ಟು ಅಗತ್ಯ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪುಟ ೩ ನೋಡಿ– ರಾಜ್ಯದ ಪತ್ರಿಕೆಗಳು

# ಸಿಪಿಐ(ಎಂ) ರಾಜ್ಯ ಸಮಿತಿ ಸಭೆ

ಪುಟ 1ರಿಂದ

## ಟಾಡಾ ಕಾಯಿದೆ ಜಾರಿ:

ಭಯೋತ್ಪಾದಕ ಹಾಗೂ ಛಿದ್ರಕಾರಿ ಶಕ್ತಿಗಳ ಬಗ್ಗೆ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸುವಾಗ ರಾಜೀವಗಾಂಧಿ ಇದು ಕೇವಲ ಪಂಜಾಬ್ ಪರಿಸ್ಥಿತಿಯನ್ನು ಎದುರಿಸಲು ಮಾತ್ರ ಎಂದು ನೀಡಿದ ಆಶ್ವಾಸನೆಯನ್ನು ಉಲ್ಲಂಘಿಸಿ ರಾಜ್ಯದಲ್ಲಿ ಜಾತಿಯ ಗಲಭೆಯನ್ನು ಹತ್ತಿಕ್ಕುವ ನೆಪದಿಂದ ಬಂಗಾರಪ್ಪ ಸರ್ಕಾರ ಜಾರಿಯಲ್ಲಿ ತಂದಿರುವುದನ್ನು ರಾಜ್ಯ ಸಮಿತಿ ಖಂಡಿಸಿದೆ. ಈ ಟಾಡಾ ಕಾಯಿದೆಯನ್ನು ಪ್ರಜಾಸತ್ತಾತ್ಮಕ ಚಳುವಳಿಯ ವಿರುದ್ಧ ಉಪಯೋಗಿಸಬಹುದೆಂಬ ಭೀತಿಯನ್ನು ನಮ್ಮ ಪಕ್ಷ ಈ ಮುಂಚೆಯೇ ವ್ಯಕ್ತಪಡಿಸಿತ್ತು. ಹುಬ್ಬಳ್ಳಿಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಎಂ.ಎಸ್. ಮುಲ್ಲಾರವರನ್ನು ಬಂಧಿಸಿ ಐದು ದಿವಸ ಜೈಲಿನಲ್ಲಿ ಇಡಲಾಗಿದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ನಮ ಪಕ್ಷದ ಐದಾರು ಮುಖಂಡರು ತಾಲ್ಲೂಕು ಬಿಟ್ಟು ಹೋಗಬಾರದೆಂಬ ಆಜ್ಞೆಯನ್ನು ಹೊರಡಿಸಿರುವುದನ್ನು ರಾಜ್ಯಸಮಿತಿ ಖಂಡಿಸಿದೆ. ಆದ್ದರಿಂದ ಟಾಡಾ ಕಾಯಿದೆಯ ಜಾರಿಯನ್ನು ಹಿಂತೆಗೆಯಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

## ಜಿಲ್ಲಾ ಪರಿಷತ್ ವ್ಯವಸ್ಥೆ — ಸರೋಜಿನಿ ಮಹಿಷಿ ವರದಿ:

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಮಸೂದೆಗೆ ತಿದ್ದುಪಡಿ ತಂದು ಜಿಲ್ಲಾ ಪರಿಷತ್‌ಗಳ ಅಧಿಕಾರ ಮೊಟಕುಗೊಳಿಸುವ ಕ್ರಮ ಅಧಿಕಾರದ ವಿಕೇಂದ್ರೀಕರಣದ ಮೇಲಿನ ದಾಳಿಯೆಂದೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸುವ ಕ್ರಮವೆಂದೂ ರಾಜ್ಯ ಸಮಿತಿ ಖಂಡಿಸಿದೆ. ಭಾರತ ದೇಶದ ಯಾವ ಮೂಲೆಯಲ್ಲಿ ಬೇಕಾದರೂ ವಾಸ ಮಾಡಬಹುದು, ಉದ್ಯೋಗಮಾಡಬಹುದೆಂದು ಭಾರತದ ಸಂವಿಧಾನ ಹೇಳಿದ್ದರೂ ಕೂಡ ಮಣ್ಣಿನಮಕ್ಕಳಿಗೆ ಮಾತ್ರ ಉದ್ಯೋಗವೆಂದು ಪ್ರತಿಪಾದಿಸುವ ಸರೋಜಿನಿ ಮಹಿಷಿ ವರದಿಯನ್ನು ಕೈಬಿಡಬೇಕೆಂದು ರಾಜ್ಯಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ.

## ಮಸೀದಿಗಳಿಗೆ ಹಾನಿ:

ರಾಜ್ಯದ ಹಲವು ಜಿಲ್ಲೆಗಳಲ್ಲಿ ಅಲ್ಪ ಸಂಖ್ಯಾತರ ಪೂಜಾಸ್ಥಾನಗಳಿಗೆ ಹಾನಿ ಮಾಡುವ ಕೃತ್ಯಗಳು ನಡೆದಿವೆ. ಇದು ದೇಶವನ್ನೊಡೆಯುವ ಧಾರ್ಮಿಕ ಸ್ವಾತಂತ್ರ್ಯದ ಭಂಗ ಮಾಡುವವರ ಕ್ರಮವೆಂದು ರಾಜ್ಯ ಸಮಿತಿ ಖಂಡಿಸಿದೆ. ಈ ಬಗ್ಗೆ ಸರಿಯಾದ ರಕ್ಷಣೆ ನೀಡದಿರುವ ಈ ಕೃತ್ಯಗಳನ್ನೆಸಗಿದವರನ್ನು ಶಿಕ್ಷೆಗೊಳಪಡಿಸದ ರಾಜ್ಯ ಸರ್ಕಾರದೇಶದ ಐಕ್ಯತೆಗೆ ಗಂಡಾಂತರವನ್ನೆಸಗುತ್ತಿದೆಯೆಂದೂ ವರ್ಣಿಸಿದೆ. ಇನ್ನು ಮುಂದೆಯೂ ಇಂತಹ ಕೃತ್ಯಗಳು ತೀವ್ರಗೊಳ್ಳಬಹುದಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಬಗ್ಗೆ ತೀವ್ರ ಎಚ್ಚರವಹಿಸಬೇಕೆಂದು ರಾಜ್ಯಸಮಿತಿಒತ್ತಾಯಿಸುತ್ತದೆ.

## ರಾಜ್ಯಪಾಲರ ಮುಖ್ಯನ್ಯಾಯಾಧೀಶರ ಸಂವಿಧಾನ ವಿರೋಧ ನಡವಳಿಕೆಗಳು:

ಕೃಷಿಯನ್ನು ಕೈಗಾರಿಕೆಯಾಗಿ ಪರಿಗಣಿಸಬೇಕೆಂದು ಪ್ರತಿಪಾದಿಸಿದ ರಾಜ್ಯಪಾಲ ಭಾನುಪ್ರತಾಪಸಿಂಗ ಅವರು ಕೈಗಾರಿಕಾ ಕಾರ್ಮಿಕರಿಗೆ ಸಿಗತಕ್ಕ ಬೋನಸ್ಸು ಮತ್ತಿನ್ನಿತರ ಸೌಲತ್ತುಗಳನ್ನು ಕೊಡಲು ಹಿಂದೇಟು ಹಾಕುತ್ತಿರುವುದನ್ನು, ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ಕೊಡುವ ಶಕ್ತಿ ರೈತರಿಗೆ ಇಲ್ಲವೆಂದೂ ಹೇಳಿರುವುದನ್ನೂ ರಾಜ್ಯ ಸಮಿತಿ ಖಂಡಿಸಿ. ಕೃಷಿ ಕಾರ್ಮಿಕರಿಗೆ ಕನಿಷ್ಠವೇತನ ನೀಡುವ ಅಂಶ ಭಾರತ ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಇದೆಯೆಂದು ನೆನಪಿಸಲು ಇಚ್ಛೆಪಡುತ್ತದೆ.

ಚೀಫ್‌ಜಸ್ಟೀಸ್ ಮಿಶ್ರರವರು ಒಂದು ಸಾರ್ವಜನಿಕ ಸಮಾರಂಭದಲ್ಲಿ ಮಹಿಳೆಯರಿಗೆ ಸಮಾನ ಹಕ್ಕಿನ ಬಗ್ಗೆ ಸಂವಿಧಾನದ ನಿರ್ದೇಶನವನ್ನು ಉಲ್ಲಂಘಿಸಿ ಮಾತನಾಡಿರುವುದನ್ನು ರಾಜ್ಯ ಸಮಿತಿ ಖಂಡಿಸಿದೆ.

## ಎಂ.ಜಿ. ಮಾಳ್ಸೇಕರ ಅವರಿಗೆ ಕೆಂಪು ವಂದನೆಗಳು

ಕಾರವಾರ ಜಿಲ್ಲೆಯಲ್ಲಿ ಬಲಿಷ್ಠವಾದ ರೈತ ಸಂಘಟನೆ ಕಟ್ಟಿ ಹಲವಾರು ಹೋರಾಟಗಳನ್ನು ನಡೆಸಿದ ಎಂ.ಜಿ. ಮಾಳ್ಸೇಕರ ತಮ್ಮ ಗ್ರಾಮ ಹಳ್ಳಗಾದಲ್ಲಿ ಕೊನೆಯುಸಿರೆಳೆದರು.

1940ರಿಂದಲೇ ಕಾರವಾರ ಜಿಲ್ಲೆಯಲ್ಲಿ ದುಡಿಯುವ ರೈತನಿಗೆ ಭೂಮಿಯ ಒಡೆತನಕ್ಕಾಗಿ, ಭೂಮಾಲಕರ ಹೊಲದಲ್ಲಿ ದುಡಿಯುವ ರೈತನಿಗೆ ಒಳ್ಳೆಯ ಹೆಚ್ಚಿನ ಪಾಲಿಗಾಗಿ, ಭೂಮಾಲಕರ ಸುಲಿಗೆಯ ತಡೆಗಾಗಿ ರೈತರನ್ನು ಕೆಂಬಾವುಟದ ನೇತೃತ್ವದಲ್ಲಿ ಸಂಘಟಿಸಿ, ಅಖಿಲ ಭಾರತ ಕಿಸಾನ ಸಭಾ ದಡಿಯಲ್ಲಿ ನೂರಾರು ಹೋರಾಟಗಳನ್ನು ಪ್ರಾರಂಭಿಸಿದ ಶ್ರೇಯಸ್ಸು ಎಂ.ಜಿ. ಮಾಳ್ಸೇಕರಿಗೆ ಸಲ್ಲುತ್ತದೆ. ಪ್ರಾರಂಭದಲ್ಲಿ ಶ್ಯಾಮರಾವ್ ಪುರುಳೇಕರ (ಗೋದಾವರಿ ಪುರುಳೇಕರ ಅವರ ಪತಿ) ಮತ್ತು ದಿನಕರ ದೇಸಾಯಿ (ಕಾಂಗ್ರೆಸ್ ಸೋಶಲಿಸ್ಟ್) ಅವರಿಂದ ಪ್ರೋತ್ಸಾಹ ಪಡೆದ ಎಂ.ಜಿ. ಮಾಳ್ಸೇಕರ ರೈತರ ಚಳುವಳಿ ನಡೆಸುತ್ತಿದ್ದಂತೆಯೇ ಮಾರ್ಕ್ಸ್‌ವಾದಕ್ಕೆ ಆಕರ್ಷಿತರಾಗಿ ಕಮ್ಯುನಿಸ್ಟ್ ಪಾರ್ಟಿ ಸೇರಿದರು. ಕಮ್ಯುನಿಸ್ಟ್ ಪಕ್ಷ ಕಟ್ಟಿದರು. ರಿಂದ ಎನ್.ಎಲ್.ಉಪಾಧ್ಯಾಯರ ಜಿಲ್ಲಾದ್ಯಂತ ರೈತರ ಸಂಘಟನೆ ವಿಸ್ತರಿಸಿದರು. 1947-48 ರಲ್ಲಿ ಮುಂಬಯಿ ಪ್ರಾಂತಕ್ಕೆ ಮೊರಾರ್ಜಿ ದೇಸಾಯಿಯವರು ಮುಖ್ಯ ಮಂತ್ರಿಯಾಗಿದ್ದಾಗ ರೈತರ ಚಳುವಳಿಗಳ ಮೇಲೆ ಪೋಲೀಸರ ದಬ್ಬಾಳಿಕೆ ನಡೆಯುತ್ತಿರುವಾಗ, ಪ್ರತಿಬಂಧಕಾಜ್ಞೆಗಳು ಹೇರಲ್ಪಡುತ್ತಿರುವಾಗ ಅವುಗಳನ್ನೆಲ್ಲ ಧೈರ್ಯದಿಂದ ಎದುರಿಸಿ ಹೋರಾಟ ಮುಂದುವರಿಸಿದರು. ಎನ್.ಎಲ್. ಉಪಾಧ್ಯಾಯರನ್ನು ಮುಂಬಯಿ ಪ್ರಾಂತದಿಂದಲೂ, ಮಾಳ್ಸೇಕರನ್ನು ಕಾರವಾರ ಜಿಲ್ಲೆಯಿಂದಲೂ ಗಡಿಪಾರು ಮಾಡಿದಾಗ ಮಾಳ್ಸೇಕರ ಅವರು ಬೆಳಗಾವ ಜಿಲ್ಲೆಯ ಖಾನಾಪುರ ತಾಲೂಕಿಗೆ ಹೋಗಿ ಅಲ್ಲಿ ರೈತ ಸಂಘ ಕಟ್ಟಿದರು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆಸಿದ ಹೋರಾಟಗಳ ಪ್ರತಿಫಲವಾಗಿ ಮೊರಾರ್ಜಿ ಸರಕಾರ ಟೆನ್ನಿ ಕಾಯ್ದೆ ತಿದ್ದುಪಡಿ ತಂದು ಗೇಣಿದಾರರಿಗೆ ಸಿಗುತ್ತಿದ್ದ ಬೆಲೆಯ 1/4 ನೇ ಪಾಲಿನ ಬದಲಾಗಿ 1/3 ನೇ ಪಾಲೆಂದೂ, ನಂತರ ಅರ್ಧವೆಂದೂ ಕೊನೆಗೆ 3/4 ರ ಪಾಲೆಂದೂ ಘೋಷಿಸುವಂತಾಯಿತು.

1948ರಲ್ಲಿ ನಡೆದ ಕಿಸಾನ ಸಮ್ಮೇಳನ ನಡೆಯಬಾರದೆಂದು ಮುಂಬಯಿ ಸರಕಾರ ಪ್ರತಿಬಂಧಕಾಜ್ಞೆ ಹೊರಡಿಸಿದ್ದರೂ ಕೂಡ ಅದನ್ನು ಮುರಿದು ಸಮ್ಮೇಳನ ನಡೆಸಲಾಯಿತು. ಆ ಸಮ್ಮೇಳನವನ್ನು ಉದ್ಘಾಟಿಸಲು ಶಾಂತಾಮುಖರ್ಜಿಯವರು ದಿಲ್ಲಿಯಿಂದ ಬಂದಿದ್ದರು (ಲೋಕಸಭೆ ಸದಸ್ಯ ಕಾ॥ ಮುಖರ್ಜಿಯವರ ಪತ್ನಿ) ಸಮ್ಮೇಳನದಲ್ಲಿ ಭಾಷಣ ಮಾಡುತ್ತಿದ್ದಂತೆಯೇ ಅವರನ್ನು ಬಂಧಿಸಿ ದಿಲ್ಲಿಗೆ ಕಳುಹಿಸಲಾಯಿತು. ಎನ್.ಎಲ್. ಮತ್ತು ಮಾಳ್ಸೇಕರವರನ್ನು ಮತ್ತೆ ಗಡೀಪಾರು ಮಾಡಲಾಯಿತು.

ಕಾರವಾರ ಜಿಲ್ಲೆಯಲ್ಲಿ ಬಲಿಷ್ಠವಾಗಿ ಬೆಳೆದು ಬಂದಿದ್ದ ರೈತ ಸಂಘದ ಚಳುವಳಿ ಮತ್ತು ಕಮ್ಯುನಿಸ್ಟ್ ಪಕ್ಷದ ಪ್ರಭಾವದಿಂದಾಗಿಯೇ ಎನ್.ಕೆ. ಉಪಾಧ್ಯಾಯರು ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ಚುನಾವಣಾ ಕ್ಷೇತ್ರದ ಎಂ.ಎಲ್.ಸಿ. ಸ್ಥಾನಕ್ಕೆ ಸ್ಪರ್ಧಿಸಿದಾಗ ಅವರಿಗೆ ಕಾರವಾರ ಜಿಲ್ಲೆಯ ನಗರ ಸಭೆಗಳ ಸದಸ್ಯರಿಂದ ಅತ್ಯಂತ ಹೆಚ್ಚು ಮತ ಗಳಿಸಲು ಸಾಧ್ಯವಾಯಿತೆಂಬುದನ್ನು ಗಮನಿಸಿದಾಗ, ಕಮ್ಯುನಿಸ್ಟ್ ಪಕ್ಷದ, ರೈತ ಸಂಘದ ಚಳುವಳಿಯ ಪ್ರಭಾವ ಎಷ್ಟು ಬೆಳೆದಿತ್ತೆಂಬುದು ಕಂಡು ಬರುತ್ತದೆ. ಇದಕ್ಕೆಲ್ಲ ಕಾರಣ ಎಂ.ಜಿ. ಮಾಳ್ಸೇಕರ ಹಾಗೂ ಅವರ ಸಂಗಾತಿಗಳಾದ ಕೃಷ್ಣ ಕಲಕುಟಕರ ಗುಬ್ಬು, ನ್ಯಾಕಗಳು ಮಹಾಬಲ ನ್ಯಾಕ (ನಾಸಿಕ ಜೈಲಿನಲ್ಲಿ ಗೋಳಿಬಾರಿನಿಂದಾಗಿ ಮೃತರಾದರು 1950ರಲ್ಲಿ) ಮತ್ತು ಸದ್ಯಯಸಾಬ ಅನಂತರದ ವರ್ಷಗಳಲ್ಲಿ ಡಿ.ಪಿ. ಸಿಂಗ್, ಹಳದೀಪುರ ಪಿಕಳೆ ವಕೀಲರು ಎಂ.ಎಸ್. ಧಾರೇಶ್ವರ ವಕೀಲರೆಲ್ಲಾ ಸಂಘಟನೆಗಾಗಿ ದುಡಿದರು.

ಕಮ್ಯುನಿಸ್ಟ್ ಆಂದೋಲನದಲ್ಲಿ ಪರಿಷ್ಕರಣವಾದ ತಲೆಯೆತ್ತಿದಾಗ ಅದರ ವಿರುದ್ಧ ನಿಂತು ಸಿ.ಪಿ.ಐ(ಎಂ) ಜತೆಗೂಡಿದರು. ಎಂ.ಜಿ. ಮಾಳಸೇಕರ ಉತ್ತಮ ಭಾಷಣ ಮತ್ತು ಭಜನೆ ಮಾಡಿ ರೈತ ಸಮುದಾಯವನ್ನು ಮೋಡಿಗೊಳಿಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರ ಆರೋಗ್ಯ ಕೆಟ್ಟಿತ್ತು. ಅವರ ಅನುಭವ ಸಂಘಟನೆಗೆ, ಲಭ್ಯವಾಗದ ಕಾರವಾರ ಜಿಲ್ಲೆಯಲ್ಲಿ ಹಿಂದಿನ ಚಳುವಳಿಯನ್ನು ಉಳಿಸಲಿಕ್ಕೇ ಸಾಧ್ಯವಾಗಲಿಲ್ಲ.

ಎಂ.ಜಿ. ಮಾಳಸೇಕರ ಅವರು ಪಕ್ಷಕ್ಕಾಗಿ, ರೈತರಿಗಾಗಿ ಮಾಡಿದ ನಿಸ್ವಾರ್ಥ ಸೇವೆಯನ್ನು ಸಿ.ಪಿ.ಐ(ಎಂ) ನೆನಪಿಸುತ್ತದೆ. ಅವರು ತಮ್ಮ ಇಡೀ ಜೀವನವನ್ನು ಯಾವ ಉದ್ದೇಶಕ್ಕಾಗಿ ಮುಡುಪಿಟ್ಟಿದ್ದರೋ ಅದಕ್ಕಾಗಿ ಹೋರಾಡಲು ಪಣ ತೊಡುತ್ತದೆ.

ತಾ. 20-11-90 ರಂದು ಸೇರಿದ ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಸಮಿತಿ ಎಂ.ಜಿ. ಮಾಳ್ಸೇಕರ ಅವರ ನಿಧನಕ್ಕೆ ಸಂತಾಪ ವ್ಯಕ್ತ ಮಾಡಿದೆ.

## ಮುಷ್ಕರಗಳಿಗೆ ಬೆಂಬಲ:

ಆಯುರ್ವೇದ ಹಾಗೂ ಯುನಾನಿ ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರ, ಬೆಂಕಾಂ, ನೌಕರರ ಸಂಘಗಳಿಗೆ ರಾಜ್ಯ ಸಮಿತಿ ಬೆಂಬಲ ನೀಡಿದೆ.

## ಕೋಮುವಾದದ ಬಗ್ಗೆ ವಿಚಾರ ಸಂಕಿರಣ

ಡಿ.ವೈ.ಎಫ್.ಐ. ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಹತ್ತನೇ ವರ್ಷದ ನೆನಪಿಗಾಗಿ "ಕೋಮುವಾದದ ನೆಲೆ ಮತ್ತು ಗತಿ" ಕುರಿತ ವಿಚಾರ ಸಂಕಿರಣವನ್ನು ಗಣಪತಿ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಜನತೆಯಒಗ್ಗಟ್ಟನ್ನು ಮುರಿಯಲು ಬ್ರಿಟಿಷ್ ಸಾಮ್ರಾಜ್ಯಶಾಹಿ ಬಳಸಿದ ಮತೀಯವಾದವನ್ನು ಅದೇ ಉದ್ದೇಶ ಸಾಧನೆಗಾಗಿ ಇಂದು ಭಾರತದಲ್ಲಿ ಬಳಸಲಾಗುತ್ತಿದೆಯೆಂದು ವಿಮರ್ಶಕ ಜಿ.ರಾಜಶೇಖರ ಅಭಿಪ್ರಾಯ ಪಟ್ಟರು. ಜನರನ್ನುಭಾವೋದ್ರೇಕಗೊಳಿಸಿ ರಾಜಕೀಯ ಲಾಭಪಡೆಯಲು ನಡೆಸುತ್ತಿರುವ ರಾಮ ರಥದ ಬಿ.ಜೆ.ಪಿ. ನಾಯಕರ ಮನೋಭಾವ ಹಿಟ್ಲರ್ ಮತ್ತು ಮುಸಲೋನಿಯ ಮನೋಭಾವಕ್ಕೆ ಹತ್ತಿರವಾದುದು. ಮತ್ತು ಚಳುವಳಿಗಳು ಆಗ ಹಿಟ್ಲರನ್ನು ಸಮರ್ಥಿಸಿದಂತೆ ಇಂದು ಹಿಂದೂ ಧರ್ಮದ ಗುರುಗಳು ಹಾಗೂ ಮಠಾಧಿಪತಿಗಳು ಬಿ.ಜೆ.ಪಿ.ನಾಯಕರನ್ನು ಸಮರ್ಥಿಸುತ್ತಿದ್ದಾರೆ ಎಂದು ವಿಶ್ಲೇಷಿಸಿದರು.

ರಾಮಜನ್ಮಭೂಮಿ ಮತ್ತು ಬಾಬ್ರಿ ಮಸೀದಿ ವಿವಾದದ ಬಗ್ಗೆ, ಪ್ರಬಂಧ ಮಂಡಿಸಿದ ಕತೆಗಾರ ಫಕೀರ್‌ಮಹಮ್ಮದ್ [illegible]

ಈವತ್ತಿಗೂ ಹಿಂದೂ ಮತ್ತು ಮುಸ್ಲಿಂರ ಮಧ್ಯೆ ದ್ವೇಷದ ಹೊಗೆಯಾಡುತ್ತಿದೆ ಎಂದರು. ಇದೇ ಇತಿಹಾಸವನ್ನು ಆಧಾರಿಸಿದ ಪಠ್ಯಪುಸ್ತಕಗಳನ್ನು ನಮ್ಮ ಮಕ್ಕಳು ಈವತ್ತಿಗೂ ಓದುತ್ತಿರುವುದು ಈ ದೇಶದ ದೌರ್ಭಾಗ್ಯ ಎಂದು ಕಟ್ಟಾಡಿ ವಿಶ್ಲೇಷಿಸಿದರು.

ಕೋಮುವಾದಿ ಮತ್ತು ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮಾತನಾಡಿದ ಪತ್ರಕರ್ತ ಜಿ.ಎನ್.ನಾಗರಾಜ್, ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸಲಾರದ ರಾಜಕೀಯ ಪಕ್ಷಗಳು ಜನರ ಧಾರ್ಮಿಕ ನಂಬಿಕೆಗಳನ್ನು ಬಳಸಿಕೊಂಡು ಅಧಿಕಾರದ ಗದ್ದುಗೆ ಹಿಡಿಯಲು ಯತ್ನಿಸಿದವು ಎಂದು ವಿಶ್ಲೇಷಿಸಿದರು.

ವಿಚಾರ ಸಂಕಿರಣ ಅಧ್ಯಕ್ಷತೆ ವಹಿಸಿದ್ದ ಹಿರಿಯ ಕಮ್ಯುನಿಸ್ಟ್ ಮುಂದಾಳು ಬಿ.ವಿ.ಕಕ್ಕಿಲಾಯ ಅವರು ರಾಮ ಈ ದೇಶದ ಐಕ್ಯತೆಗೂ ಪರಮತ ಸಹಿಷ್ಣುತೆಗೂ ಸಂಕೇತ. ಈ ನಾಡಿನಲ್ಲಿ ಮುಸ್ಲಿಂರು, ಕ್ರಿಶ್ಚಿಯನ್ನರು,ಬೌದ್ಧರೂ ಎಲ್ಲರೂ ಬಾಳಬೇಕು. ಯುವಜನರು ಈ ಸಮಸ್ಯೆಯನ್ನು ಸರಿಯಾಗಿ ಯೋಚಿಸಿ ಜನ ಸಮುದಾಯದಲ್ಲಿ ಹೊಸ ವಿವೇಕ ಮೂಡಿಸಬೇಕೆಂದು ತಿಳಿಸಿದರು.

ಡಿ.ವೈ.ಎಫ್.ಐ. ಪರವಾಗಿ ಫಣಿರಾಜ್ ಸ್ವಾಗತಿಸಿದರು. ಬಿ.ಎಂ. ಮಾಧವ ವಂದಿಸಿದರು.

## ತೊಕ್ಕೊಟುವಿನಲ್ಲಿ

ಬೀಡಿ ಕಾರ್ಮಿಕರ ಅಖಿಲ ಭಾರತ ಬೇಡಿಕೆಗಳ ವಾರಾಚರಣೆಯ ಅಂಗವಾಗಿ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್, ಬೀಡಿ ಕಾರ್ಮಿಕರಿಗೆ ತಮ್ಮ ಬೇಡಿಕೆಗಳಿಗೆ ಒತ್ತಾಯಿಸಲು ನವೆಂಬರ್ ತಿಂಗಳಲ್ಲಿ ನಡೆಯಲಿರುವ ಹೋರಾಟದಲ್ಲಿ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದೆ.

ಉಳ್ಳಾಲ ಧರ್ಮನಗರ ಎಂಬಲ್ಲಿ ಅಕ್ಟೋಬರ್ 28 ರಂದು ಸೇರಿದ ಬೀಡಿ ಕಾರ್ಮಿಕರ ಮಹಾಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಸಿ.ಪಿ.ಐ.(ಎಂ) ಉಳ್ಳಾಲ ಕ್ಷೇತ್ರ ಸಮಿತಿ ಕಾರ್ಯದರ್ಶಿ ಶ್ರೀ ಜನಾರ್ಧನ್ ನಾಯರ್ ಅವರು ಬೀಡಿಗೆ ರಾಷ್ಟ್ರೀಯ ಮಟ್ಟದಲ್ಲಿ ಸರಕಾರವು ಏಕರೀತಿಯ ಕನಿಷ್ಠ ಕೂಲಿ ಜಾರಿಗೊಳಿಸುವುದರ ಅಗತ್ಯವನ್ನು ಒತ್ತಿ ಹೇಳಿದರು.

ಸಂಘದ ಅಧ್ಯಕ್ಷ ಕೆ.ನಾರಾಯಣ ಶೆಟ್ಟಿ, ಹಾಗೂ ಸಹಕಾರ್ಯದರ್ಶಿ ಬಾಬು ಪಿಲಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯ ಶ್ರೀ ಶಿವಾಜಿಯವರನ್ನು ಅಧ್ಯಕ್ಷರಾಗಿ, ಶ್ರೀಮತಿ ಜಯಂತ ಲೋಬೋರವರನ್ನು ಕಾರ್ಯದರ್ಶಿಯಾಗಿ ಹಾಗೂ ಶ್ರೀಮತಿ ಸುಶೀಲ ಅವರನ್ನು ಸಹ ಕಾರ್ಯದರ್ಶಿಯಾಗಿ ಹದಿಮೂರು ಜನರ ಏರಿಯಾ ಸಮಿತಿಯನ್ನು ಆಯ್ಕೆ ಮಾಡಿತು.


## ಕೋಮುಸೌಹಾರ್ದ ಕಾಪಾಡಲು ರೈತ ಸಂಘದ ಮನವಿ

ಮಂಗಳೂರು ತಾಲೂಕು ರೈತ ಸಂಘದ ಸಭೆಯು ಅಕ್ಟೋಬರ್29ರಂದು ಬಾಬು ಪೂಜಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿತು.

ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ಬಗ್ಗೆ ಹೈಕೋರ್ಟ್ ತಡೆ ಇರುವಾಗ ದೇಶದ ಬಂಡವಾಳಗಾರರು ಹಾಗೂ ಭೂಮಾಲಿಕರು ರಾಮನ ಹೆಸರಿನಲ್ಲಿ ಜನತೆಯ ಒಗ್ಗಟ್ಟನ್ನುಒಡೆಯಲು ಮತ್ತು ದೇಶವನ್ನು ಛಿದ್ರಗೊಳಿಸಲು ನಡೆಸುತ್ತಿರುವ ವಿನಾಶಕಾರಿ ಪ್ರಯತ್ನವನ್ನು ಸಭೆಯು ಖಂಡಿಸಿ ದೇಶದಲ್ಲಿ ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ಬರಲು ರೈತರಿಗೆ ಹಾಗೂ ಜನಸಾಮಾನ್ಯರಿಗೆ ರೈತ ಸಂಘ ಕರೆ ನೀಡಿದೆ.

ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾದ ಭೂಮಾಲಕ ಹಕ್ಕು, ಮತ್ತು ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ಪ್ರಮುಖ 13 ಬೇಡಿಕೆಯುಳ್ಳ ಕರ್ನಾಟಕ ಪ್ರಾಂತ ಸಂಘದ ಮನವಿ ಪತ್ರವನ್ನು ರೈತರ ಜಾಥಾದಮೂಲಕ ವಿಧಾನಸೌಧಕ್ಕೆ ಹೋಗಿ ಸಲ್ಲಿಸಲು ಸಭೆಯು ತೀರ್ಮಾನ ಕೈಗೊಂಡಿತು.

ಸಭೆಯನ್ನುದ್ದೇಶಿಸಿ ಗುರುಪುರ ಕೃಷ್ಣ, ಸಿ.ಪಿ.ಐ.(ಎಂ) ಕಾರ್ಯದರ್ಶಿ ಯು.ಬಿ. ಲೋಕಯ್ಯ ಹಾಗೂ ರೈತ ಸಂಘದ ಅಧ್ಯಕ್ಷರಾದ ಪಾವ್ಲ್ ಡಿಸೋಜಾ ಮಾತನಾಡಿದರು.



# ರಾಷ್ಟ್ರೀಯ ಸಮಗ್ರತೆ ಇಂದು

> ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಚಿಸಿದ ರಾಷ್ಟ್ರೀಯ ಸಮಗ್ರತಾ ಮಂಡಳಿ ಇಂತಹ ಮಂಡಳಿಗಳ ಸರಣಿಯಲ್ಲಿ ಐದನೆಯದು. ಆದರೆ ಒಂದು ಕೆಲಸಮಾಡುವ ಸಂಸ್ಥೆಯಾಗಿ ಮುಂದುವರೆಯುವ ಲಕ್ಷಣ ತೋರಿದ ಮೊದಲ ಮಂಡಳಿ. 1960 ರ ದಶಕದಲ್ಲಿ ರಚನೆಗೊಂಡ ಮೊದಲ ರಾಷ್ಟ್ರೀಯ ಸಮಗ್ರತಾ ಮಂಡಳಿಯಲ್ಲೇ ಸದಸ್ಯರಾಗಿದ್ದ ಕಾಂ.ಇ.ಎಂ.ಎಸ್. ನಂಬೂದರಿಪ್ಪಾಡ್ ಇಲ್ಲಿ ಸಮಗ್ರತಾ ಮಂಡಳಿಗಳ ಸ್ಥೂಲ ಹಿನ್ನೋಟ ನೀಡುತ್ತಾ ಇಂದಿನ ಸನ್ನಿವೇಶದಲ್ಲಿ ರಾಷ್ಟ್ರೀಯ ಸಮಗ್ರತೆ ಕಾಪಾಡುವ ಪ್ರಜ್ಞಾಪೂರ್ವಕ ಪ್ರಯತ್ನಗಳಿಗೆ ಅಡಿಗಲ್ಲಾಗಬಹುದಾದ ಒಂದು ಜಾತ್ಯತೀತ, ಪ್ರಜಾಪ್ರಭುತ್ವ ಕಾರ್ಯಕ್ರಮವನ್ನು ಮುಂದಿಟ್ಟಿದ್ದಾರೆ.

ರಾಷ್ಟ್ರೀಯ ಸಮಗ್ರತೆ ಒಂದು ಜ್ವಲಂತ ರಾಜಕೀಯ ಸಮಸ್ಯೆಯಾಗಿ ದೇಶದ ಮುಂದೆ ನಿಂತದ್ದು 1960 ರ ದಶಕದಲ್ಲಿ. ಸ್ವಾತಂತ್ರ್ಯ ಬಂದ ನಂತರ ಕೋಮು ಘರ್ಷಣೆಗಳು, ದಂಗೆಗಳಂತೂ ಸಾಮಾನ್ಯ ಸಂಗತಿಗಳಾಗಿದ್ದವು. ಇದರ ಜತೆಗೆ ಭಾಷಾ, ಪ್ರಾದೇಶಿಕ, ಜನಾಂಗೀಯ ಪ್ರಶ್ನೆಗಳೂ ಎದುರಾದವು. ಅಸ್ಸಾಂನಲ್ಲಿ ಭಾಷಾ-ಜನಾಂಗೀಯ ದಂಗೆಗಳು ಸಿಡಿದದ್ದಾಗ ಆಗಿನ ಪ್ರಧಾನಮಂತ್ರಿ ಜವಾಹರ ಲಾಲ್ ನೆಹರೂ ಒಂದು 'ರಾಷ್ಟ್ರೀಯ ಸಮಗ್ರತಾ ಸಮ್ಮೇಳನ ಕರೆದರು. ಆ ಸಮ್ಮೇಳನದಲ್ಲಿ, ಜಾತೀಯತೆ, ಕೋಮುವಾದ, ಪ್ರಾದೇಶಿಕಸಂಕುಚಿತತೆ, ಭಾಷಾಂಧತೆ ದೇಶದ ಐಕ್ಯತೆ, ಸಮಗ್ರತೆಗೆ ಬಂದಿರುವ ಹಲವಾರು ಬೆದರಿಕೆಗಳು ಎಂದು ಖಂಡಿಸಲಾಯಿತು. ಸರ್ವಪಕ್ಷಗಳಿರುವ ಒಂದು ರಾಷ್ಟ್ರೀಯ ಸಮಗ್ರತಾ ಮಂಡಳಿ ರಚಿಸುವ ಅಗತ್ಯವಿದೆಯೆಂಬ ತೀರ್ಮಾನಕ್ಕೆ ಆ ಸಮ್ಮೇಳನ ಬಂತು. ಹೀಗೆ ಮೊದಲ ರಾಷ್ಟ್ರೀಯ ಸಮಗ್ರತಾ ಮಂಡಳಿ ರಚನೆಗೊಂಡಿತು. ಈ ಮಂಡಳಿ ಎರಡು ಉಪಸಮಿತಿಗಳನ್ನು ರಚಿಸಿತು. ಆದರೆ ಸ್ವಲ್ಪ ಸಮಯದಲ್ಲೇ ಈ ಉಪಸಮಿತಿಗಳಷ್ಟೇ ಅಲ್ಲ. ರಾಷ್ಟ್ರೀಯ ಸಮಗ್ರತಾ ಮಂಡಳಿಯ ವಿಸರ್ಜಿಸಲ್ಪಟ್ಟಿತು. ಕಾರಣ ಗಡಿಗಳಲ್ಲಿ ಚೀನೀ ಕಾರ್ಯಾಚರಣೆ. ಅದು ಆಂತರಿಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ದೇಶವನ್ನು ಒಂದಾಗಿಸಿದೆಯಾದ್ದರಿಂದ ಈ ಮಂಡಳಿಯ ಅಗತ್ಯವುಳಿದಿಲ್ಲ ಎಂಬ ನಿರ್ಣಯಕ್ಕೆ ಬರಲಾಯಿತು.

ಆದರೆ ಭಾರತ-ಚೀನಾ ಗಡಿ ಘರ್ಷಣೆಗಳ ವಿರುದ್ಧ ದೇಶಾದ್ಯಂತ ಕಂಡುಬಂದ ಸಾರ್ವಜನಿಕ ಕ್ರೋಧ ಆಂತರಿಕ ಭಿನ್ನಾಭಿಪ್ರಾಯಗಳೆಲ್ಲಾ ತೊಡೆದುಹಾಕಿದೆಯೆಂಬ ಅಭಿಪ್ರಾಯ ಸರಿಯಾದ್ದಲ್ಲವೆಂದು ಕೆಲವೇ ಸಮಯದಲ್ಲಿ ಸ್ಪಷ್ಟವಾಯಿತು ಆರು ವರ್ಷಗಳ ನಂತರ, ಆಗಿನ ಪ್ರಧಾನ ಮಂತ್ರಿ ಇಂದಿರಾಗಾಂಧಿ ಇನ್ನೊಂದು ರಾಷ್ಟ್ರೀಯ ಸಮಗ್ರತಾ ಮಂಡಳಿ ರಚಿಸಬೇಕಾಗಿ ಬಂತು. ಆದರೆ ಅದೂ ಕೆಲವೇ ತಿಂಗಳಲ್ಲಿ ನಿಷ್ಕ್ರಿಯಗೊಂಡಿತು. ಈಬಾರಿ ನಿಷ್ಕ್ರಿಯ ಗೊಳ್ಳಲು ಭಾರತ-ಚೀನಾ ಗಡಿ ತಿಕ್ಕಾಟದಂತಹ ಕಾರಣಗಳೇನೂ ಇರಲಿಲ್ಲ.

ಇಂದಿರಾ ಗಾಂಧಿಯವರ ಪ್ರಧಾನ ಮಂತ್ರಿತ್ವದ ಎರಡನೇ ಅವಧಿಯಲ್ಲಿ ಮತ್ತೆ ಹೊಸ ರಾಷ್ಟ್ರೀಯ ಸಮಗ್ರತಾ ಮಂಡಳಿ ರಚಿಸಬೇಕಾಗಿ ಬಂತು. ಮತ್ತೆ ಅದು ನಿಷ್ಕ್ರಿಯಗೊಂಡಿತು.

ಮುಂದಿನ ಪ್ರಧಾನಮಂತ್ರಿ (ರಾಜೀವ ಗಾಂಧಿ) ಮತ್ತೊಂದು ಸಮಗ್ರತಾಮಂಡಳಿ ರಚಿಸಬೇಕಾಯಿತು. ಅದರದ್ದೂ ಹಿಂದಿನ ಮಂಡಳಿಗಳದ್ದೇ ಗತಿಯಾಯಿತು.

ಕಳೆದ ಚುನಾವಣೆಗಳಲ್ಲಿ ರಾಜೀವ ಗಾಂಧಿಯ ಸೋಲಿನ ನಂತರ ಬಂದ ಹೊಸ ರಾಷ್ಟ್ರೀಯರಂಗ ಸರ್ಕಾರ ಒಂದು ಹೊಸ ಸಮಗ್ರತಾ ಮಂಡಳಿ ಯನ್ನು ರಚಿಸಿತು. ಇದರ ಮೊದಲ ಸಭೆ ಏಪ್ರಿಲ್ 1990 ರಲ್ಲಿ ನಡೆಯಿತು. ಎರಡನೇ ಸಭೆ ಸೆಪ್ಟೆಂಬರ್‌ನಲ್ಲಿ ನಡೆಯಿತು. ಮೂರನೇ ಸಭೆ ಡಿಸೆಂಬರ್‌ನಲ್ಲಿ ನಡೆಯಬೇಕೆಂದು ತೀರ್ಮಾನಿಸಲಾಗಿತ್ತು.

ಹೀಗೆ ರಾಷ್ಟ್ರೀಯ ಸಮಗ್ರತಾ ಮಂಡಳಿಗಳ ಸರಣಿಯಲ್ಲಿ ರಾಷ್ಟ್ರೀಯ ರಂಗ ಸರಕಾರ ರಚಿಸಿದ ಈ ಮಂಡಳಿ ಮೊತ್ತ ಮೊದಲ ಬಾರಿಗೆ ಒಂದು ಕಾರ್ಯನಿರ್ವಹಿಸುವ ಸಂಸ್ಥೆಯಾಗಿ ಮೂಡಿಬರುತ್ತಲಿತ್ತು.

ಇದು ಹೇಗಾಯಿತು? ಇದಕ್ಕೆ ಮುಖ್ಯ ಕಾರಣ ಈಗ ದೇಶದ ಐಕ್ಯತೆಗೆ, ಸಮಗ್ರತೆಗೆ ಬೆದರಿಕೆ-ಜಾತೀಯತೆ, ಕೋಮುವಾದ, ಭಾಷಾಂಧತೆ, ಸಂಕುಚಿತ ಪ್ರಾದೇಶಿಕತೆಗಳ ಬೆದರಿಕೆ-ಹಿಂದೆಂದಿಗಿಂತಲೂ ಗಂಭೀರವಾಗಿರುವುದು. ಜಮ್ಮು-ಕಾಶ್ಮೀರ, ಪಂಜಾಬ್, ರಾಮಜನ್ಮಭೂಮಿ-ಬಾಬ್ರಿ-ಮಸೀದೆ ವಿವಾದ ಅಸ್ಸಾಂನಲ್ಲಿ ಉಲ್ಫಾ ಚಟುವಟಿಕೆಗಳು ಮತ್ತು ಉತ್ತರ ಭಾರತದಲ್ಲಿ ಮೀಸಲಾತಿ-ವಿರೋಧಿ ಚಳುವಳಿ ಇಂದು ರಾಷ್ಟ್ರೀಯ ಐಕ್ಯತೆಗೆ ಸವಾಲು ಒಡ್ಡಿರುವ ಈ ಪ್ರಶ್ನೆಗಳನ್ನು ಪಟ್ಟಿ ಮಾಡಿದರೇ ಸಾಕು-ಎಲ್ಲಾ ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳು ಸಂಘಟಿತರಾಗಿ ಈ ಬೆದರಿಕೆಗಳನ್ನು ಎದುರಿಸದಿದ್ದರೆ ಸ್ವಾತಂತ್ರ್ಯದ ಮೊದಲಿನ ಭಾರತ 1947 ರಲ್ಲಿ ಛಿದ್ರಗೊಂಡಂತೆ, ಈಗಿನ ಭಾರತ ಸಂಘ ಛಿದ್ರಗೊಳ್ಳುವ ಭಯ ಎದುರಿಗೆ ನಿಲ್ಲುತ್ತದೆ.

ಇವುಗಳಲ್ಲಿ ಕೆಲವು (ಜಮ್ಮು-ಕಾಶ್ಮೀರ, ಪಂಜಾಬ್) ಸಮಸ್ಯೆಗಳಿಗೆ ಒಂದು ವಿದೇಶೀ ಆಯಾಮ-ವಿದೇಶೀ ಶಕ್ತಿಗಳ ಕೈವಾಡ-ಇದೆ. ಉಳಿದವುಗಳು ದೇಶದೊಳಗಿನ ರಾಜಕೀಯ-ಸಾಮಾಜಿಕ ಸನ್ನಿವೇಶದ ಫಲ. ಜಾತಿ ಕೋಮುಗಳು ಇತ್ಯಾದಿ ಅನ್ಯ ಕೃತೆಯ ಅಂಶಗಳಾಗುತ್ತಿರುವುದರ ಫಲ.

ಇಲ್ಲಿ ಸಿ.ಪಿ.ಐ.(ಎಂ) ಕಾರ್ಯಕ್ರಮ ಹೇಳಿರುವ ಒಂದು ಅಂಶವನ್ನು ನೆನಪಿಸಿಕೊಳ್ಳುವುದು ಸೂಕ್ತ.

".....ಈಗಿನ ಭಾರತೀಯ ಸಮಾಜ ಒಂದೆಡೆ ಗುತ್ತೇದಾರಿ ಬಂಡವಾಳಶಾಹಿಯ ಪ್ರಾಬಲ್ಯದೊಂದಿಗೆ, ಮತ್ತೊಂದೆಡೆ ಜಾತಿ, ಕೋಮು, ಬುಡಕಟ್ಟು ರಚನೆಗಳು ಇರುವ ಒಂದು ವಿಚಿತ್ರ ಮಿಶ್ರಣ. ಆದ್ದರಿಂದ ಬಂಡವಾಳಶಾಹಿಯ ಮೊದಲಿನ ಸಮಾಜವನ್ನು ನಾಶಮಾಡ ಬಯಸುವ ಎಲ್ಲಾ ಪ್ರಗತಿಪರ ಶಕ್ತಿಗಳನ್ನು ಒಂದುಗೂಡಿಸುವ ಮತ್ತು ಇವುಗಳಲ್ಲಿ ಕ್ರಾಂತಿಕಾರಿ ಶಕ್ತಿಗಳನ್ನು ಕ್ರೋಢೀಕರಿಸಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಅತ್ಯಂತ ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಅನುವು ಮಾಡಿಕೊಡುವ, ಆ ಮೂಲಕ ಸಮಾಜವಾದದತ್ತ ಪರಿವರ್ತನೆಗೆ ಅಡಿಗಲ್ಲು ಹಾಕುವ ಹೊಣೆ ಕಾರ್ಮಿಕ ವರ್ಗ ಮತ್ತು ಅದರ ಪಕ್ಷದ ಮೇಲೆ ಬಿದ್ದಿದೆ.

ನೆಹರೂರವರು ಜಾತೀಯತೆ, ಕೋಮುವಾದ, ಬುಡಕಟ್ಟು ಪ್ರತ್ಯೇಕತೆ, ಭಾಷಾ, ಪ್ರಾದೇಶಿಕ ಸಂಕುಚಿತತೆ ರಾಷ್ಟ್ರೀಯ ಐಕ್ಯತೆಗೆ 'ಮಾರಕ ಎಂದು ಹೇಳುವಾಗ ಅವರು ಈ ವಿಘಟನಾಕಾರಿ ಅಂಶಗಳಿಗೂ, ಬ್ರಿಟಿಶರ ಆಳ್ವಿಕೆಯಲ್ಲಿ ಮತ್ತು ನಂತರ ಕೂಡಾ ಯಾವ ತರಹದ ಸಮಾಜ ಕಟ್ಟಲಾಯಿತೋ ಅದಕ್ಕೂ ಇರುವ ಸಂಬಂಧ ಕಾಣದಾದರು. ಹಿಂದೂ ಸಮಾಜದಲ್ಲಿ ಜಾತಿ ಪದ್ಧತಿ, ಧಾರ್ಮಿಕ ಕೋಮುಗಳ ಮುಖಂಡರಲ್ಲಿ ಮತಾಂಧತೆ ಸಾವಿರಾರು ಮಂದಿಯನ್ನುದೇಶದ ಮುಖ್ಯ ಪ್ರವಾಹದಿಂದ ದೂರವಿಟ್ಟ ಬುಡ ಕಟ್ಟು ವ್ಯವಸ್ಥೆ, ಹತ್ತಾರು ಅಭಿವೃದ್ಧಿ ಹೊಂದಿದ ಭಾಷೆಗಳ, ಉಪಭಾಷೆಗಳ ನಡುವಿನ ಅಸಮಾನತೆ ಮುಂತಾದವುಗಳಿಂದ ಕೂಡಿದ ಸಮಾಜಕ್ಕೂ. ಈ ವಿಘಟನಾಕಾರಿ ತತ್ವಗಳಿಗೂ ಇರುವ ಸಂಬಂಧ ಕಾಣದಾದರು.

ಇಂದು ರಾಷ್ಟ್ರೀಯ ಸಮಗ್ರತಾ ಮಂಡಳಿಗಳ ಕಳೆದ ಮೂರು ದಶಕಗಳ ಪ್ರಯೋಗದ ಪರಾಮರ್ಶೆ ನಡೆಸಲು ಸಾಧ್ಯವಿರುವ ನಮಗೆ ದೇಶದ ಐಕ್ಯತೆಯನ್ನು ಬೆಸೆಯುವ ಪ್ರಜ್ಞಾಪೂರ್ವಕ ಪ್ರಯತ್ನ ನಡೆಸುವ ಅಗತ್ಯ ಎಷ್ಟು ತುರ್ತಿನದು ಎಂದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಈ ಮುಂದೆ ಕೊಟ್ಟಿರುವ ಜಾತ್ಯತೀತ, ಪ್ರಜಾಪ್ರಭುತ್ವ ಕಾರ್ಯಕ್ರಮ ಇಂತಹ ಪ್ರಯತ್ನಗಳಿಗೆ ಅಡಿಗಲ್ಲಾಗಬಲ್ಲುದು.

★ ಜಾತಿ ಸಮಾಜದ ವಿರುದ್ಧ ಮತ್ತು ಸಾಮಾಜಿಕ ಸಮಾನತೆಯ ಒಂದು ಹೊಸ ಸಮಾಜ ಸೃಷ್ಟಿಸುವ ಒಂದು ಅವಿರತ, ಸ್ಥಿರ ಹೋರಾಟ.

★ ಧರ್ಮವನ್ನು ರಾಜಕೀಯದೊಂದಿಗೆ ಬೆರೆಸುವ ಧಾರ್ಮಿಕ ಮುಖಂಡರ ಪ್ರವೃತ್ತಿಯ ವಿರುದ್ಧವೂ ಅಷ್ಟೇ ಸ್ಥಿರ, ಅವಿರತ ಹೋರಾಟ-ಧರ್ಮ ಮತ್ತು ರಾಜಕೀಯವನ್ನು ಸಂಪೂರ್ಣವಾಗಿ ಬೇರ್ಪಡಿಸುವ ಜಾತ್ಯತೀತ ಪರಿಕಲ್ಪನೆಯ ಕಟ್ಟು ನಿಟ್ಟಾದ ಪಾಲನೆ.

★ ರಾಷ್ಟ್ರೀಯ ಐಕ್ಯತೆ ಮತ್ತು ಶಕ್ತಿಶಾಲೀ ಕೇಂದ್ರ ಹಾಗೂ ರಾಜ್ಯಗಳಿಗೆ ಸಾಧ್ಯವಾದಷ್ಟು ವ್ಯಾಪಕವಾದ ಸ್ವಾಯತ್ತತೆಯ ರಸಮಿಶ್ರಣ ಹೊಂದಿರುವ ಒಂದು ನೈಜ ಒಕ್ಕೂಟ ರಚನೆ ರೂಪಿಸುವುದು: ವಿಪರೀತ ಕೇಂದ್ರೀಕೃತಗೊಂಡ ರಾಜಕೀಯಸಂವಿಧಾನ ವ್ಯವಸ್ಥೆಗೆ ಹಾಗೂ ಅದೇ ರೀತಿ ಒಂದು ಬಲವಾದ, ಶಕ್ತಿಶಾಲಿ ಕೇಂದ್ರ ಅಗತ್ಯವಿಲ್ಲವೆನ್ನುವ ಪ್ರವೃತಿಗೆ ಬದ್ಧ ವಿರೋಧ.

★ ಎಲ್ಲಾ ಭಾರತೀಯ ಭಾಷೆಗಳಿಗೆ ಸಂಪೂರ್ಣ ಸಮಾನತೆ-ಯಾವ ಒಂದು ಭಾಷೆಯನ್ನು ಇನ್ನೊಂದು ಭಾಷೆಗಿಂತ ಶ್ರೇಷ್ಠಎಂದು ಪರಿಗಣಿಸಬಾರದು. ವಿವಿಧ ಭಾಷಾ-ಸಾಂಸ್ಕೃತಿಕ ಗುಂಪುಗಳ ನಡುವೆ ವ್ಯಾಪಕ ಸಂಬಂಧಗಳ ಬೆಳವಣಿಗೆಗೆ ಗಂಭೀರ ಪ್ರಯತ್ನಗಳನ್ನು ನಡೆಸಬೇಕು.

★ ದೇಶದ ಒಂದಿಲ್ಲೊಂದು ಭಾಗದಲ್ಲಿರುವ ವಿವಿಧ ಬುಡಕಟ್ಟು ಗುಂಪುಗಳ ಸಾಮಾಜಿಕ – ರಾಜಕೀಯ ಹಿತಾಸಕ್ತಿಗಳ ರಕ್ಷಣೆ.

# ರಾಷ್ಟ್ರೀಯ ಐಕ್ಯತೆಗಾಗಿ ಹೋರಾಟ ಸ್ವಾತಂತ್ರ್ಯ ಹೋರಾಟದಷ್ಟೇ ಮಹತ್ವಪೂರ್ಣ

## ಎಡಪಕ್ಷಗಳು ಮತ್ತು ರಾಷ್ಟ್ರೀಯ ರಂಗ ರೂಪಿಸಿ ಚಳುವಳಿಯಲ್ಲಿ ನಮ್ಮೆಲ್ಲಾ ಶಕ್ತಿ, ಸಾಮ ನಿಪುಣತೆಗಳನ್ನು ತೊಡಗಿಸಲು ಕರೆ ನೀ

**ಕಾಂ. ಹರ್ಕಿಶನ್‌ಸಿಂಗ್ ಸುರ್ಜಿತ್**

ಪುಟ 10ರಿಂದ

ಭಿನ್ನಮತೀಯರು ಹಾಗೂ ಕಾಂಗ್ರೆಸ್(ಐ) ಬಿ.ಜೆ.ಪಿ. ಆರ್.ಎಸ್.ಎಸ್. ವಿ.ಹೆಚ್.ಪಿ.ಯ ಸವಾಲನ್ನು ಎದುರಿಸಿದ ವಿ.ಪಿ. ಸಿಂಗ್ ಸರ್ಕಾರವನ್ನು ಉರುಳಿಸಿರುವುದು ದುರದೃಷ್ಟಕರ. ಕೇಂದ್ರದಲ್ಲಿ ಈ ಕ್ರಿಮಿನಲ್ ಕೃತ್ಯ ನಡೆಸಿದ ಮೇಲೆ ರಾಜ್ಯಗಳಲ್ಲಿ ಇಂತಹಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ವಿ.ಪಿ.ಸಿಂಗ್ ಸರಕಾರ ಆರಂಭದಲ್ಲಿ ಈ ವಿಷಯದಲ್ಲಿ ಚಂಚಲತೆ ತೋರಿದರೂ ನಂತರ ದೃಢ ನಿಲುವು ತಳೆಯಿತು. ಆದ್ದರಿಂದ ಈ ವಿಷಯದಲ್ಲಿ ಅದನ್ನು ಉರುಳಿಸುವುದು ಅನೀತಿಯುತ ಹಾಗೂ ಸಮಯಸಾಧಕ ಕೃತ್ಯವಾಗುತ್ತದೆ ಎಂದು ಎಡಪಕ್ಷಗಳು ಹಿಂದೆಯೇಎಚ್ಚರಿಸಿದವು.

ಹನ್ನೊಂದು ತಿಂಗಳೊಳಗೆ ಭಿನ್ನಮತೀಯರ ಸರಕಾರವೊಂದು ಪ್ರಮುಖ ಪಕ್ಷದ ಬೆಂಬಲದಿಂದ ಜನರ ಆದೇಶವನ್ನು ಉಲ್ಲಂಘಿಸಿ ಅಧಿಕಾರಕ್ಕೆ ಬಂದಿರುವುದು ಭಾರತೀಯ ಸಂಸತ್ತಿನ ಇತಿಹಾಸದಲ್ಲೇ ಮೊದಲ ಸಲ. ಹಿಂದಿನ ದಿನವಷ್ಟೇ ರಚನೆಗೊಂಡ ಪಕ್ಷವೊಂದು ಅಧಿಕಾರ ವಹಿಸಿಕೊಳ್ಳುವಂತಾಯಿತು.

ಚರಣ್‌ಸಿಂಗ್ ಸರ್ಕಾರದ ಹೋಲಿಕೆಯನ್ನು ಈ ಸಂದರ್ಭದಲ್ಲಿ ಕೊಡಲಾಗುತ್ತಿದೆ. ಆದರೆ ಅದು ನಡೆದದ್ದು ಆಗಿನ ಜನತಾಪಕ್ಷದೊಳಗೆ ಎರಡು ತಿಂಗಳು ಹಿಂದಿನ ಜನಸಂಘ ಸದಸ್ಯರ ದ್ವಂದ್ವ ಸದಸ್ಯತ್ವದ ಬಗ್ಗೆ ಹೋರಾಟದಿಂದಾಗಿ ನಡೆದ ವಿಭಜನೆಯಿಂದ ಎಂಬ ಅಂಶವನ್ನು ಸದ್ಯ ಬದಿಗಿಡೋಣ. ಆದರೆ ಆಗ ಇದೇ ಚಂದ್ರಶೇಖರ್‌ರವರೇ ಆಗಿನ ರಾಷ್ಟ್ರಪತಿಗೆ ಬರೆದ ಪತ್ರದಲ್ಲಿ "ಪಕ್ಷಾಂತರಿಗಳಿಗೆ ಸರಕಾರ ರಚಿಸಲು ಅವಕಾಶ ನೀಡುವುದು ಅಸಮರ್ಥನೀಯ ಅನೀತಿಯುತ ಕ್ರಮ ಎಂದಿದ್ದರು!"

ರಾಜಕೀಯ ಪಕ್ಷಗಳು ಯಾವುದೇ ನಿರ್ಣಯಕ್ಕೆ ಬರುವಾಗ ಅದರ ಹಿಂದೆ ಸುಸಂಬದ್ಧ ತರ್ಕ ಇರಬೇಕು. ಆದರೆ ಈಗ ನಡೆದಿರುವುದೆಲ್ಲ ಕೇವಲ ಅಧಿಕಾರಕ್ಕಾಗಿ. ಕಾಂಗ್ರೆಸ್(ಐ)ನ್ನು ವಿರೋಧಿಸಿ ಗೆದ್ದು ಬಂದವರು ಕಾಂಗ್ರೆಸ್(ಐ)ನೊಂದಿಗೆ ಕೈ ಮಿಲಾಯಿಸಿದರು ಅಧಿಕಾರಪಡೆಯಲು. ಚುನಾವಣೆಗಳ ಸಮಯದಲ್ಲಿ ಅವರನ್ನು ಖಂಡಿಸುತ್ತಿದ್ದವರು ಈಗ ಅವರ ಬೆಂಬಲಕ್ಕೆ ಧಾವಿಸಿದರು-ಮತ್ತೆ ಅಧಿಕಾರಕ್ಕೆ ಬರುವ ಅವಕಾಶ ಗಿಟ್ಟಿಸಲು. ಬಹುಶಃ ಭಾರತೀಯ ಜನತೆ ತಮ್ಮ ಈ ಸಮಯಸಾಧಕ ಕೂಟವನ್ನು ಅರಿತು ಕೊಳ್ಳಲಾರದಷ್ಟು ಹಿಂದುಳಿದವರು ಎಂದು ಇವರು ಭಾವಿಸುತ್ತಿರುವಂತಿದೆ.

ಚಂದ್ರಶೇಖರ್ ಕಾಂಗ್ರೆಸ್(ಐ) ಧೋರಣೆಗಳನ್ನು ಜಾರಿಗೆ ತರುತ್ತಾರೆ ಎಂದು ಕಾಂಗ್ರೆಸ್ (ಐ) ಹೇಳಿದೆ. ಚಂದ್ರಶೇಖರ್ ಕೂಡಾ ಅದನ್ನು ಸ್ವೀಕರಿಸುವುದಾದರೆ, ಕನಿಷ್ಠ ಎರಡೂವರೆ ದಶಕಗಳ ಕಾಲ ಕಾಂಗ್ರೆಸ್ ಧೋರಣೆಗಳ ವಿರುದ್ಧ ಹೋರಾಡುತ್ತಾ ಬಂದ ವ್ಯಕ್ತಿಯಿವರು!

ಈ ಸಮಯಸಾಧಕ ಫಲ ಈಗಾಗಲೇ ಕಾಣಬರಲಾರಂಭಿಸಿದೆ. ರಾಜಸ್ತಾನದಲ್ಲಿ ಬಿ.ಜೆ.ಪಿ.ಸರಕಾರಕ್ಕೆ ಚಂದ್ರಶೇಖರ್ ಗುಂಪು ಬೆಂಬಲ ನೀಡಿದೆ. ಅದುವರೆಗೂ ಬಿ.ಜೆ.ಪಿ. ಸರಕಾರವನ್ನು ವಜಾ ಮಾಡಬೇಕೆನ್ನುತ್ತಿದ್ದ ಕಾಂಗ್ರೆಸ್(ಐ) ಬಾಯಿ ಮುಚ್ಚಿ ಕೂತಿದೆ!


ಬಿ.ಜೆ.ಪಿ ತನ್ನ ಹೋರಾಟದ 'ಎರಡನೇ ಘಟ್ಟ'ಕ್ಕೆ ಇಳಿಯುವಾಗ ಚಂದ್ರಶೇಖರ್ ಅದರೊಡನೆ ಒಂದು ಒಪ್ಪಂದಕ್ಕೆ ಬಂದು ಬೆಂಬಲ ಗಿಟ್ಟಿಸಲು ಪ್ರಯತ್ನಿಸುತ್ತಿರುವಂತಿದೆ. ನ್ಯಾಯಾಲಯ ತೀರ್ಪು ನೆರವಾಗುವುದಿಲ್ಲ ಎಂದು ಅವರ ತಮ್ಮ ಮೊದಲ ಹೇಳಿಕೆಯಲ್ಲಿ ತಿಳಿಸಿದುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅದ್ವಾಣಿ, ವಾಜಪೇಯಿಯವರೊಡನೆ ದೀರ್ಘಮಾತುಕತೆಗಳ ನಂತರ ಅವರ ನಿಲುವು ತಮ್ಮದಕ್ಕೆ ಹತ್ತಿರವಾಗಿದೆ ಎಂದು ಅದ್ವಾಣಿ 'ಮೆಚ್ಚುಗೆ' ವ್ಯಕ್ತಪಡಿಸಿದರು.

ಬಹುಶಃ ಕೆಲವು ಹಿಂದೂ, ಮುಸ್ಲಿಂ ಮುಖಂಡರನ್ನು ಒತ್ತಾಯಿಸಿ ಎರಡೂ ಕೋಮುಗಳಿಗೆ ಒಪ್ಪಿಗೆಯಾಗುವ ಇತ್ಯರ್ಥ ತರಬಹುದು ಎಂದು ಹಿಂದೆ ಕೆಲವು ಜನತಾದಳ ಮುಖಂಡರು ಭಾವಿಸಿದಂತೆ ಚಂದ್ರಶೇಖರ್ ಕೂಡಾ ಯೋಚಿಸುತ್ತಿರಬೇಕು.

ಇದು ನಿಜವಾದರೆ ಚಂದ್ರಶೇಖರ್‌ಗೆ ಈಗಿನ ರಾಜಕೀಯ ಸನ್ನಿವೇಶ ಏನೂ ಅರ್ಥವಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಆರು ತಿಂಗಳು ಹಿಂದೆ ಸಾಧ್ಯವಾಗಬಹುದಾದದ್ದು ಕೂಡಾ ಈಗ ಅಸಾಧ್ಯ ವಿ.ಹೆಚ್.ಪಿ. ಬಿ.ಜೆ.ಪಿ. ಪ್ರಚಾರದ ನಂತರ ಅಕ್ಟೋಬರ್ ಕೊನೆಯ ವಾರದ, ನವಂಬರ್ ಮೊದಲ ವಾರದ ಘಟನೆಗಳ ನಂತರ ಬಿ.ಜೆ.ಪಿ., ವಿಹೆಚ್‌ಪಿ. ಒಂದು ತರ್ಕಬದ್ಧ ಇತ್ಯರ್ಥಕ್ಕೆ ಬರುತ್ತವೆಯೇ? ವಿವಾದಾಸ್ಪದ ಸ್ಥಳದಲ್ಲಿ, ಗರ್ಭಗೃಹ ಇರದೇ ದೇವಸ್ಥಾನ ಕಟ್ಟುವ ಯಾವುದೇ ಇತ್ಯರ್ಥವನ್ನು ಒಪ್ಪುವುದಿಲ್ಲ ಎಂದು ಅವು ಮತ್ತೆ ಸ್ಪಷ್ಟಪಡಿಸಿವೆ. ದೇಶಾದ್ಯಂತ ಲಕ್ಷಾಂತರ ಜನರನ್ನು ಆಣಿನೆರೆಸಿದ ನಂತರ ಅವರು ಇದಕ್ಕಿಂತಕಮ್ಮಿಗೆ ಒಪ್ಪಿಕೊಳ್ಳುತ್ತಾರೆಯೇ? ಎರಡನೇ ಘಟ್ಟದ ಕಾರ್ಯಕ್ರಮವಂತೂ ಇದರ ರಾಜಕೀಯ ಲಾಭ ಪಡೆಯುವ ಸ್ಪಷ್ಟ ಗುರಿ ಹೊಂದಿದೆ. ಅತ್ತ ಈಗಿನ ಸ್ಥಿತಿಯಲ್ಲಿ ಯಾವುದೇ ಮುಸ್ಲಿಂ ಮುಖಂಡ ಮಸೀದಿ ಕೆಡವಲು, ಅಥವಾ ಮಸೀದಿಯ ಒಂದು ಭಾಗವನ್ನು ದೇವಸ್ಥಾನದ ಭಾಗವಾಗಿ ಮಾಡಲು ಒಪ್ಪುವ ಸ್ಥಿತಿಯಿಲ್ಲ. ಯಾವುದೇ ಆಮಿಷ ತೋರಿಸಿ ಒಪ್ಪಿಸಿದರೂ ಜನಸಾಮಾನ್ಯರು ಇಂತಹ ಇತ್ಯರ್ಥವನ್ನು ಒಪ್ಪುವುದಿಲ್ಲ.

ಕೋಮುವಾದದ ವಿರುದ್ಧ ಹಲವಾರು ರ್‍ಯಾಲಿಗಳಲ್ಲಿ ಭಾಗವಹಿಸಿದ ಚಂದ್ರಶೇಖರ್‌ರವರಿಗೇ ಈ ಕೋಮುಶಕ್ತಿಗಳು ಜನಸಾಮಾನ್ಯರಲ್ಲಿ ಎಂತಹ ವಿಷ ಹರಡಿದ್ದಾರೆ ಎಂದು ಗೊತ್ತಿದೆ. ಆದರೆ ಅವರು ಅದನ್ನು ಮರೆಯಬಯಸುತ್ತಾರೆ–ನಿರ್ಲಕ್ಷಿಸಬಯಸುತ್ತಾರೆ. ಅಧಿಕಾರದಲ್ಲಿರಲು ಜನತಾದಳ (ಎಸ್). ಬಿ.ಜೆ.ಪಿ. ಹಾಗೂ ಕಾಂಗ್ರೆಸ್ (ಐ) ನೊಂದಿಗೆ ತಮ್ಮ ನೀತಿಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುತ್ತ ಸಾಗುತ್ತಿದೆ. ಇದು ದೇಶದ ಹಿತದೃಷ್ಟಿಯಿಂದ ಅತ್ಯಂತ ವಿಷಾದಕರ.

ಕಳೆದ ವರ್ಷ ಚುನಾವಣೆಗಳಲ್ಲಿ ಹಿಂದೂ ಬಹುಸಂಖ್ಯಾತರ ಬೆಂಬಲ ಗಿಟ್ಟಿಸಲು ವಿವಾದಾಸ್ಪದ ಸ್ಥಳದಲ್ಲಿ 'ಶಿಲಾನ್ಯಾಸ'ಕ್ಕೆ ಅವಕಾಶ ಕೊಟ್ಟ ಕಾಂಗ್ರೆಸ್(ಐ) ಈ



# ಈ ಸರಕಾರ ಬಹಳ ದಿನ ಉಳಿಯುವುದಿಲ್ಲ"

—ಇ.ಎಂ.ಎಸ್.

ಚಂದ್ರಶೇಖರ್ ಸರಕಾರ ಬಹಳ ದಿನ ಉಳಿಯುವುದಿಲ್ಲವೆಂಬುದು ಸ್ವಯಂವೇದ್ಯ. ಚುನಾವಣೆ ನಡೆಯಲೇಬೇಕಾಗುತ್ತದೆ ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ಇ.ಎಂ.ಎಸ್. ನಂಬೂದರಿಪ್ಪಾಡ್ ಹೇಳಿದ್ದಾರೆ. ಅವರು ಟೈಂಸ್ ಆಫ್ ಇಂಡಿಯಾ ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ "ನೀವು ಮಧ್ಯಾವಧಿ ಚುನಾವಣೆ ಬೇಕೆನ್ನುತ್ತೀರಾ?" ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಹೀಗೆಂದಿದ್ದಾರೆ. "ನಮಗೆ ಮಧ್ಯಾವಧಿ ಚುನಾವಣೆಯ ಬಗ್ಗೆ ಏನೂ ಭಯವಿಲ್ಲ. ಆದರೆ ನಾವು ಕೇಳಿದೆವೆಂದು ಅದು ನಡೆಯುವುದಿಲ್ಲ ಎಂದೂ ನಮಗೆ ಗೊತ್ತಿದೆ. ಆದ್ದರಿಂದ ನಾವು ಅದನ್ನೊಂದು ಚಳುವಳಿಯ ವಿಷಯವನ್ನಾಗಿಸಬಯಸುವುದಿಲ್ಲ" ಎಂದು ಅವರು ಉತ್ತರಿಸಿದರು.

ವಿ.ಪಿ.ಸಿಂಗ್ ಸರಕಾರದೊಡನೆ ದೃಢವಾಗಿ ನಿಂತ ಎಡಪಕ್ಷಗಳು ವಿಶೇಷವಾಗಿ ಸಿ.ಪಿ.ಐ.(ಎಂ), ಕೋಮುವಾದಿ ಶಕ್ತಿಗಳ ವಿರುದ್ಧ, ಕಾಂಗ್ರೆಸ್(ಐ) ಪರ ಲಾಬಿಗಳ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಸಿ.ಪಿಐ.(ಎಂ)ನ ಪ್ರಧಾನ ಕಾರ್ಯದರ್ಶಿಯನ್ನು ಸಂದರ್ಶಿಸಿದುದಾಗಿ ಈ ಸಂದರ್ಶನ ಆರಂಭದಲ್ಲಿ ಪತ್ರಿಕೆ ಹೇಳಿದೆ.

ಸಂದರ್ಶನದ ಇತರ ಕೆಲವು ಅಂಶಗಳನ್ನು ಮುಂದೆ ಕೊಡಲಾಗಿದೆ.

**ಪ್ರಶ್ನೆ:** ಕೋಮುವಾದದ ಪ್ರಶ್ನೆಯಲ್ಲಿ ವಿ.ಪಿ.ಸಿಂಗ್ ತಳೆದ ನಿಲುವಿನಿಂದಾಗಿ ಎಡಪಕ್ಷಗಳು ವಿ.ಪಿ.ಸಿಂಗ್‌ಗೆ ಬೇಷರತ್ ಬೆಂಬಲ ನೀಡಿದವು. ಆದರೆ ವಾಸ್ತವವಾಗಿ ಈ ಬಗ್ಗೆ ವಿ.ಪಿ.ಸಿಂಗ್, ಚಂದ್ರಶೇಖರ್ ಮತ್ತು ಕಾಂಗ್ರೆಸ್ ನಡುವೆ ಎದ್ದು ಕಾಣುವ ವ್ಯತ್ಯಾಸವಿಲ್ಲದಿದ್ದರೂ ವಿ.ಪಿ.ಸಿಂಗ್‌ರನ್ನೇ ಏಕೆ ಬೆಂಬಲಿಸಿದಿರಿ?

**ಇ.ಎಂ.ಎಸ್:** ವ್ಯತ್ಯಾಸವಿಲ್ಲವೆಂಬ ನಿಮ್ಮ ಅಭಿಪ್ರಾಯ ನಾನು ಒಪ್ಪುವುದಿಲ್ಲ. ನಿಜ ಸಂಗತಿಯೆಂದರೆ ಕಳೆದ ಚುನಾವಣೆಯ ಮೊದಲು ನವಂಬರ್ 9, 1989 ರಂದು ಶಿಲಾನ್ಯಾಸಕ್ಕೆ ಅನುಮತಿ ನೀಡಿರುವವರು ರಾಜೀವಗಾಂಧಿ. ತದ್ವಿರುದ್ಧವಾಗಿ ಅಯೋಧ್ಯೆಯ ಪ್ರಶ್ನೆಯ ಮೇಲೆ ವಿ.ಪಿ.ಸಿಂಗ್ ತನ್ನ ಸರಕಾರವನ್ನೇ ಪಣಕ್ಕಿಟ್ಟರು. ವಿ.ಪಿ. ಸಿಂಗ್ ಸರಕಾರ ರಚಿಸಿದಾಗ ಬಿ.ಜೆ.ಪಿ. ಈ ಪ್ರಶ್ನೆಯ ಬಗ್ಗೆ ಬಾಯಿ ತೆರೆಯಲಿಲ್ಲ. ನಂತರವಷ್ಟೇ ಇದನ್ನು ಮುಂದಕ್ಕೊಡ್ಡಿ ತಮ್ಮ ಬೇಡಿಕೆಗಳಿಗೆ ತಲೆಬಾಗದಿದ್ದರೆ ಅಧಿಕಾರ ದಿಂದ ಇಳಿಸುವುದಾಗಿ ಬೆದರಿಕೆ ಹಾಕಿದರು. ಇನ್ನು ಚಂದ್ರಶೇಖರ್ ಬಗ್ಗೆ ಹೇಳುವುದಾದರೆ ಪ್ರಧಾನಮಂತ್ರಿಯ ಆಸನ ಗಿಟ್ಟಿಸುವ ತನ್ನ ಒಂದಂಶದ ಕಾರ್ಯಕ್ರಮವನ್ನು ಜ್ಯಾರಿಗೆ ತರಲು ಅನುಕೂಲವಾಗುವಂತೆ ಪ್ರತಿಯೊಂದು ಪ್ರಶ್ನೆಯನ್ನೂ ಆತ ಎಬ್ಬಿಸುತ್ತಿದ್ದರು.

**ಪ್ರಶ್ನೆ:** ಉತ್ತರ ಪ್ರದೇಶದ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್‌ರವರೊಂದಿಗೆ ಸಿ.ಪಿ.ಐ.(ಎಂ) ಸದಾ ನಿಕಟ ಸಂಪರ್ಕವಿತ್ತು. ರಾಷ್ಟ್ರೀಯ ರಂಗ ಸರ್ಕಾರ ಸ್ಥಾಪನೆಯಾಗುವ ಮೊದಲೇ ನಿಮ್ಮ ಪಕ್ಷಕ್ಕೂ ಅವರ ಕ್ರಾಂತಿಕಾರಿ ಮೋರ್ಚಾಕ್ಕೂ ಸಹಕಾರವಿತ್ತು. ಹೀಗಿರುವಾಗ ಚಂದ್ರಶೇಖರ್‌ರೊಂದಿಗೆ . ಕೈಮಿಲಾಯಿಸುವ ಅವರ ನಿರ್ಣಯದ ಬಗ್ಗೆ ನಿಮಗೆ ಏನನ್ನಿಸುತ್ತದೆ? ಇದನ್ನು ಹೇಗೆ ಅರ್ಥೈಸುತ್ತೀರಿ?

**ಇ.ಎಂ.ಎಸ್.** "ರಾಜಕೀಯದಲ್ಲಿ ಶಾಶ್ವತ ಮಿತ್ರರಿಲ್ಲ, ಶಾಶ್ವತ ಶತ್ರುಗಳಿಲ್ಲ ಕೇವಲ ಶಾಶ್ವತ ಹಿತಾಸಕ್ತಿಗಳಿರುತ್ತವೆ" ಎಂಬ ಪ್ರಸಿದ್ಧನುಡಿ ಸಿ.ಪಿ.ಐ.(ಎಂ)ಗೂ ಅನ್ವಯವಾಗುತ್ತದೆ. ನಾವು ಬೆಂಬಲಿಸುವ ಜನತಾ ದಳಕ್ಕೆ ಸೇರಿದವರಾಗಿದ್ದರು ಮುಲಾಯಂ ಸಿಂಗ್ ಯಾದವ್. ಅಲ್ಲದೆ ಕೋಮುವಾದದ ವಿರುದ್ಧ, ರಾಷ್ಟ್ರೀಯ ಐಕ್ಯತೆ ಕಾಪಾಡುವ ಹೋರಾಟದಲ್ಲಿ ನಮ್ಮೊಡನೆ ಸಹಕರಿಸುತ್ತಿದ್ದರು. ಆದ್ದರಿಂದ ನಾವು ಅವರನ್ನು ಬೆಂಬಲಿಸಿದೆವು. ಆದರೆ ಅವರು ಕೇಂದ್ರದಲ್ಲಿ ಜನತಾ ಸರಕಾರದ ಪತನ ಹಾಗೂ ಪಕ್ಷಾಂತರಿಗಳ ಚಂದ್ರಶೇಖರ್ ಸರ್ಕಾರ ಸ್ಥಾಪಿಸುವ ಸಂಚುಮಾಡಿ ಈ ಗುರಿಸಾಧನೆಗೆ ವಿಶ್ವಾಸ ಘಾತ ಬಗೆದರು.

**ಪ್ರಶ್ನೆ:** ಚಂದ್ರಶೇಖರ್ ಪ್ರಧಾನಮಂತ್ರಿಯಾದ ಬಗ್ಗೆ ನೀವು ತೀಕ್ಷ್ಣ ಟೀಕೆ ಮಾಡಿದ್ದೀರಿ. ಆದರೆ ನಿಮ್ಮ ಪಕ್ಷದ ಕೆಲವು ಸದಸ್ಯರು ಅವರ ಬಗ್ಗೆ ಕಾದು ನೋಡೋಣ ಎಂಬ ನಿಲುವು ತಳೆದಿರುವರೆಂದು ನಂಬಲಾಗಿದೆ. ನಿಮ್ಮ ಟಿಪ್ಪಣಿಯೇನು?

**ಇ.ಎಂ.ಎಸ್:** ಇತ್ತೀಚೆಗೆ ಕೆಲವು ಸಮಯದಿಂದ ಇಂತಹ ವದಂತಿಗಳು, ಮಿಥ್ಯಾಪವಾದಗಳು ನಡೆಯುತ್ತಿವೆ. ಇವೆಲ್ಲಾ ಪೂರ್ಣವಾಗಿ ಆಧಾರಹೀನ. ನಿಮಗೆ ನೆನಪಿರಬಹುದು-ಸಂಸತ್ತಿನ ಅಧಿವೇಶನದ ಸ್ವಲ್ಪ ಮೊದಲು ನಮ್ಮ ಪಕ್ಷದ ಕೇಂದ್ರಸಮಿತಿಯ ಪೂರ್ಣ ಸಭೆನಡೆದು ವಿ.ಪಿ.ಸಿಂಗ್‌ರನ್ನು ಬೆಂಬಲಿಸಲು ನಿರ್ಧರಿಸಿದೆವು. ಈಗಲೂ ನಾವು ಅದಕ್ಕೆ ಬದ್ಧರು.

**ಪ್ರಶ್ನೆ:** ಸದ್ಯ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ಬಗ್ಗೆ ಸಿ.ಪಿ.ಐ.(ಎಂ) ನಿಲುವೇನು? ಈ ವಿವಾದ ಪರಿಹಾರಕ್ಕೆ ನೀವು ಸೂಚಿಸಬಲ್ಲ ಪರಿಹಾರವೇನು?

**ಇ.ಎಂ.ಎಸ್:** ಸೆಪ್ಟೆಂಬರ್ 2 ರಂದು ಮದ್ರಾಸಿನಲ್ಲಿ ರಾಷ್ಟ್ರೀಯ ಸಮಗ್ರತಾ ಮಂಡಳಿ ಕೈಗೊಂಡ ಠರಾವನ್ನು ನಾವು ಪೂರ್ಣವಾಗಿ ಬೆಂಬಲಿಸುತ್ತೇವೆ. ಸತತ ಮಾತುಕತೆಗಳ ಪ್ರಯತ್ನ ವಿಫಲವಾದರೆ ನ್ಯಾಯಾಲಯ ವಿಚಾರಣೆಯ ಪ್ರಕ್ರಿಯೆ ನಡೆಯಬೇಕು. ಅದರ ತೀರ್ಪಿಗೆ ಎಲ್ಲರೂ ಬದ್ಧರಾಗಬೇಕು ಎಂದು ಆ ನಿರ್ಣಯ ಹೇಳಿತ್ತು. ಆದರೆ ಸಮಸ್ಯೆಯೆಂದರೆ ವಿ.ಹೆಚ್.ಪಿ. ತಾನು ಹೇಳಿದಂತೆ ಕುಣಿದರೆ ಮಾತ್ರವೇ ಮಾತುಕತೆ ಎಂಬ ನಿಲುವು ತಳೆದಿದೆ.

**ಪ್ರಶ್ನೆ:** ಬಿ.ಜೆ.ಪಿ. ಅಯೋಧ್ಯೆಯನ್ನು ಚುನಾವಣಾ ವಿಷಯವಾಗಿ ಮಾಡಲು ನಿರ್ಧರಿಸಿದೆ. ದೇಶವನ್ನು ರಕ್ತಪಾತದಿಂದ ಉಳಿಸಬೇಕಾದರೆ ಈ ಪ್ರಯತ್ನವನ್ನು ಎದುರಿಸಬೇಕು ಏಕೆಂದರೆ ಈ ಸರ್ಕಾರ ಬಹಳ ದಿನ ಇರುವ ನಿರೀಕ್ಷೆಯಿಲ್ಲ. ನಿಮ್ಮ ಪಕ್ಷ ಈ ದಿಸೆಯಲ್ಲಿ ಏನು ಯೋಚಿಸಿದೆ?

**ಇ.ಎಂ.ಎಸ್:** ಇತರ ಎಡಪಕ್ಷಗಳು ಹಾಗೂ ಜನತಾದಳದೊಂದಿಗೆ ಜಂಟಿಪ್ರಚಾರ ಪ್ರಕ್ಷೋಭೆಯ ಮೂಲಕ ಬಿ.ಜೆ.ಪಿ. ಮತ್ತದರ ಮಿತ್ರರು ಹರಿಯಬಿಟ್ಟ ಪ್ರಚಾರವನ್ನು ನಾವು ಎದುರಿಸಲು ಪ್ರಯತ್ನಿಸುತ್ತೇವೆ.

**ಪ್ರಶ್ನೆ:** ಮಂಡಲ್ ಆಯೋಗದ ವರದಿ ಬಗ್ಗೆ ನಿಮಗೆ ವಿ.ಪಿ.ಸಿಂಗ್‌ರೊಂದಿಗೆ ಭಿನ್ನಾಭಿಪ್ರಾಯವಿತ್ತು. ಏನಿದು? ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಅದೊಂದು ದೊಡ್ಡ ವಿಷಯವಾಗುವುದರಿಂದ ಈ ಭಿನ್ನಾಭಿಪ್ರಾಯಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತೀರಿ?

**ಇ.ಎಂ.ಎಸ್.** ನಮ್ಮದು ಎರಡು ಟೀಕೆಗಳಿದ್ದವು. ಮೊದಲನೆಯದಾಗಿ ಸಂಬಂಧಪಟ್ಟ ಎಲ್ಲರೊಡನೆಯೂ (ಬೆಂಬಲಿಸುವ ಪಕ್ಷಗಳು ಕೂಡಿ) ಸಮಾಲೋಚಿಸಿ ಸರ್ವಸಮ್ಮತ ಅಭಿಪ್ರಾಯ ರೂಪಿಸುವ ಬದಲು ಸರಕಾರ ಏಕಪಕ್ಷೀಯವಾಗಿ ಅದರ ಶಿಫಾರಸ್ಸುಗಳನ್ನು ಜ್ಯಾರಿಗೊಳಿಸಲು ನಿರ್ಧರಿಸಿತು. ಎರಡನೆಯದಾಗಿ, ಮೀಸಲಾತಿ ಯೋಜನೆಯಲ್ಲಿ ತಪ್ಪಿತ್ತು. ಏಕೆಂದರೆ ತಮ್ಮ ಉದ್ಯೋಗಾವಕಾಶ ಕಡಿಮೆಯಾಗಬಹುದೆಂಬ ಮುಂದುವರಿದ ಜಾತಿಗಳ ಯುವಕರ ಭಯವನ್ನು ದೂರಮಾಡಲು ಅದು ಪ್ರಯತ್ನಿಸಲಿಲ್ಲ. ಸರಕಾರ ಮೂಲತಃ ಕರ್ಪೂರಿ ಠಾಕುರ್ ರೂಪಿಸಿದ ಒಂದು ದಶಕಕ್ಕೂ ಹೆಚ್ಚು ಸಮಯದಿಂದ ಬಿಹಾರದಲ್ಲಿ ಜ್ಯಾರಿಯಲ್ಲಿರುವ ಯೋಜನೆಯ ಬಗ್ಗೆ ಪರಾಮರ್ಶಿಸಿ ಅದನ್ನು ಸೂಕ್ತ ಬದಲಾವಣೆಗಳೊಂದಿಗೆ ಅಂಗೀಕರಿಸಿದ್ದರೆ ಈ ಭಯ ನಿವಾರಣೆಯಾಗುತ್ತಿತ್ತು.

**ಪ್ರಶ್ನೆ:** ಕೈಗಾರಿಕಾ ಧೋರಣೆಗೆ ಸಂಬಂಧಪಟ್ಟಂತೆ, ವಿಶೇಷವಾಗಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಸಂಬಂಧಪಟ್ಟಂತೆ ನಿಮ್ಮ ಯೋಚನಾದಿಕ್ಕು ಚಂದ್ರಶೇಖರ್‌ರವರ ಯೋಚನಾ ದಿಕ್ಕಿನಲ್ಲೇ ಇದೆ. ಈ ವಿಷಯದಲ್ಲಿ ಸರ್ಕಾರವನ್ನು ಯಾವ ಮಟ್ಟದವರೆಗೆ ನೀವು ಬೆಂಬಲಿಸುತ್ತೀರಿ?

**ಇ.ಎಂ.ಎಸ್.** ನಾವು ಹಾಗೂ ಚಂದ್ರಶೇಖರ್ ಟೀಕಿಸಿದ ವಿ.ಪಿ.ಸಿಂಗ್‌ರ ಕೈಗಾರಿಕಾ ಧೋರಣೆ ಇದ್ದಕ್ಕಿದ್ದಂತೆ ವಿ.ಪಿ. ಸಿಂಗ್ ಆರಂಭಿಸಿದ ಧೋರಣೆಯಲ್ಲ. ಅದು ಮೂಲತಃ ಇಂದಿರಾಗಾಂಧಿ ಆರಂಭಿಸಿದ, ಆಕೆಯ ಮಗ ಬೆಳೆಸಿದ ಧೋರಣೆಗಳ ಮುಂದುವರಿಕೆಯಷ್ಟೆ. ತನ್ನ ಉಳಿವಿಗೆ ರಾಜೀವಗಾಂಧಿಯನ್ನು ಅವಲಂಭಿಸಬೇಕಾದ ಚಂದ್ರಶೇಖರ್ ಈ ವಿಷಯದಲ್ಲಿ ರಾಜೀವಗಾಂಧಿಯು ಹೇಳಿದಂತೆ ಪಾಲಿಸಬೇಕಾಗುತ್ತದೆ.

**ಪ್ರಶ್ನೆ:** ಮುಂದಿನ ಚುನಾವಣೆ ನಿರೀಕ್ಷೆಗಿಂತ ಮೊದಲೇ ನಡೆಯ ಬಹುದಾದ್ದರಿಂದ ನಿಮ್ಮ ಚುನಾವಣಾ ತಂತ್ರ ಏನಿರುತ್ತದೆ?

**ಇ.ಎಂ.ಎಸ್.** ಸ್ಪಷ್ಟ ಚುನಾವಣಾ ತಂತ್ರ ರೂಪಿಸುವುದಕ್ಕೆ ಇನ್ನೂ ಸಮಯ ಬಂದಿಲ್ಲ. ಆದರೆ ಹಲವು ವಿಷಯಗಳಂತೂ ಸ್ಪಷ್ಟ. ವಿಚ್ಛಿದ್ರಕಾರಿ ಶಕ್ತಿಗಳ ಆಕ್ರಮಣಕ್ಕೆ ಒಳಗಾಗಿರುವ ರಾಷ್ಟ್ರೀಯ ಐಕ್ಯತೆಯತ್ತ ಕಾಂಗ್ರೆಸ್(ಐ) ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಆಕ್ರಮಣಕ್ಕೆ ತುತ್ತಾಗುವ ಪ್ರಜಾಪ್ರಭುತ್ವದತ್ತ ಗಮನ ಕೇಂದ್ರೀಕರಿಸಬೇಕು. ಉದ್ಯೋಗ ನೀತಿಗಳು, ಭೂಸುಧಾರಣೆಗಳು, ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ-ಆರ್ಥಿಕ ಸಮಸ್ಯೆಗಳತ್ತ, ಶಾಂತಿ ಮತ್ತು ಅಲಿಪ್ತತೆ, ವಿಶ್ವದ ದಮನಕ್ಕೊಳಗಾದ ಜನಗಳ ಮೇಲೆ. ನವವಸಾಹತುಶಾಹಿ ಧೋರಣೆಗಳನ್ನು ಹೇರುವ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳನ್ನು ಎದುರಿಸಲು ಮೂರನೆ ಜಗತ್ತಿನ ದೇಶಗಳ ಹೋರಾಟ-ಇವು ಮುಖ್ಯ ಅಂಶಗಳಾಗಿರುವ ವಿದೇಶ ಧೋರಣೆಗಳಿಗಾಗಿ ಹೋರಾಡಲು ಸಿದ್ಧವಿರುವವರನ್ನೆಲ್ಲಾ ಒಂದು ಕೂಟ ಅಥವಾ ರಂಗದಲ್ಲಿ ಒಟ್ಟುಗೂಡಿಸಬೇಕಾಗಿದೆ.

---

ವರ್ಷ ಬಿ.ಜೆ.ಪಿ., ವಿಹೆಚ್‌ಪಿ ಕೋಮು ಭಾವೋದ್ರೇಕ ಎಬ್ಬಿಸುವಾಗ ಮೂಕ ಪ್ರೇಕ್ಷಕನಂತಿತ್ತು. ಅಕ್ಟೋಬರ್ 30, ನವೆಂಬರ್ 1 ಹಾಗೂ 2 ರಂದು ಕೂಡ ಬಿಜೆಪಿ, ವಿಹೆಚ್‌ಪಿ ನೇತೃತ್ವದಲ್ಲಿ 'ಕರಸೇವಕರು' ವಿವಾದಗ್ರಸ್ತ ಪ್ರದೇಶವನ್ನು ಬಹಳ ಗಂಭೀರ ಸನ್ನಿವೇಶದಲ್ಲಿ ರಕ್ಷಿಸುತ್ತಿದ್ದ ಭದ್ರತಾ ಪಡೆಗಳ ಮೇಲೆ ಆಕ್ರಮಣ ನಡೆಸುತ್ತಿದ್ದಾಗ ಕಾಂಗ್ರೆಸ್ (ಐ) ಬಿಜೆಪಿ, ವಿಹೆಚ್‌ಪಿ.ಯ ಮುಖಂಡರನ್ನು ಟೀಕಿಸದೆ ಭದ್ರತಾ ಪಡೆಗಳನ್ನೇ ಟೀಕಿಸಿದರು. ತಮ್ಮ ಆಳ್ವಿಕೆಯಲ್ಲಿ ಇಂತಹ ಪರಿಸ್ಥಿತಿ ಬಂದಿದ್ದಾಗ ಎಷ್ಟೊಂದು ಜೀವಗಳು ಹೋದವು ಎಂಬುದನ್ನು ಮರೆತೇ ಬಿಟ್ಟರು.

ಈಗ ಅದು ಜನತಾದಳ (ಎಸ್) ಮೂಲಕ ಬಿ.ಜೆ.ಪಿ.ಯೊಡನೆ ರಾಜಿಗೆ ತವಕಿಸುತ್ತಿದೆ. ರಾಜಸ್ಥಾನ, ಬಿಹಾರ ಮತ್ತಿತರ ಕಡೆ ನಡೆಯುತ್ತಿರುವ ಘಟನೆಗಳ ಬಗ್ಗೆ ಅದೀಗ ತುಟಿ ಬಿಚ್ಚುತ್ತಿಲ್ಲ. ಜನರು ಬೇಗನೇ ಎಲ್ಲವನ್ನೂ ಮರೆಯುತ್ತಾರೆ ಎಂದು ಅದು ನಂಬಿದಂತಿದೆ. ಹೀಗೆ ಸದ್ಯದ ರಾಜಕೀಯ ಸನ್ನಿವೇಶ ಎಡ ಒಲವಿನ, ದೇಶಪ್ರೇಮಿ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ಶಕ್ತಿಗಳಿಗೆಲ್ಲ ಒಂದು ದೊಡ್ಡ ಸವಾಲು ಎಸೆದಿದೆ ದೇಶಪ್ರೇಮ, ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವ ಆಕ್ರಮಣಕ್ಕೆ ತುತ್ತಾಗಿದೆ ದೇಶದ ಐಕ್ಯತೆ ಈ ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವದ ಅಡಿಗಲ್ಲಿನ ಮೇಲೆ ಮಾತ್ರವೇ ಸಾಧ್ಯಎಂದು ಸಂವಿಧಾನ ಸ್ಪಷ್ಟವಾಗಿ ಕಂಡಿತ್ತು.

ವಿವಿಧ ಧಾರ್ಮಿಕ ನಂಬಿಕೆಗಳಿಂದ ವಿವಿಧ ದೇಸೀ ಪಂಗಡಗಳಿಂದ, ಜನಾಂಗಗಳಿಂದ ಕೂಡಿದ ಭಾರತವು ಈ ಎಲ್ಲರಿಗೂ ಎಲ್ಲ ರೀತಿಯಲ್ಲೂ ಸಮಾನತೆಯ ಭಾವನೆ ನೀಡಿದರೆ ಮಾತ್ರವೇ ಅವರೆಲ್ಲರನ್ನೂ ದೇಶದ ಮುಖ್ಯ ಪ್ರವಾಹಕ್ಕೆ ಆಕರ್ಷಿಸಲು ಸಾಧ್ಯ.

ಕಳೆದ ನಾಲ್ಕು ದಶಕಗಳಲ್ಲಿ ನಮ್ಮ ದೇಶ ಹಲವು ಸವಾಲುಗಳನ್ನೆದುರಿಸಿದೆ. ಕಷ್ಟ - ಕಾರ್ಪಣ್ಯಗಳನ್ನು ಎದುರಿಸಿದೆ-ಪರಿಹರಿಸಿಕೊಂಡಿದೆ ಇಂದಿನ ಸವಾಲುಗಳು ಇನ್ನೂ ಗಂಭೀರ ಸನ್ನಿವೇಶ ಇನ್ನೂ ಕ್ಲಿಷ್ಟ. ಇಂತಹ ಸಮಯದಲ್ಲೇ ಕಾಂಗ್ರೆಸ್(ಐ) ಮತ್ತು ಜನತಾದಳ ಭಿನ್ನಮತೀಯರು ಜಾತ್ಯತೀತ ಶಕ್ತಿಗಳಲ್ಲಿ ಒಡಕು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಚಂದ್ರಶೇಖರ ಮತ್ತು ಕಾಂಗ್ರೆಸ್(ಐ) ವಿ.ಹೆಚ್.ಪಿ. ಮತ್ತು ಬಿ.ಜೆ.ಪಿ.ಯ ಪೋಸ್ಟರುಗಳನ್ನು, ಕರಪತ್ರಗಳನ್ನು ಕ್ಯಾಸೆಟ್ಟುಗಳನ್ನು ನೋಡುವುದು ಒಳ್ಳೆಯದು. ಯಾವ ಮೂಲಭೂತ ಮೌಲ್ಯಗಳ ಮೇಲೆ ಈ ದೇಶವನ್ನು ಕಟ್ಟಲಾಗಿದೆಯೋ, ಯಾವುದರಿಂದಾಗಿ ವಿಶ್ವದ ಜನಗಳ ಗೌರವ ಸಂಪಾದಿಸಲಾಗಿದೆಯೋ ಅವನ್ನೆಲ್ಲಾ ಅಪಮೌಲ್ಯಗೊಳಿಸುವ ಗುರಿ ಹೊಂದಿವೆ ಅವೆಲ್ಲಾ.

ಎಡಪಕ್ಷಗಳು ಇವೆಲ್ಲದರ ವಿರುದ್ಧ ಒಂದು ಅವಿರತ ದೃಢ ಹೋರಾಟ ನಡೆಸಿಕೊಂಡು ಬಂದಿವೆ. ಕೋಮುವಾದ, ಪ್ರತ್ಯೇಕತಾವಾದದ ವಿರುದ್ಧ, ದೇಶದ ಐಕ್ಯತೆಯ ರಕ್ಷಣೆಯ ಹೋರಾಟದ ಪ್ರಮುಖ ಪ್ರತಿಪಾದಕರೆಂಬ ಸ್ಥಾನಗಳಿಸಿವೆ. ಇದಕ್ಕಾಗಿ ಅವು ತೆತ್ತ ಬೆಲೆ ಅಪಾರ. ಈಗಲೂ ಕೂಡಾ ಜನತಾದಳದೊಂದಿಗೆ ದೇಶಾದ್ಯಂತ ಅಪ್ರದೇಶಪ್ರೇಮಿ, ಜಾತ್ಯತೀತ ಭಾವನೆಗಳನ್ನು ಜಾಗೃತಗೊಳಿಸಿ ಬಿ.ಜೆ.ಪಿ. ವಿಹೆಚ್‌ಪಿಗಳ ವಿಷಪೂರಿತ ಅಪಪ್ರಚಾರವನ್ನು ಎದುರಿಸಲು ನಿರ್ಧರಿಸಿವೆ.

ಈ ಹೋರಾಟ ಪ್ರಕ್ರಿಯೆಯಲ್ಲಿ ಜನತಾದಳ (ಎಸ್), ಕಾಂಗ್ರೆಸ್(ಐ) ನ ಹಿಂದಿರುವ ಜನಸಮೂಹಗಳನ್ನೂ ಒಳಗೊಳ್ಳಲು ಅವರು ತಮ್ಮ ಮುಖಂಡರ ಸಮಯಸಾಧಕತನವನ್ನು ಅರಿತುಕೊಳ್ಳುವಂತೆ ಮಾಡಲು ಪ್ರಯತ್ನಿಸಬೇಕು ಈ ಮೂಲಕ ಸಮಯಸಾಧಕ ರಾಜಕಾರಣವನ್ನು ವಿಫಲಗೊಳಿಸ ಬೇಕು.

ರಾಷ್ಟ್ರೀಯರಂಗ ಹಾಗೂ ಎಡಪಕ್ಷಗಳು, ಈಗಾಗಲೇ ಒಂದು ಕಾರ್ಯಕ್ರಮವನ್ನು ರೂಪಿಸಿವೆ. ಸಿ.ಪಿ.ಐ. (ಎಂ) ಮತ್ತ ಇತರ ಎಡಪಕ್ಷಗಳ ಕಾರ್ಯಕರ್ತರು, ಕಾರ್ಮಿಕರು ಕೋಮುಶಕ್ತಿಗಳ ಪಿತೂರಿಗಳ ವಿರುದ್ಧ ಈ ಗಂಭೀರ ಹೋರಾಟದಲ್ಲಿ ನಿರತರಾಗುತ್ತಾರೆ ಎಂಬ ನಂಬಿಕೆನಮಗಿದೆ.

ಇಲ್ಲಿ ಮುಸ್ಲಿಂ ಮೂಲಭೂತವಾದಿಗಳಿಗೂ ಒಂದು ಎಚ್ಚರಿಕೆಯ ಮಾತು ಹೇಳುವುದು ಸೂಕ್ತ. ಇದುವರೆಗೆ ಮುಸ್ಲಿಂ ಮುಖಂಡತ್ವ ತಾಳ್ಮೆ ತೋರಿಸಿದೆ. ಆದರೆ ಪಾಕಿಸ್ತಾನೀ ಪತ್ರಿಕೆಗಳು ಉದ್ರೇಕಕಾರಿ ಲೇಖನ ಟೀಕೆಗಳನ್ನು ಪ್ರಕಟಿಸುವಲ್ಲಿ ಹಿಂದೆ ಬಿದ್ದಿಲ್ಲ. ಮೂಲಭೂತವಾದವನ್ನು ಆಧರಿಸಿದ ಯಾವುದೇ ಪ್ರಚಾರ ಮುಸ್ಲಿಮರನ್ನು ಪ್ರಜಾಪ್ರಭುತ್ವ ಜನಾಭಿಪ್ರಾಯದಿಂದ ದೂರಮಾಡುತ್ತದೆ. ಎಲ್ಲಾ ಧರ್ಮಗಳಿಗೆ ಸಮಾನತೆ ನೀಡುವ ಪ್ರಜಾಪ್ರಭುತ್ವ ಹಾಗೂ ಜನತೆಯ ಪ್ರಗತಿ ಪ್ರತಿಪಾದಿಸುವ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ನಿಂತು ರಾಷ್ಟ್ರದ ಮುಖ್ಯ ಪ್ರವಾಹವನ್ನು ಸೇರುವುದರಲ್ಲೇ ಅವರ ನ್ಯಾಯಬದ್ಧ ಹಕ್ಕುಗಳ ರಕ್ಷಣೆಯ ಗ್ಯಾರಂಟಿಯಿದೆ ಎಂಬುದನ್ನು ಅರಿಯಬೇಕು.

ಮುಂಬರುವ ದಿನಗಳು ದೇಶದ ಎಡ ಮತ್ತ ಪ್ರಜಾಪ್ರಭುತ್ವ ಆಂದೋಲನದ ಭವಿಷ್ಯ ನಿರ್ಣಯಿಸುವ ದಿನಗಳು ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ನೌಕರರು, ವೃತ್ತಿಪರರು, ಕಲಾವಿದರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ತಮ್ಮ ಸಂಘಟನೆಗಳ ಮೂಲಕ ಅಥವಾ ಸಂಘಟನೆಗಳಲ್ಲಿ ಇಲ್ಲದಿದ್ದರೆ ಸ್ವಂತ ಮುತುವರ್ಜಿಯಿಂದ ತಮ್ಮ ಪಾತ್ರ ನಿರ್ವಹಿಸಬೇಕು. ಸಾಂಸ್ಕೃತಿಕ ರಂಗದಲ್ಲಿ ದುಡಿಯುತ್ತಿರುವವರದ್ದು ಲೇಖಕರು, ಕಲಾವಿದರದ್ದು ವಿಷಪೂರಿತ ಅಪಪ್ರಚಾರ ಎದುರಿಸುವಲ್ಲಿ ವಿಶೇಷ ಪಾತ್ರವಿದೆ.

ನಮ್ಮೆಲ್ಲ ಶಕ್ತಿ ಸಾಮರ್ಥ್ಯ, ನಿಪುಣತೆಗಳನ್ನು ನಾವೀಗ ಈ ಹೋರಾಟದಲ್ಲಿ ತೊಡಗಿಸಬೇಕು ರಾಷ್ಟ್ರೀಯ ಐಕ್ಯತೆಯ ಈ ಹೋರಾಟ ಸ್ವಾತಂತ್ರ್ಯ ಹೋರಾಟದಷ್ಟೇ ಮಹತ್ವದ್ದು ಯಾಕೆಂದರೆ ನಮ್ಮ ಸ್ವಾತಂತ್ರ್ಯದ ನಿಜವಾದ ಫಲಗಳು ರಾಷ್ಟ್ರೀಯ ಐಕ್ಯತೆ, ಸೌಹಾರ್ದ, ಶಕ್ತಿಶಾಲಿ ಆರ್ಥಿಕತೆ, ನಂಬಿಕೆ ಹೊಂದಿರುವ ಪ್ರಜಾಪ್ರಭುತ್ವ ತಮ್ಮ ಇಲ್ಲಿ ಹಾಳಾಗುತ್ತಿವೆ.

# ಕುರ್ಚಿ ರಕ್ಷಣೆಗೆ ರಾಜಕೀಯ ಸರ್ಕಸ್

ಕೆಲ ವರ್ಷಗಳ ಹಿಂದಿನ ತನಕ ಜನ ಸಾಮಾನ್ಯರ ಮನರಂಜನೆಯ ಪ್ರಮುಖ ಕಲೆಗಳಲ್ಲಿ ಒಂದಾಗಿದ್ದ ಸರ್ಕಸ್ ಇತ್ತೀಚಿನ ವರ್ಷಗಳಲ್ಲಿ ಕ್ಷಾರೆಯಾಗುತ್ತಿದೆ. ಸರ್ಕಸ್ ಕಂಪೆನಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಕಲಾವಿದರು ಹಡಬಾರದ ಪಾಡು ಪಡುತ್ತಿದ್ದಾರೆ.

ಆದರೆ ಜನರು ಸರ್ಕಸ್ ಕಡಿಮೆಯಾಗಿದೆಯಲ್ಲಾ ಎಂದು ಚಿಂತಿಸಬೇಕಾಗಿಲ್ಲ. ದೇಶದ ರಾಜಕೀಯ ರಂಗಸ್ಥಳದಲ್ಲಿ ನಡೆಯುವ ಸರ್ಕಸ್‌ಗಳೇ ಅದಕ್ಕೆ ಕಾರಣ. ಹಗ್ಗದ ಮೇಲೆ ನಡೆಯುವ, ಗೋಲದಲ್ಲಿ ಬೈಕ್ ಚಲಾಯಿಸುವ, ಉಯ್ಯಾಲೆಯಿಂದ ಉಯ್ಯಾಲೆಗೆ ಜಿಗಿಯುವ ಮೊದಲಾದ ಸಾಹಸ ಕೃತ್ಯಗಳನ್ನು ಉಸಿರು ಬಿಗಿ ಹಿಡಿದು ನೋಡುವ ಬಫೂನ್‌ಗಳ ಕೀಟಲೆ ಕೃತ್ಯವನ್ನು ನೋಡಿ ನಗುವ ಪ್ರೇಕ್ಷಕರನ್ನು ನೆನಪಿಸುತ್ತದೆ. ಭಾರತದ ಸದ್ಯದ ರಾಜಕೀಯ ಆಟಾಟೋಪಗಳು.

ಮುಖ್ಯವಾಗಿ ದಿಲ್ಲಿಯ ಕುರ್ಚಿ ಹಿಡಿಯಲು ಮತ್ತು ಕೆಲವು ರಾಜ್ಯಗಳಲ್ಲಿ ಇದ್ದ ಕುರ್ಚಿಯನ್ನು ಭದ್ರಪಡಿಸಿಕೊಳ್ಳಲು ನಡೆದ 'ಸರ್ಕಸ್'ಗಳನ್ನು ನೋಡಿದರೆ ಹುಲಿ, ಕರಡಿ, ಆನೆ, ಕಲಾವಿದರನ್ನೊಳಗೊಂಡ ಸರ್ಕಸ್‌ಕಂಪೆನಿಗಳು ಇನ್ನು ಬಾಗಿಲು ಮುಚ್ಚಬೇಕಾಗಬಹುದೇನೋ ಎಂಬ ಅನುಮಾನ ಹುಟ್ಟದಿರದು. ಈ ಎರಡು ಸರ್ಕಸ್‌ಗಳ ಪ್ರಧಾನ ವ್ಯತ್ಯಾಸವೆಂದರೆ ಕಂಪೆನಿಗಳ ಸರ್ಕಸ್ ಮನಸ್ಸಿಗೆ ಮುದ ನೀಡುತ್ತವೆ. ಈ ರಾಜಕೀಯ ಸರ್ಕಸ್ ಹೇಸಿಗೆ ಹುಟ್ಟಿಸುತ್ತವೆ ಅಷ್ಟೆ.

ದೇಶದ ಸ್ವಯಂ ಘೋಷಿತ 'ದೊಡ್ಡಪ್ಪ' (ತಾವೂ) ದೇವಿಲಾಲ್ ಎಂಡ್ ಚಂದ್ರಶೇಖರ್ ಕಂಪೆನಿ ಈ ಸರ್ಕಸ್‌ನ ಸಂಸ್ಥಾಪಕರು.

ಈ ಕಂಪೆನಿಯ ಪಾಲುದಾರ ಚಿಮಣ್‌ಭಾಯಿ ಪಟೇಲ್ ಮೊದಲು ಗುಜರಾತ್‌ನಲ್ಲಿ ಪ್ರದರ್ಶನ ನೀಡಿದರು.

ಗುಜರಾತ್‌ನ ಸಮ್ಮಿಶ್ರ ಸಂಪುಟಕ್ಕೆ ಬಿಜೆಪಿ ರಾಜೀನಾಮೆ ನೀಡಿ ಸರಕಾರಕ್ಕೆ ಬೆಂಬಲ ಹಿಂತೆಗೆದು ಕೊಂಡಿತು. ಜನತಾದಳ ನೇತೃತ್ವದ ಸರಕಾರ ಬಹುಮತ ಕಳೆದು ಕೊಂಡು ವಿಶ್ವಾಸಮತ ಪಡೆಯುವುದು ಅಗತ್ಯವಾಯಿತು. ಮುಖ್ಯಮಂತ್ರಿ ಚಿಮಣ್‌ಭಾಯಿ ಪಟೇಲ್ ಪ್ರತಿಪಕ್ಷ ಕಾಂಗ್ರೆ ನಾಯಕರ ಮನೆಗೆ ಹೋಗಿ ಬೆಂಬಲ ಕೋರಿದರು. ವಿಧಾನ ಸಭೆಯಲ್ಲಿ ಬಹುಮತ ದೊರೆಯಿತು. ಚಿಮಣ್‌ಭಾಯಿಯವರ ಕುರ್ಚಿ ಉಳಿಯಿತು.

ಮತ್ತೊಂದು ರಾಜ್ಯಕ್ಕೆ: ಉತ್ತರ ಪ್ರದೇಶ ರಾಜ್ಯದಲ್ಲಿ ಕೂಡ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರು ನ. 20 ರಂದು ಕಾಂಗ್ರೆಸ್(ಐ), ಬಿ.ಎಸ್.ಪಿ. ಮತ್ತು ಕೆಲವು ಪಕ್ಷೇತರರ ಬೆಂಬಲದಿಂದ ಬಹುಮತ ಸಾಬೀತು ಪಡಿಸಿದರು. ಜನತಾದಳ (ಎಸ್) ಸ್ಥಾಪನೆಯಲ್ಲಿ ತಾವು ಪ್ರಮುಖ ಪಾತ್ರ ವಹಿಸಿದ್ದರೂ ಅವರು ಮೂಲಜನತಾದಳದ ಹೆಸರಿನಲ್ಲೇ ವಿಶ್ವಾಸಮತ ಕೇಳಿದ್ದು ವಿಚಿತ್ರವಾಗಿದೆ.

ವಿಘ್ನ ಸಂತೋಷಿಗಳು ಬಿಹಾರದ

## ದೇಶದೊಳಗೆ

ಲಲ್ಲೂ ಪ್ರಸಾದ್ ಯಾದವ್ ನೇತೃತ್ವದ ಜನತಾದಳ ಸರಕಾರವನ್ನು ಕಾಂಗ್ರೆ ಕೃಪಾ ಪೋಷಿತ ಸರ್ಕಸ್ ಕಂಪೆನಿಗೆ ಸೇರಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. (ರಾಜಸ್ತಾನದಲ್ಲಿ ಬಿಜೆಪಿ ನೇತೃತ್ವದ ಸರಕಾರ ಜನತಾದಳದ ಅತೃಪ್ತರ ನೆರವಿನಿಂದ ಉಳಿದುಕೊಂಡಿದೆ).

ಈ ಎಲ್ಲಾ ಪ್ರಕರಣಗಳನ್ನು ಪರಿಶೀಲಿಸುವಾಗ ಇದು ರಾಜಕೀಯ ಸರ್ಕಸ್ ಎನ್ನದೆ ಬೇರೆ ವಿಧಿಯಿಲ್ಲ. 1986 ರಲ್ಲಿ ವಿವಾದಾತ್ಮಕ ಸಂಕೀರ್ಣದ ಪ್ರವೇಶಕ್ಕೆ ಅನುವು ಮಾಡಿ ಪ್ರಸ್ತ ಅಯೋಧ್ಯೆ ವಿವಾದವನ್ನು ಹುಟ್ಟು ಹಾಕಿತೋ ಆ ಕಾಂಗ್ರೆ ಪಕ್ಷದ ಜತೆ ಮುಲಾಯಂ ಸಿಂಗ್, ಚಿಮಣ್‌ಭಾಯಿ ಕೈ ಜೋಡಿಸಿದ್ದು ಅಧಿಕಾರ ಉಳಿಸಿಕೊಳ್ಳುವ ತಂತ್ರವಲ್ಲದೆ ಬೇರೇನಲ್ಲ. ಈ ಎರಡೂ ರಾಜ್ಯಗಳು, ವಿಶೇಷತಃ ಉತ್ತರ ಪ್ರದೇಶದಲ್ಲಿ ಅಭೂತ ಪೂರ್ವವಾದ ಕೋಮುವಾದ ವಿರೋಧಿ ಆಂದೋಲನಕ್ಕೆ ಮುಲಾಯಂಸಿಂಗ್ ಯಾದವರು ಸಕ್ರಿಯ ನೆರವು ನೀಡಿದ್ದನ್ನು ನೆನಪಿಸಿಕೊಳ್ಳುವಾಗ ಈಗ ನಡೆಸಿರುವ ಕೃತ್ಯದಿಂದಾಗಿ ಅವರು ಸಮಯ ಸಾಧಕತನಕ್ಕೆ, ಜನ ವಿರೋಧಿ ಕಾಂಗ್ರೆ ಬಲೆಗೆ ಬಿದ್ದಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

## ತ್ರಿಪುರಾ: ವಿಶ್ವ ಹಿಂದೂ ಪರಿಷತ್ ಜತೆ ಕಾಂಗ್ರೆ ನಂಟು

ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ದುಷ್ಟಕೂಟದ ಸರಕಾರದ ತೀವ್ರ ದಮನಕಾರಿ ಕ್ರಮಗಳ ನಡುವೆಯೂ ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಪ್ರಬಲ ಹೋರಾಟ ಸಂಘಟಿಸಲು ತ್ರಿಪುರಾದ ರೈತಾಪಿ ಸಮುದಾಯ ನಿರ್ಧರಿಸಿದೆ.

ಅದಕ್ಕೆ ಪೂರ್ವಭಾವಿಯಾಗಿ ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಎಡ ಪಕ್ಷಗಳ ರೈತ ಸಂಘಟನೆಗಳು ಅಕ್ಟೋಬರ್ 8 ರಂದು 'ರೈತರ ಬೇಡಿಕೆ ದಿನ' ಆಚರಿಸಿ ರಾಜ್ಯ ಮಟ್ಟದ ಸಮಾವೇಶವೊಂದನ್ನು ನಡೆಸಿದವು.

ಉಪಜಾತಿ ಗಣ ಮುಕ್ತಿ ಪರಿಷತ್‌ನ ನಾಯಕ ದಶರಥದೇವ್ ಸಮಾವೇಶವನ್ನು ಉದ್ಘಾಟಿಸಿದರು. ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್) ರಾಜ್ಯ ಕಾರ್ಯದರ್ಶಿ ಸಮರ್ ಚೌಧರಿ ಬೇಡಿಕೆಗಳನ್ನೊಳಗೊಂಡ ಮುಖ್ಯನಿರ್ಣಯವನ್ನು ಮಂಡಿಸಿದರು.

ತ್ರಿಪುರಾ ಮಾತ್ರವಲ್ಲದೆ ದೇಶದ ಇತರ ಭಾಗಗಳಿಗೂ ಗೊತ್ತಿರುವಂತೆ ರಾಜ್ಯದ ಆಳುವ ಕೂಟ ಜನರಿಂದ ಪ್ರತ್ಯೇಕಗೊಳ್ಳುತ್ತಿದೆ. ಆ ರೀತಿ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವಂತೆಯೇ ಸರಕಾರ ಹತಾಶವಾಗಿ ಜನರ ಮೇಲಿನ ದಾಳಿ ದಬ್ಬಾಳಿಕೆಯನ್ನು ಹೆಚ್ಚಿಸುತ್ತಿದೆ ಎಂಬುದನ್ನು ಸಮಾವೇಶದ ನಿರ್ಣಯ ಗಮನಿಸಿದೆ. ಮುಖ್ಯವಾಗಿ ಬುಡಕಟ್ಟು ಜನರು ಹಾಗೂ ಇತರ ಅಲ್ಪ ಸಂಖ್ಯಾತರ ಮೇಲೆ ಪ್ರಮುಖವಾಗಿ ದಬ್ಬಾಳಿಕೆ ನಡೆದಿದೆ.

ಇಷ್ಟು ಮಾತ್ರವಲ್ಲದೆ ಕೋಮುವಾದಕ್ಕೂ ಪ್ರಚೋದನೆ ನೀಡಲಾಗುತ್ತಿದೆ. ಮತ್ತು ಅನೇಕ ಕಾಂಗ್ರೆಸ್(ಐ) ಮುಖಂಡರು ವಿಶ್ವ ಹಿಂದೂ ಪರಿಷತ್‌ನೊಂದಿಗೆ ಸಂಬಂಧ ಇಟ್ಟುಕೊಂಡಿರುವುದರತ್ತ ರೈತರ ಸಮಾವೇಶ ಬೊಟ್ಟು ಮಾಡಿದೆ.

ಒಂಭತ್ತು ಪ್ರಮುಖ ಬೇಡಿಕೆಗಳನ್ನೊಳಗೊಂಡ ನಿರ್ಣಯವನ್ನು ಸಮಾವೇಶ ಅಂಗೀಕರಿಸಿತು. ಈ ಬೇಡಿಕೆಗಳ ಆಧಾರದಲ್ಲಿ ಸಂಯುಕ್ತವಾದ ಬಲಿಷ್ಠ ಚಳುವಳಿ ಕಟ್ಟಲು ಮುಂದಾಗಬೇಕೆಂದು ರಾಜ್ಯದ ರೈತರು, ಕೃಷಿ ಕಾರ್ಮಿಕರು ಹಾಗೂ ಝುಮಿಯಾರಿಗೆ ಸಮಾವೇಶ ಕರೆ ನೀಡಿದೆ.

## ಸಿಖ್ ಭಯೋತ್ಪಾದಕರಿಗೆ ಇದಿರಾಗಿ ಸೌಹಾರ್ದತಾ ಆಂದೋಲನ

ದೇಶದೆಲ್ಲೆಡೆ ಕೋಮು ಭೂತದ ರುದ್ರ ನರ್ತನ ನಡೆಯುತ್ತಿದ್ದು ಪಂಜಾಬ್ ಅದಕ್ಕೇನೂ ಹೊರತಾಗಿಲ್ಲ. ಇಲ್ಲಿ ವಿಶೇಷತಃ ಸಿಖ್ ಭಯೋತ್ಪಾದಕರ ಪ್ರತ್ಯೇಕತಾವಾದಿ ಚಟುವಟಿಕೆಗಳು ನಡೆಯುತ್ತಲೇ ಇವೆ. ವಿವಿಧ ಧರ್ಮಗಳ ಜನರ ನಡುವಣ ಮೈತ್ರಿಯ ಕೊಂಡಿ ಕಳಚುವ ಯತ್ನ ಸಾಗುತ್ತಲೇ ಇದೆ. ಮತಾಂಧರಿಂದ ನರಹತ್ಯೆ ನಡೆಯುತ್ತಿದೆ.

ಪರಿಸ್ಥಿತಿ ಹೀಗಿದ್ದರೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ವಿಶಿಷ್ಟ ಪರಂಪರೆ ಹೊಂದಿರುವ ಈ ಗಡಿನಾಡಿನಲ್ಲಿ ಎಡ ಪ್ರಜಾಸತ್ತಾತ್ಮಕ, ದೇಶಪ್ರೇಮಿ ಶಕ್ತಿಗಳು ಕೈ ಕಟ್ಟಿಕುಳಿತಿಲ್ಲ. ದೇಶದ ಏಕತೆ- ಸಮಗ್ರತೆ ರಕ್ಷಣೆಗಾಗಿ ಸತತ ಹೋರಾಟ ನಡೆಸಿವೆ.

ಅಲ್ಲಿನ ಕಾರ್ಮಿಕ ವರ್ಗವೂ ಸಕ್ರಿಯ ಪಾತ್ರ ನಿರ್ವಹಿಸುತ್ತಿದೆ. ಸಿ.ಐ.ಟಿ.ಯು.; ಎ.ಐ.ಟಿ.ಯು.ಸಿ. ಮತ್ತು ಇಂಟಕ್ ನೇತೃತ್ವದಲ್ಲಿ ಕೋಮುವಾದದ ವಿರುದ್ಧ ನಡೆದ ಆಂದೋಲನ ಇದಕ್ಕೊಂದು ಉದಾಹರಣೆ.

ಅಕ್ಟೋಬರ್ 21 ರಂದು ಆರಂಭಗೊಂಡು ಫ್ಯಾಕ್ಟರಿಗಳು, ಧಾನ್ಯಮಾರುಕಟ್ಟೆಗಳು, ಇಟ್ಟಿಗೆ ಗೂಡುಗಳು, ಕಾರ್ಮಿಕರ ಕಾಲನಿಗಳು, ಕೈಗಾರಿಕಾ ಕೇಂದ್ರಗಳು ಹಾಗೂ ಅವುಗಳಿಗೆ ತಾಗಿರುವ ಗ್ರಾಮಗಳು ಹೀಗೆ ಕೆಳ ಹಂತಗಳಿಂದಲೇ ಈ ವ್ಯಾಪಕ ಆಂದೋಲನ ನಡೆಯಿತು. ನವದೆಹಲಿಯಲ್ಲಿ ನಡೆದ ಕೋಮುವಾದ ವಿರೋಧಿ ರಾಷ್ಟ್ರೀಯ ಸಮಾವೇಶದ ಕರೆಯನ್ನು ಗಮನದಲ್ಲಿಟ್ಟುಕೊಂಡು ಪಂಜಾಬ್‌ನ ಕಾರ್ಮಿಕ ವರ್ಗ ಈ ಮಹತ್ತರ ಕಾರ್ಯಾಚರಣೆಗಳಿದಿತ್ತು.

ಸ್ವಯಂಸೇವಕರ ತಂಡ:

ಸುಮಾರು 20 ರಿಂದ 25 ಜನರಿರುವ ಸ್ವಯಂಸೇವಕರ ತಂಡಗಳು ಸೈಕಲ್, ಟೆಂಪೋ, ಟ್ರಕ್ ಮೊದಲಾದವುಗಳಿಗೂ ವಿವಿಧ ಪ್ರದೇಶಗಳಿಗೆ ತೆರಳಿ ಕೋಮು ಸೌಹಾರ್ದತೆಯ ಸಂದೇಶ ಸಾರಿದವು. ಪಂಜಾಬ್ ಸಮಸ್ಯೆಗೆ ಶೀಘ್ರವೇ ರಾಜಕೀಯ ಇತ್ಯರ್ಥ ಕಂಡು ಕೊಳ್ಳಬೇಕೆಂದು ಕೂಡ ಅವು ಒತ್ತಾಯಿಸಿದವು.

ಸ್ವಯಂ ಸೇವಕರ ಈ ತಂಡಗಳಿಗೆ ಶಸ್ತ್ರ ಸಜ್ಜಿತ ಸ್ವಯಂ ಸೇವಕರು ರಕ್ಷಣೆ ನೀಡಿದರು.

ಪ್ರಾಣ ಭಯದಿಂದ ಸದಾ ಆತಂಕದಿಂದಿರುವ ಪಂಜಾಬ್‌ನಾದ್ಯಂತ ಈ ಆಂದೋಲನದ ಅವಧಿಯಲ್ಲಿ ಸಂಭ್ರಮದ ವಾತಾವರಣ ಕಂಡು ಬಂದಿತು. ಕೋಮು ಸೌಹಾರ್ದ, ಮೈತ್ರಿಯ ಸಂದೇಶ ಸಾರುವ ಕಾರ್ಮಿಕ ವರ್ಗದ ಈ ಪ್ರತಿನಿಧಿಗಳು ಹೋದ ಅನೇಕ ಕಡೆ ಜನರು ಅವರಿಗೆ ಹೂಮಾಲೆ ಅರ್ಪಿಸಿದರು. ಊಟ, ಸಿಹಿ ತಿಂಡಿ ಉಣಬಡಿಸಿದರು.

ಇದೊಂದು ಮಹಾನ್ ಉದ್ದೇಶದ ಸಂಯುಕ್ತ ಕಾರ್ಯಾಚರಣೆಯಾಗಿದ್ದರೂ ಎ.ಐ.ಟಿ.ಯು.ಸಿ. ಮತ್ತು ಇಂಟಕ್‌ನ ಭಾಗವಹಿಸುವಿಕೆ ಪ್ರೋತ್ಸಾಹದಾಯಕವಾಗಿರಲಿಲ್ಲ. ಆದರೂ ಕೋಮುವಾದದ ವಿಚಾರದಲ್ಲಿ ಕಾರ್ಮಿಕ ವರ್ಗವನ್ನು ಬೀದಿಗಿಳಿಸುವ ಸಾಧ್ಯತೆಗಳು ವಿಪುಲವಾಗಿರುವುದನ್ನು ಟ್ರೇಡ್ ಯೂನಿಯನ್‌ಗಳ ಈ ಜಂಟಿ ಕರೆಗೆ ದೊರೆತ ಪ್ರತಿಕ್ರಿಯೆ ಎತ್ತಿತೋರಿಸುತ್ತದೆ.


ಭೂಪಾಲ್ ದುರಂತ

## ಪರಿಹಾರ ಮೊತ್ತ ಒಪ್ಪಂದ ರದ್ದಿಗೆ ಭಾರತದ ಮನವಿ

1984 ರಲ್ಲಿ ಮಧ್ಯಪ್ರದೇಶದ ರಾಜಧಾನಿ ಭೂಪಾಲ್‌ನಲ್ಲಿ ಸಂಭವಿಸಿದ ಯೂನಿಯನ್ ಕಾರ್ಬೈಡ್ ಕಂಪೆನಿಯ (ಯುಸಿಸಿ) ವಿಷಾನಿಲ ದುರಂತಕ್ಕೆ ಸಂಬಂಧಪಟ್ಟು ಆಗಿರುವ 47 ಕೋಟಿ ಅಮೆರಿಕನ್ ಡಾಲರ್ ಇತ್ಯರ್ಥ ಒಪ್ಪಂದವನ್ನು ರದ್ದು ಮಾಡಬೇಕೆಂದು ಭಾರತ ಸರಕಾರ ಸುಪ್ರೀಂಕೋರ್ಟನ್ನು ಕೇಳಿಕೊಂಡಿದೆ.

ನವೆಂಬರ್ 20 ರಂದು ಅಟಾರ್ನಿ ಜನರಲ್ ಸೋಲಿ ಸೊರಾಬ್ಜಿ ಅವರು ನ್ಯಾಯಾಲಯದ ಐವರು ಸದಸ್ಯರ ಸಂವಿಧಾನ ಪೀಠದ ಮುಂದೆ ಈ ವಿಚಾರವನ್ನು ಮಂಡಿಸಿದರು. ಸುಮಾರು 3000 ಜನರ ಸಾವಿಗೆ ಕಾರಣವಾದ ಇತಿಹಾಸದಲ್ಲೆ ಭೀಕರವಾದ ಈ ಕೈಗಾರಿಕಾ ದುರಂತಕ್ಕೆ ಸಂಬಂಧಪಟ್ಟ ಸಮಗ್ರವಾದ ಮಾಹಿತಿಗಳನ್ನು ಒಪ್ಪಂದಕ್ಕೆ ಬರುವ ಮುನ್ನ ಪರಿಗಣಿಸಿಲ್ಲ. ಆದ್ದರಿಂದ ಅದನ್ನು ರದ್ದುಪಡಿಸಬೇಕೆಂದು ಅಟಾರ್ನಿ ಜನರಲ್ ಹೇಳಿದ್ದಾರೆ.

ದುರಂತದಲ್ಲಿ ಒಳಗೊಂಡಿರಬಹುದಾದ ಕ್ರಿಮಿನಲ್ ಸ್ವರೂಪದ ಅಂಶಗಳನ್ನು ಕಡೆಗಣಿಸಲಾಗಿದೆ ಎಂದವರು ಪ್ರತಿಪಾದಿಸಿದ್ದಾರೆ.




(ಕೃಪೆ: ಆನಂದ ವಿಗಡನ್)

## ಆಗ -- ಈಗ

"ದೇಶವನ್ನು ಉಳಿಸಲು ಮುಂದಾಗಿರುವುದಾಗಿ" ಹೇಳಿಕೊಳ್ಳುತ್ತಿರುವ ನಾಯಕರು ಎಷ್ಟು ಸರಿ? ಹಾಗೂ ತಾವೇ ಒಗ್ಗಟ್ಟಾಗಿರದ ಇವರು ದೇಶವನ್ನು ಹೇಗೆ ಕಾಪಾಡಿಯಾರು ಎಂಬುದರತ್ತ ಈ 'ಆಗ- ಈಗ' ಕ್ಷ-ಕಿರಣ ಬೀರುತ್ತದೆ. ಈಗ ಕೈ ಕುಲುಕಿ ಒಂದಾಗಿ, ಪರಸ್ಪರ ಮುಗುಳು ನಗೆ ಬೀರುತ್ತಿರುವ ಈ ನಾಯಕರು ಸ್ವಲ್ಪ ಹಿಂದೆ ತಾನೆ ಹೇಳಿದ್ದು ಏನು? ಎಂಬುದು ಈಗ ಕೇಂದ್ರದಲ್ಲಿರುವ ಕೈ ಗೊಂಬೆ ಸರ್ಕಾರದತ್ತ ಬೆಳಕು ಚೆಲ್ಲುತ್ತದೆ.

| ಆಗ | ಈಗ |
|---|---|
| **ಚಂದ್ರಶೇಖರ್ ಉವಾಚ:** | |
| ★ ತಪ್ಪಾಗಿ ಆಗ ರಾಜಕೀಯಕ್ಕೆ ಧುಮುಕಿರುವ ರಾಜೀವ್‌ಗಾಂಧಿ ಒಬ್ಬ ಹಸುಳೆ | 0 ಈಗ ರಾಜೀವ್‌ಗಾಂಧಿ ದೇಶಕ್ಕಾಗಿ ಬದ್ಧರು |
| ★ ದೇವಿಲಾಲ್ ತಮ್ಮದನ್ನೇ ಸಾಧಿಸಲು ಹೊರಡುವವರು. ಇವರ ಬೇರೆ ಯಾರದೇ ಮಾತು ಕೇಳಲು ಸಿದ್ಧರಾದವರಲ್ಲ. | 0 ದೇವಿಲಾಲರ ಆಶೀರ್ವಾದ ನನಗಿದೆ. ಏನೇ ಆಗಲಿ ಅವರು ತಾವೂ (ದೊಡ್ಡಪ್ಪ) |
| **ರಾಜೀವ್‌ಗಾಂಧಿ ಉವಾಚ:** | |
| ★ ಚಂದ್ರಶೇಖರ್‌ರವರೊಡನೆ ವ್ಯವಹರಿಸುವುದರಿಂದ ನಾವು ಕಳೆದುಕೊಳ್ಳಲು ಮಾತ್ರ ಸಾಧ್ಯ. | 0 ಚಂದ್ರಶೇಖರ್ ಮಾಜಿ ಕಾಂಗ್ರೆಸ್ಸಿಗರು ನಾವು ಅವರನ್ನು ನಂಬುತ್ತೇವೆ. |
| **ದೇವಿಲಾಲ್ ಉವಾಚ:** | |
| ★ ಭಾರತದಂತಹ ದೇಶವನ್ನು ರಾಜೀವ್ ಗಾಂಧಿಯಂತಹವರ ಕೈಗಿಡಲುಸಾಧ್ಯವಿಲ್ಲ | 0 ಮೊದಲು ನಮ್ಮೊಂದಿಗೆ ಮಹಾತ್ಮ ಗಾಂಧಿ ಇದ್ದರು ಈಗ ಯಾರಿದ್ದಾರೆ- ರಾಜೀವ್ ಗಾಂಧಿ |

# ಕೊಲ್ಲಿ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರದ ಮೇಲೂ ದಿಗ್ಬಂಧನವೇ?

ಕೊಲ್ಲಿ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರದ ಮೇಲೂ ದಿಗ್ಬಂಧನ ಹೊರಿಸಲಾಗಿದೆಯೆ? ಇದು ಜೋರ್ಡಾನ್ ದೊರೆ ಹುಸೇನ್‌ರವರ ಪ್ರಶ್ನೆ. ಮೊರೊಕ್ಕೊ ದೊರೆ ಹಸನ್ ಕೊಲ್ಲಿ ಬಿಕ್ಕಟ್ಟಿಗೆ ಅರಬ್ ಶಾಂತಿಯುತ ಪರಿಹಾರಕ್ಕಾಗಿ, ಇನ್ನೊಂದು ಬಾರಿ ಅರಬ್ ಸಮ್ಮೇಳನದ ಪ್ರಯತ್ನಕ್ಕೆ ಅಮೇರಿಕ ಮತ್ತು ಅದರ ಬಾಲಬಡುಕ ಅರಬ್‌ದೇಶಗಳಾದ ಸಿರಿಯಾ, ಈಜಿಪ್ಟ್ ವಿರೋಧಿಸುತ್ತಿರುವುದರ ಹಿನ್ನೆಲೆಯಲ್ಲಿ ಹುಸೇನರ ಪ್ರಶ್ನೆ ನ್ಯಾಯವಾದ್ದೇ. ಹಿಂದೆ ಲಿಬ್ಯಾ, ಪಿ.ಎಲ್.ಒಗಳ ಶಾಂತಿ ಪ್ರಸ್ತಾಪಗಳ ಬಗ್ಗೆ ಮಾತುಕತೆಯೂ ಮಾಡದೆ ತಳ್ಳಿಹಾಕಿತ್ತು. ಇರಾಕ್ ಕುವೈತ್‌ನಿಂದ ನಿರ್ಗಮಿಸುವುದರ ಜತೆಗೆ,ಇರಾಕ್‌ಗೆ ಸಮುದ್ರಕ್ಕೆ ಪ್ರವೇಶದ್ವಾರ ಗಡಿಪ್ರದೇಶದ ತೈಲಸ್ಥಾವರಗಳ ಒಡೆತನದ ವಿವಾದ ಮತ್ತು ಪ್ಯಾಲೆಸ್ಟೈನ್ ಪ್ರಶ್ನೆ ಇತ್ಯರ್ಥ ಮಾಡುವ ಅಗತ್ಯವಿದೆ ಎಂದು ಸಾಮಾನ್ಯವಾಗಿ ಮನಗಾಣಲಾಗಿದ್ದರೂ ಈ ಬಗ್ಗೆ ಪ್ರಸ್ತಾಪಗಳ ಮೇಲೆ ಅಮೇರಿಕ ಮತ್ತು ಅದರ ಸಮರ್ಥಕರು ದಿಗ್ಬಂಧನ ಹಾಕಿರುವಂತೆ ಕಾಣುತ್ತದೆ.

ಈ ನಡುವೆ ಬುಶ್ ಅಮೇರಿಕದ ಒಳಗೆ ಪಾರ್ಲಿಮೆಂಟ್‌ನಲ್ಲಿ ತಮ್ಮ ಮತ್ತು ವಿರೋಧಿ ಡೆಮಾಕ್ರಟಿಕ್ ಪಕ್ಷದ ಸೆನೆಟರುಗಳಿಂದ ಕೊಲ್ಲಿ ಯುದ್ಧದ ಬಗ್ಗೆ ತೀವ್ರ ವಿರೋಧ ಎದುರಿಸುತ್ತಿದ್ದಾರೆ. ಜನತೆಯಿಂದಲೂ ತೀವ್ರ ವಿರೋಧ ಕಂಡು ಬಂದಿದೆ. ಅಮೆರಿಕದ ಯುರೋಪಿಯನ್ ಸಹಚರರೂ ಈ ಬಗ್ಗೆ ಉತ್ಸಾಹ ತೋರುತ್ತಿಲ್ಲ. ಅವರ ಬೆಂಬಲಗಳಿಸಲು ಅಧ್ಯಕ್ಷ ಬುಶ್ ಮತ್ತು ವಿದೇಶ ಮಂತ್ರಿ ಬೇಕರ್ ಯುರೋಪಿನ ಪ್ರವಾಸ ಮಾಡುತ್ತಿದ್ದಾರೆ. ಸೋವಿಯತ್, ಚೀನಾ, ಫ್ರಾನ್ಸ್ ಕೊಲ್ಲಿಯಲ್ಲಿ ಬಲಪ್ರಯೋಗವನ್ನು ಇನ್ನೂ ವಿರೋಧಿಸುತ್ತಿವೆ. ಆದರೆ ಅವು ಶಾಂತಿ ಮಾತುಕತೆಯಲ್ಲಿ ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗದ ಪರಿಸ್ಥಿತಿಯನ್ನು, ಅಮೇರಿಕ ಚೆನ್ನಾಗಿ ಉಪಯೋಗಿಸುತ್ತಿದೆ. ಇರಾಕನ್ನು ಕೆಣಕಿಯುದ್ಧ ಆರಂಭಿಸಲು ಕುವೈಟ್ ಗಡಿಯಿಂದ 10 ಕಿ.ಮೀ. ದೂರದಲ್ಲಿ ಅಮೆರಿಕ ಮತ್ತ ಸೌದಿ ಅರೇಬಿಯಾ ಪಡೆಗಳು ಭಾರಿ 'ಸಮರಾಭ್ಯಾಸ ಆರಂಭಿಸಿವೆ. ಶಾಂತಿ ಸಮಯದಲ್ಲೂ ಗಡಿಯಲ್ಲಿ ಭಾರಿ ಸಮರಾಭ್ಯಾಸ ಯುದ್ಧಕ್ಕೆ ಆಹ್ವಾನವೆಂದು ಪರಿಗಣಿಸಲಾಗುತ್ತಿದೆ.

ಈ ನಡುವೆ ಯುರೋಪಿನ ಸರ್ಕಾರದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ತಮ್ಮ ದೇಶಗಳ ಒತ್ತೆಯಾಳುಗಳ ಬಗ್ಗೆ ಇರಾಕ್ ಜತೆ ನೇರ ಮಾತುಕತೆ ನಡೆಸಿ, ಸ್ವಲ್ಪ ಮಟ್ಟಿಗೆ ಸಫಲರಾಗಿರುವುದು ಅಧ್ಯಕ್ಷ ಬುಶ್‌ರಿಗೆ ಅವರ ಸಮರ್ಥಕರಿಗೆ ಕಿರಿಕಿರಿ ಉಂಟುಮಾಡಿದೆ. ಜರ್ಮನಿಯ ಸೋಶಲಿಸ್ಟ್ ನಾಯಕ ವಿಲ್ಲಿ ಬ್ರಾಂಟ್ ನೂರಕ್ಕೂ ಹೆಚ್ಚು ಜರ್ಮನ್ ಒತ್ತೆಯಾಳುಗಳನ್ನು ಬಿಡಿಸಲು ಸಾಧ್ಯವಾಗಿರುವುದನ್ನು ಕೊಲ್ಲಿ ಯುದ್ಧದ ಸಮರ್ಥಕರು ಟೀಕಿಸಿದ್ದಾರೆ. ಇಂತಹ ಕ್ರಮಗಳು ಇರಾಕ್ ವಿರುದ್ಧ 'ಅಂತರಾಷ್ಟ್ರೀಯಬಹಿಷ್ಕಾರ'ದ ಉಲ್ಲಂಘನೆ ಎಂದಿದ್ದಾರೆ.

## ಲೋಕ ಸಂಚಾರ

### ಬರ್ಮಾದಲ್ಲಿ ಮಿಲಿಟರಿ ದಬ್ಬಾಳಿಕೆ

ಬರ್ಮಾ(ಮ್ಯನಾಮಾರ್)ದಲ್ಲಿ ಮಿಲಿಟರಿ ಆಡಳಿತ ಹಲವು ತಿಂಗಳುಗಳ ಹಿಂದೆ ನಡೆದ ಚುನಾವಣೆಯಲ್ಲಿ ಜನತೆಯಿಂದ ಆರಿಸಲ್ಪಟ್ಟ ಸರಕಾರಕ್ಕೆ ಅಧಿಕಾರ ಹಸ್ತಾಂತರಿಸದೆ, ತಮ್ಮ ದಬ್ಬಾಳಿಕೆ ಮುಂದುವರಿಸಿದ್ದಾರೆ. ಇದರ ಬಗ್ಗೆ ಕೊಲ್ಲಿ ಬಿಕ್ಕಟ್ಟಿನಲ್ಲಿ ಸಿಲುಕಿರುವ ಅಂತರಾಷ್ಟ್ರೀಯ ಸಮುದಾಯಕ್ಕೆ ಎರಡು ಘಟನೆಗಳು ಪುನಃ ನೆನಪಿಸಿವೆ.

ಇದರಲ್ಲಿ ಮೊದಲನೆಯದು ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ತನಿಖೆ ನಡೆಸಲು ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿ ಬರ್ಮಾಕ್ಕೆ ಭೇಟಿ ನೀಡುತ್ತಿರುವುದು. ಎರಡನೆಯದು ಇಬ್ಬರು ಬರ್ಮಾ ವಿದ್ಯಾರ್ಥಿಗಳು ರಂಗೂನ್‌ನಿಂದ ಬ್ಯಾಂಗ್‌ಕಾಕ್ ಹೊರಟಿದ್ದ ವಿಮಾನ ಅಪಹರಿಸಿ ಕಲ್ಕತ್ತಾಗೆ ತಂದು ಶರಣಾದದ್ದು.

ಬರ್ಮಾದಲ್ಲಿ ಹೆಚ್ಚು ಕಡಿಮೆ ಎಲ್ಲಾ ರಾಜಕೀಯ ಪಕ್ಷಗಳ ಮೇಲೆ ಹೆಚ್ಚು ಕಡಿಮೆ ನಿಷೇಧವಿದೆ. ಚುನಾವಣೆ ಗೆದ್ದಿರುವ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರೆಸಿಯ ಹೆಚ್ಚಿನ ಕೇಂದ್ರ ಸಮಿತಿ ನಾಯಕರು ಗೃಹ ಬಂಧನದಲ್ಲಿದ್ದಾರೆ. ಎಷ್ಟೋ ಚುನಾಯಿತ ಸದಸ್ಯರು, ಪ್ರಮುಖ ರಾಜಕೀಯ ಕಾರ್ಯಕರ್ತರು ಜೈಲಿನಲ್ಲಿದ್ದಾರೆ. ಆದ್ದರಿಂದ ಮಿಲಿಟರಿ ದಬ್ಬಾಳಿಕೆಯ ವಿರುದ್ಧ, ಪ್ರಜಾಪ್ರಭುತ್ವದ ಪುನಸ್ಥಾಪನೆ ಪರವಾಗಿ ಜನರ ಚಳುವಳಿ, ಧಾರ್ಮಿಕ ರೂಪ ಪಡೆಯುತ್ತಿದೆ. ದೊಡ್ಡ ಸಂಖ್ಯೆಯಲ್ಲಿ ಬೌದ್ಧ ಭಿಕ್ಷುಗಳು ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆ. ನಾಯಕತ್ವವನ್ನೂ ವಹಿಸುತ್ತಿದ್ದಾರೆ. ಸಾಮಾನ್ಯವಾಗಿ ಮಿಲಿಟರಿ ಪೋಲೀಸ್ ಹದ್ದುಗಣ್ಣಿನಿಂದ ಮುಕ್ತವಾಗಿರುವ ಧಾರ್ಮಿಕ ಸಂಘಟನೆಗಳನ್ನು ಸರಕಾರಿ ವಿರೋಧಿ ಚಳುವಳಿಗೆ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಕುಪಿತರಾದ ಮಿಲಿಟರಿ ಆಡಳಿತ ಬೌದ್ಧ ಭಿಕ್ಷುಗಳ ಮೇಲೆ ದಾಳಿ, ದಬ್ಬಾಳಿಕೆ ಆರಂಭಿಸಿದ್ದಾರೆ. ಹಲವು ಬೌದ್ಧ ಬಿಕ್ಷುಗಳನ್ನು ಬಂಧಿಸಲಾಗಿದೆ. ಬೌದ್ಧದೇವಾಲಯಗಳ ಒಳಗೆ ಪೋಲೀಸರು ನುಗ್ಗಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಬೌದ್ಧ ಭಿಕ್ಷುಗಳು ಸೈನ್ಯ ಮತ್ತು ಪೋಲೀಸರು ಮತ್ತು ಅವರ ಕುಟುಂಬಗಳ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ. ಇದು ಪರಂಪರಾಗತ, ಧರ್ಮದ ಹಿಡಿತ ಬಲಿಷ್ಠವಾಗಿರುವ ಬರ್ಮದಂತಹ ದೇಶದಲ್ಲಿ ಹೆಚ್ಚು ಕಡಿಮೆ 'ಸಾಮಾಜಿಕ ಬಹಿಷ್ಕಾರ'ದಂತೆ ಎಂದು ಪರಿಗಣಿಸಲಾಗುತ್ತದೆ. ಈ ಬಹಿಷ್ಕಾರ ಮಿಲಿಟರಿ ಸರ್ಕಾರಕ್ಕೆ ತೀವ್ರ ಸವಾಲಾಗಿದ್ದು, ಬಹಿಷ್ಕಾರವನ್ನು ಮುರಿಯಲು ಭಿಕ್ಷುಗಳಿಗೆ ಒತ್ತಾಸೆ, ಒತ್ತಡ, ಬೆದರಿಕೆ ಹಾಕಲಾಗುತ್ತಿದೆ.

### ಐರ್ಲೆಂಡಿನಲ್ಲಿ ಎಡ ಅಭ್ಯರ್ಥಿ ಅಧ್ಯಕ್ಷೆ

ಐರ್ಲೆಂಡಿನಲ್ಲಿ ಇರುವ ಎಡ ಪಕ್ಷಗಳಾದ ಲೇಬರ್‌ಪಕ್ಷ ಮತ್ತು ಕಾರ್ಮಿಕರ ಪಕ್ಷಗಳ ಅಭ್ಯರ್ಥಿ ಶ್ರೀಮತಿ ಮೇರಿರೊಬಿನ್ ನ್ ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದು ಎಲ್ಲರನ್ನು ದಂಗು ಬಡಿಸಿದ್ದಾರೆ. ಈ ಎರಡೂ ಪಕ್ಷಗಳು ಅಷ್ಟೇನೂ ಬಲಶಾಲಿಯಾಗಿರದಿದ್ದರೂ, ಬಲ ಶಾಲಿಯಾದ ಎರಡು ಮುಖ್ಯ ಪಕ್ಷಗಳ ಅಭ್ಯರ್ಥಿಗಳ ಪರಾಭವ ತೀರಾ ಆಶ್ಚರ್ಯ ಕಾರಕ ಎನ್ನಲಾಗಿದೆ. ಅದರಲ್ಲೂ ಯುರೋಪಿನ ದೇಶಗಳಲ್ಲೇ ಹೆಚ್ಚು ಸಾಂಪ್ರದಾಯಿಕ ದೇಶವಾದ ಐರ್ಲೆಂಡಿನಲ್ಲಿ ಮಹಿಳಾ ಅಭ್ಯರ್ಥಿ ಗೆದ್ದುಬರುವುದು ಇನ್ನೂ ಆಶ್ಚರ್ಯಕಾರಕ ಎನ್ನಲಾಗಿದೆ.

### ಬಾಂಗ್ಲಾ ವಿರೋಧಿ ನಾಯಕರ ಮನೆಗಳ ಮೇಲೆ ಬಾಂಬ್ ದಾಳಿ

ಬಾಂಗ್ಲಾ ದೇಶದ ಆರು ವಿರೋಧ ಪಕ್ಷಗಳ ಪ್ರಮುಖ ನಾಯಕರ ಮನೆಗಳ ಮೇಲೆ. ಬಾಂಬ್ ದಾಳಿ ನಡೆದಿದೆ. ಇದು ಸರ್ಕಾರದಕುಮ್ಮಕ್ಕಿನಿಂದ ಭಯೋತ್ಪಾದಕರು ಎಸಗಿರುವ ಹೇಯ ಕೃತ್ಯ. ಅಧ್ಯಕ್ಷ ಇರ್‌ಶದ್ ರಾಜೀನಾಮೆ ಮತ್ತು ಎಲ್ಲಾ ಪಕ್ಷಗಳ ತಾತ್ಕಾಲಿಕ ಸರ್ಕಾರಕ್ಕೆ ಒತ್ತಾಯ ಸಲ್ಲಿಸುತ್ತಿರುವ ಎಲ್ಲಾ ವಿರೋಧ ಪಕ್ಷಗಳ ಬಿಕ್ಕಟ್ಟು ಮುರಿಯಲು ಈ ಹೇಯ ಕೃತ್ಯ ಎಂದು ಈ ನಾಯಕರು ಆಪಾದಿಸಿದ್ದಾರೆ.

### ಶಸ್ತ್ರಾಸ್ತ್ರಗಳ ಮೇಲೆ ವೆಚ್ಚ ಇಳಿತ

ಇಡೀ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಮೇಲೆ ಮಾಡಲಾಗುತ್ತಿರುವ ವೆಚ್ಚ ಈ ದಶಕದಲ್ಲೇ ಮೊದಲ ಬಾರಿಗೆ ಇಳಿದಿದೆ ಎಂದು ಅಮೆರಿಕನ್ ಸಂಸ್ಥೆಯ ಅಧ್ಯಯನ ಒಂದರಲ್ಲಿ ಹೇಳಲಾಗಿದೆ. 1988 ರ ಅಂಕಿಸಂಖ್ಯೆಗಳ ವಿಶ್ಲೇಷಣೆ ಆಧಾರದ ಮೇಲೆ ಇದು ಬೆಳಕಿಗೆ ಬಂದಿದೆ.

ಸೋವಿಯತ್ ಒಕ್ಕೂಟದ ಶಸ್ತ್ರಾಸ್ತ್ರ ವೆಚ್ಚ 1987 ಕ್ಕಿಂತ 1988 ರಲ್ಲಿ ಶೇಕಡಾ 4 ರಷ್ಟು ಇಳಿದಿದ್ದು, ಅಮೇರಿಕದ ವೆಚ್ಚ ಸ್ವಲ್ಪ ಏರಿದೆ.

ಶಸ್ತ್ರಾಸ್ತ್ರ ವೆಚ್ಚ-ಕಡಿತದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪಾಲು ಹೆಚ್ಚಾಗಿದೆ. ಒಟ್ಟು 36 ಶತಕೋಟಿ ಡಾಲರು ಕಡಿತದಲ್ಲಿ, 25 ಶತಕೋಟಿ ಡಾಲರು ಕಡಿತ ಈ ದೇಶಗಳದ್ದು.

ಅಭಿವೃದ್ಧಿ ದೇಶಗಳ ಶಸ್ತ್ರಾಸ್ತ್ರ ವೆಚ್ಚದಲ್ಲಿ ಕಡಿತವಾಗುತ್ತಿರುವುದು ಈ ದಶಕದಲ್ಲೇ ಮೊದಲು ಎನ್ನಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶ ಶಸ್ತ್ರಾಸ್ತ್ರ ವೆಚ್ಚ 1984 ರಿಂದ ಕಡಿಮೆಯಾಗುತ್ತಿದೆ.

ಆದರೆ ದಕ್ಷಿಣ ಏಷ್ಯಾದ ದೇಶಗಳ ವೆಚ್ಚ 1978 ರಿಂದ 88 ರ ದಶಕದಲ್ಲಿ ಸರಾಸರಿ ಶೇಕಡಾ 6.5 ರ ದರದಲ್ಲಿ ಏರುತ್ತಿದೆ ಎಂದು ಅಧ್ಯಯನ ತಿಳಿಸಿದೆ.

### ಜಪಾನ್ ಪಟ್ಟಾಭಿಷೇಕ

ಜಪಾನ್‌ನಲ್ಲಿ ಎರಡನೆಯ ಮಹಾಯುದ್ಧದ ನಂತರ ಮೊದಲ ಬಾರಿಗೆ ಚಕ್ರವರ್ತಿಯ ಪಟ್ಟಾಭಿಷೇಕ ನೆರವೇರಿತು. ಜಪಾನಿನಲ್ಲಿ ಚಕ್ರವರ್ತಿ ಪ್ರಭುತ್ವದ ಸಂಕೇತ ಮಾತ್ರ ಅಲ್ಲ, ಜೀವಂತ ದೇವತೆ ಎಂದು ಗಣಿಸಲಾಗುತ್ತದೆ. ರಾಜ ಜೀವಂತ ದೇವತೆ ಎಂದು ಘೋಷಿಸುವ ಧಾರ್ಮಿಕ ಆಚರಣೆ ವಿರುದ್ಧ ಜಪಾನಿನಾದ್ಯಂತ ಭಾರಿ ಪ್ರತಿಭಟನೆ ಪ್ರದರ್ಶನಗಳು ನಡೆದವು ಎಂದು ವರದಿಯಾಗಿದೆ.

### ಹೊಸ ಸೋವಿಯತ್ ಒಕ್ಕೂಟ ಒಪ್ಪಂದ

ಸೋವಿಯತ್ ಒಕ್ಕೂಟದ ಸರ್ಕಾರ ಈಗಿನ ವಾಸ್ತವತೆಯ ಆಧಾರದ ಮೇಲೆ ತಯಾರಿಸಿರುವ ಹೊಸ ಸೋವಿಯತ್ ಒಕ್ಕೂಟ ಒಪ್ಪಂದ'ಕ್ಕೆ ಸಹಿ ಹಾಕಬೇಕೆಂದು ಅಧ್ಯಕ್ಷ ಗೋರ್ಬಚೆವ್ ಒಕ್ಕೂಟದ ಎಲ್ಲಾ ಘಟಕ ಗಣತಂತ್ರಗಳಿಗೆ ಮನವಿ ಮಾಡಿದ್ದಾರೆ. ಈ ಹೊಸ ಒಪ್ಪಂದ ಗಣತಂತ್ರಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡಲಾಗಿದ್ದು, ಅದನ್ನು ಸಾರ್ವಭೌಮ ಗಣತಂತ್ರಗಳ ಒಕ್ಕೂಟ ಎಂದು ಕರೆಯಲಾಗುವುದು. ಇದಕ್ಕೆ ಸಹಿ ಹಾಕಲು ಅತಿ ದೊಡ್ಡ ಘಟಕ ಗಣತಂತ್ರ ರಷ್ಯನ್ ಗಣತಂತ್ರದ ಅಧ್ಯಕ್ಷ ಯೆಲ್ಸ್‌ಸಿನ್ ನಿರಾಕರಿಸಿದ್ದು, ಈ ಬಗ್ಗೆ ಅವರು ಗೋರ್ಬಚೇವ್ ಜತೆ ಮಾತುಕತೆ ನಡೆಸಿದ್ದಾರೆ. ಆರ್ಥಿಕ ರಾಜಕೀಯ ಹಕ್ಕುಗಳು ಒಕ್ಕೂಟ ಮತ್ತು ಗಣತಂತ್ರಗಳ ನಡುವೆ ಹೇಗೆ ವಿಂಗಡಿಸಬೇಕೆಂಬುದನ್ನು ಹೊಸ ಒಕ್ಕೂಟ ಒಪ್ಪಂದ ಸಹಿ ಆದ ಮೇಲೆ ಪರಿಶೀಲಿಸಬಹುದು ಎಂದು ಸೋವಿಯತ್ ಸರ್ಕಾರದ ನಿಲುವು ರಷ್ಯನ್ ಅಧ್ಯಕ್ಷ ಯೆಲ್ಸ್‌ಸಿನ್ ಇದನ್ನು ಒಪ್ಪುತ್ತಿಲ್ಲ.

ಶೀಘ್ರವೇ ಈ ಒಪ್ಪಂದಕ್ಕೆ ಸಹಿ ಹಾಕದಿದ್ದರೆ, ಚೀನಾದ ಸಾಂಸ್ಕೃತಿಕ ಕ್ರಾಂತಿಗಿಂತಲೂ ಹೆಚ್ಚಿನ ಹಿಂಸಾಚಾರ, ಅರಾಜಕತೆಗೆ ಎಡೆ ಮಾಡಿಕೊಡುತ್ತದೆ ಎಂದು ಗೋರ್ಬಚೆವ್ ಎಚ್ಚರಿಸಿದ್ದಾರೆ.

### ಅಮೇರಿಕಾದಲ್ಲಿ ಎಡ ಶಕ್ತಿಗಳ ಉದಯ?

ಅಮೇರಿಕದ ಪಾರ್ಲಿಮೆಂಟನಲ್ಲಿ 40 ವರ್ಷಗಳ ನಂತರ ಎಡ ಪಂಥೀಯರು ಎನ್ನಬಹುದಾದ ಸದಸ್ಯರು ಚುನಾಯಿತರಾಗಿದ್ದಾರೆ. ಈ ಸದಸ್ಯರು ಬನಿಕ ಸ್ಯಾಂಡರ್ಸ್ ಮತ್ತು ಪ್ರೊ॥ ಪಾಲ್ ವೆಲ್‌ಸ್ಟೋನ್ 40 ರ ಹರೆಯದವರು. 60 ರ ದಶಕದ ವಿಯೇಟ್ನಾಂ ವಿರೋಧಿ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿ ಎಡ ಚಳುವಳಿಯತ್ತ ಆಕರ್ಷಿತರಾದವರು.

ಇವರ ಆಯ್ಕೆ ಅಮೇರಿಕಾದ ಮತದಾರರು ಮೂರನೇಯ ರಾಜಕೀಯ ಶಕ್ತಿಗಾಗಿ ಬದಲಿಗೆ ಈಗ ತಯಾರಾಗಿದ್ದಾರೆ ಎಂದು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಎರಡು ಪ್ರಮುಖ ರಾಜಕೀಯ ಪಕ್ಷಗಳನ್ನು ಬಿಟ್ಟು, ಉಳಿ ರಾಜಕೀಯ ಶಕ್ತಿಗಳು ಚುನಾವಣೆಯ ಪೂರ್ಣ ವ್ಯಾಪಾರೀಕರಣದಿಂದ, ಭಾ ಉದ್ಯಮಿಗಳ ಬೆಂಬಲವಿಲ್ಲದೆ ಚುನಾವಣೆ ಗೆಲ್ಲಲು ಸಾಧ್ಯವೇ ಇಲ್ಲ ಎಂ ಪರಿಸ್ಥಿತಿ ಕಳೆದ ನಾಲ್ಕು ದಶಕಗಳಲ್ಲಿ ಇತ್ತು. ಆದರೆ ಇಬ್ಬರು ಆ ಪರಿಸ್ಥಿ ಬದಲಾಯಿಸಲು ಸಾಧ್ಯ ಎಂದು, ತಮ್ಮ ಚುನಾವಣಾ ಪ್ರಚಾರಕ್ಕೆ ಜನರಿಂದಲೇ ಹಣ ಸಂಗ್ರಹಿಸಿ ಪ್ರಚಾರ ಮಾಡಿ ಗೆದ್ದು ತೋರಿಸಿಕೊಟ್ಟಿದ್ದಾರೆ. ಇತರ ಸೋತ ಹಲವು ಸ್ವತಂತ್ರ ಅಭ್ಯರ್ಥಿಗಳು ಈ ರೀತಿ ಜನತೆಯಿಂದ ಹಣ ಸಂಗ್ರಹಿಸಿ ರಾಜಕೀಯ ಪ್ರಚಾರದಲ್ಲಿ ತೊಡಗಿದ್ದರು- ಯಾವುದೇ ಉದ್ಯಮಿಗಳ ಸಹಾಯವಿಲ್ಲದೆ ನೀತಿಗಳಲ್ಲಿ ಭಾರಿ ವ್ಯತ್ಯಾಸಗಳಿಲ್ಲದಿರುವ ಅಮೇರಿಕಾದ ದ್ವಿಪಕ್ಷ ಪದ್ಧತಿಗೆ ಇದು ಸವಾಲು ಎನ್ನಲಾಗಿದೆ.

ಅಮೇರಿಕದಲ್ಲಿ ಹಿಂದೆ ಎಡ ಸದಸ್ಯರು ಆಯ್ಕೆಯಾಗಿದ್ದು ಒಂದು ಸಮಾಜವಾದಿ ಸದಸ್ಯ 1911-29 ರವರೆಗೆ, 1939-51 ಅವಧಿಯಲ್ಲಿ ಇಬ್ಬರು ಅಮೆರಿಕನ್ ಲೇಬರ್ ಪಕ್ಷದ ಸದಸ್ಯರು ಎನ್ನಲಾಗಿದೆ.

## ಕೊಲ್ಲಿ ವಿವಾದ

# ಅಮೆರಿಕನ್ ಸಾಮ್ರಾಜ್ಯಶಾಹಿ ಯದ್ಧಕ್ಕೆ ಸನ್ನದ್ಧವಾಗುತ್ತಿದೆ

ಅಮೆರಿಕನ್ ಸಾಮ್ರಾಜ್ಯಶಾಹಿ ಜಗತ್ತನ್ನು ಒಂದು ಅನಾಹುತದತ್ತ ತಳ್ಳುತ್ತಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಕೊಲ್ಲಿಯಲ್ಲಿ ಇನ್ನೂ ಒಂದು ಲಕ್ಷ ಸೈನ್ಯವನ್ನು ಕಳುಹಿಸುವ ಬುಶ್ ಸರ್ಕಾರದ ಇತ್ತೀಚಿನ ಆಸೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ತೀವ್ರವಾಗಿ ಖಂಡಿಸಿದೆ.

ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಜೇಮ್ಸ್ ಬೇಕರ್‌ರವರ ಕೊಲ್ಲಿ ಭೇಟಿ ನೋಡಿದರೆ ಅಮೆರಿಕಾ ಕೊಲ್ಲಿಯಲ್ಲಿ ಯುದ್ಧಕ್ಕೆ ಸನ್ನದ್ಧವಾಗುತ್ತಿರುವುದು ಕಂಡುಬರುತ್ತದೆ. ಬ್ರಿಟನ್ನಿನ ಸಂಸತ್‌ನಲ್ಲಿ ಮಾರ್ಗರೆಟ್ ಥ್ಯಾಚರ್‌ರವರ ಟೋರಿ, ಇದಕ್ಕೆ ಮತ್ತೊಂದು ಸಾಕ್ಷಿ. ಈ ಕಾರಣದಿಂದಾಗಿಯೇ ಒಗ್ಗಟ್ಟಿನ ಪರಿಹಾರಕ್ಕೆ ಅರಬ್ ಪ್ರಸ್ತಾಪಗಳನ್ನು ಅಮೆರಿಕಾ ತಿರಸ್ಕರಿಸಿದೆ ಎಂದು ಪಿ.ಬಿ.ಹೇಳಿದೆ.

ವಿಶ್ವದ ಮೇಲೆ ಪ್ರಾಬಲ್ಯ ಹೇರುವ, ಕೊಲ್ಲಿಯ ತೈಲ ಸಂಪನ್ಮೂಲದ ಮೇಲೆ ಹತೋಟಿ ಪಡೆಯುವ ತನ್ನ ಆಕಾಂಕ್ಷೆ ಈಡೇರಿಸಿಕೊಳ್ಳಲು ವಿಶ್ವದ ಪ್ರತಿಗಾಮಿ ಶಕ್ತಿಗಳ ಕಾವಲುಭಟನ ಪಾತ್ರವಹಿಸುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿ ಆರಂಭಿಸಲು ಯತ್ನಿಸುತ್ತಿರುವ ಈ ಯುದ್ಧ ಭಾರೀ ಸಾವು-ನೋವು, ನಷ್ಟಗಳನ್ನುಂಟು ಮಾಡುವುದು ಮಾತ್ರ ವಲ್ಲದೆ, ವಿಶ್ವದ ವಿಶೇಷವಾಗಿ ಹಿಂದೂ ಮಹಾಸಾಗರದ ಶಾಂತಿ-ಭದ್ರತೆಗೆ ಬೆದರಿಕೆಯೊಡ್ಡಲಿದೆ: ಅತ್ಯಂತ ಹೆಚ್ಚು ಸಂಕಷ್ಟಕ್ಕೊಳಗಾಗುವ ದೇಶಗಳೆಂದರೆ ಕೊಲ್ಲಿಯತೈಲದ ಮೇಲೆ ಅವಲಂಬಿಸಿರುವ ಭಾರತ ಮತ್ತಿತರ ತೃತೀಯ ಜಗತ್ತಿನ ದೇಶಗಳು ಎಂದು ಪೊಲಿಟ್‌ಬ್ಯೂರೋ ಆತಂಕ ವ್ಯಕ್ತಪಡಿಸಿದೆ.

ಅಮೆರಿಕಾದ ಇತ್ತೀಚಿನ ಈ ನಿರ್ಣಯದಿಂದಾಗಿ ವಿಶ್ವಸಂಸ್ಥೆಯ ಪ್ರಧಾನಕಾರ್ಯದರ್ಶಿಯವರು ಅಮೆರಿಕಾಕ್ಕೆ ಈ ರೀತಿ ಏಕಪಕ್ಷೀಯವಾಗಿ ಯುದ್ಧ ನಡೆಸುವ ಹಕ್ಕಿಲ್ಲ, ಏಕೆಂದರೆ ಭದ್ರತಾ ಸಮಿತಿ ಈ ಬಗ್ಗೆ ವಿವಾದದ ಬಗ್ಗೆ ಆಗಲೇ ಚರ್ಚಿಸುತ್ತಿದೆಎಂದು ಪ್ರತಿಕ್ರಿಯಿಸಬೇಕಾಗಿಬಂದಿದೆ. ಆದ್ದರಿಂದ ಶಾಂತಿ ಬಯಸುವ ಎಲ್ಲಾ ಶಕ್ತಿಗಳೂ ಅಮೆರಿಕನ್ ಸಾಮ್ರಾಜ್ಯಶಾಹಿಯ ತಂತ್ರಗಳನ್ನು ವಿಫಲಗೊಳಿಸಲು ಒಗ್ಗಟ್ಟಿನಿಂದ ಕಾರ್ಯಾಚರಣೆ ಗಿಳಿಯಬೇಕಾಗಿದೆ ಎಂದು ಪಿ.ಬಿ.ಅಭಿಪ್ರಾಯಪಟ್ಟಿದೆ.

ಪಶ್ಚಿಮ ಏಷ್ಯಾದ ಎಲ್ಲಾ ಸಂಘರ್ಷಗಳಿಗೆ ಶಾಂತಿಯುತ ಮಾತುಕತೆಗಳ ಮೂಲಕ ಪರಿಹಾರ, ಕುವೈತ್‌ನಿಂದ ಇರಾಕ್ ಪಡೆಗಳು ಹಾಗೂ ಕೊಲ್ಲಿಯಿಂದ ಅಮೇರಿಕಾ ಮತ್ತಿತರ ವಿದೇಶೀ ಪಡೆಗಳು ಏಕಕಾಲದಲ್ಲಿ ಹಿಂದುರುಗಬೇಕು ಎಂದು ಎಲ್ಲಾ ದೇಶಗಳ ಜನರ ಒಂದು ಹೊಸ ಪಕ್ಷ ಚಳುವಳಿ ಹುಟ್ಟುತ್ತಿದೆ ಎಂದಿರುವ ಪಿ.ಬಿ. ಈ ಆಂದೋಲನವನ್ನು ಅಭಿನಂದಿಸುತ್ತಾ ತನ್ನ ಪೂರ್ಣ ಬೆಂಬಲವನ್ನು ಅದಕ್ಕೆ ವ್ಯಕ್ತಪಡಿಸಿದೆ. ಕೊಲ್ಲಿಗೆ ಸೇನೆ ಕಳಿಸುವ ಜಪಾನೀ ಸರಕಾರದ ನಿರ್ಣಯವನ್ನು ಕೈಬಿಡುವಂತೆ ಮಾಡಿದ ಜಪಾನಿನ ಜನತೆಯ ಆಂದೋಲನದ ಯಶಸ್ಸಿಗೆ ಪಿ.ಬಿ. ಅಭಿನಂದಿಸಿದೆ.

ಕೊಲ್ಲಿಯಲ್ಲಿ ಯುದ್ಧ ನಡೆಯದಂತೆ ತಡೆಯಲು ದೃಢ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಲ್ಲಾ ಸಂಘರ್ಷಗಳಿಗೆ ಶಾಂತಿಯುತ ಪರಿಹಾರ [illegible] ಯಲು ಪ್ರಯತ್ನಿಸಬೇಕೆಂದು ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಪಿ.ಬಿ. ಮನವಿ ಮಾಡಿದೆ. ಈ [illegible] ಭದ್ರತಾ ಸಮಿತಿಯ [illegible] ಒಂದು ದೃಢ ನಿಲುವು [illegible] ಬೇಕೆಂದೂ ಪಿ.ಬಿ. [illegible].

K R N M/ BGW - 293 MAG (2) PRB DECR-319.- 78/79

# ಡಿಸೆಂಬರ್ 6 ರಂದು ಕರ್ನಾಟಕದಲ್ಲಿ ಮಾನವ ಸರಪಣಿ

ಪುಟ 1ರಿಂದ

ಮತೀಯ ಸೌಹಾರ್ದತೆಯನ್ನು ರಕ್ಷಿಸಲು, ಕೇಂದ್ರಸರಕಾರ ಬಿಜೆಪಿ.ವಿ.ಹೆಚ್.ಪಿ.ಯ ಆಹ್ವಾನವನ್ನು ಧೈರ್ಯದಿಂದ ಎದುರಿಸುವಂತೆ ಮಾಡಲು ಮತ್ತು ಮತೀಯ ದಂಗೆಯ ಗಂಡಾಂತರವನ್ನು ತಪ್ಪಿಸುವ ಸಲುವಾಗಿ ಎಲ್ಲಾ ಜಾತ್ಯಾತೀತ ಶಕ್ತಿಗಳ ಐಕ್ಯತೆ ಸಾಧಿಸುವ ಸಲುವಾಗಿ ಶತ ಪ್ರಯತ್ನ ನಡೆಸಿತು. ಎಂದು . ಪಿ. ರಾಮಚಂದ್ರನ್ ಹೇಳಿದರು.

ಸಿ.ಪಿ.ಐ(ಎಂ) ಮತ್ತು ಎಡಪಕ್ಷಗಳ ಒತ್ತಡದ ಪ್ರತಿಫಲವಾಗಿಯೇ, ನ್ಯಾಯಯುತವಾದ ಒಪ್ಪಂದವನ್ನು ಬಿಜೆಪಿ ನಿರಾಕರಿಸಿ ರಥಯಾತ್ರೆ ಮೂಲಕ ತನ್ನ ಪಕ್ಷದ ಪ್ರಚಾರ, ಜಾತೀಯ ದ್ವೇಷ ಎಬ್ಬಿಸುತ್ತಿರುವ ರಥಯಾತ್ರೆಯನ್ನು ತಡೆಯಬೇಕೆಂದು ಎಡ ಪಕ್ಷಗಳೂ, ಕಾಂಗ್ರೆಯೂ ಒತ್ತಾಯ ಮಾಡಿದ್ದರಿಂದ ಅದ್ವಾನಿಯವರ ಬಂಧನವಾಯಿತೆಂದೂ, ಅದು ದಂಗೆಗೆ ಮತ್ತು ಹಿಂಸಾಚಾರಕ್ಕೆ ಎಡಮಾಡಿಕೊಟ್ಟಿತೆಂದೂ, ಹೇಳಿದರು. ರಾಮದೇಗುಲದ ಹೆಸರಿನಲ್ಲಿ, ಬಿಜೆಪಿ ವಿ.ಹೆಚ್.ಪಿ.ಯವರು ಎಬ್ಬಿಸಿರುವ ಸಂಕುಚಿತ ಭಾವನೆಯ ಪ್ರಚಾರ ಬಹಳಷ್ಟು ಜನರ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಮರೆಯಬಾರದೆಂದೂ ಅಂಥ ಪ್ರಚಾರವನ್ನು ಎದುರಿಸಲು ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ ಇಡೀ ಪ್ರಜಾಪ್ರಭುತ್ವ ಚಳುವಳಿಗೆ ಅಪಾಯವನ್ನುಂಟು ಮಾಡಬಹುದೆಂದೂ ಎಚ್ಚರಿಸಿ. ಬಿಜೆಪಿ. ವಿಹೆಚ್‌ಪಿಯವರು ದೇಶವನ್ನು ಕಾಯಂ ಆಗಿ ಜಾತಿಯ ತಳಹದಿಯಲ್ಲಿ ವಿಭಜಿಸುವ ಹೊಂಚುಹಾಕಿರುವರೆಂದೂ, ಆ ಮೂಲಕ ಭಾರತವನ್ನು ಅಸ್ಥಿರಗೊಳಿಸಲು ಹೊರಟಿರುವ ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವುದೆಂದೂ ಹೇಳಿದರು.

ರಾಮಚಂದ್ರನ್ ಅವರು ರಾಜೀವ ಗಾಂಧಿಯವರ ತಂತ್ರವನ್ನು ಬಯಲಿಗೆಳೆಯುತ್ತಾ ವಿ.ಪಿ.ಸಿಂಗ್ ಸರಕಾರವನ್ನು ತೆಗೆದು ಹಾಕಲು ಕಾಂಗ್ರೆ ಮುಖಂಡರು ಅನುಸರಿಸಿದ ಕುಯುಕ್ತಿಯನ್ನು ಅಂದರೆ ದಳದಲ್ಲಿ ಮುಖಂಡತ್ವದ ಬದಲಾವಣೆಗಾಗಿ ಪ್ರಯತ್ನ, ಚಂದ್ರಶೇಖರ ಅವರಿಗೆ ಬೆಂಬಲಗಳನ್ನು ತಿಳಿಸಿದರು.

ವಿ.ಪಿ.ಸಿಂಗ್ ಸರಕಾರದ ಸೋಲಿನಿಂದಾಗಿ, ಕಾಂಗ್ರೆ ಬೆಂಬಲದಿಂದ ಚಂದ್ರಶೇಖರ ಅವರ ಸರಕಾರ ರಚನೆಯಿಂದಾಗಿ, ದೇಶದಲ್ಲಿ ಎಡ ಮತ್ತು ಜನತಾದಳ ಜೊತೆಯಾಗಿ ಚಳುವಳಿ ನಡೆಸಲು ಅನುಕೂಲವಾಗಿದ್ದೆಂದೂ, ಅದನ್ನು ಉಪಯೋಗಿಸಿಕೊಂಡು ಎಡ ಪಕ್ಷಗಳೂ, ರಾಷ್ಟ್ರೀಯ ರಂಗವೂ, ಜಾತ್ಯತೀತ ಶಕ್ತಿಗಳೊಡನೆ ಸೇರಿಕೊಂಡು ಜನರ ಮಧ್ಯೆ ಹೋಗಿ ನಿಜ ಪರಿಸ್ಥಿತಿ ತಿಳಿಸಬೇಕೆಂದೂ, ಅದು ಮುಂಬರುವ ಚುನಾವಣೆಗೆ ಸಹಾಯವಾಗುವುದೆಂದೂ ಹೇಳಿದರು.

ಮಂದಿರ-ಮಸ್‌ಜೀದ ಸಮಸ್ಯೆ, ಮಂಡಲ ಕಮಿಶನ್ ವರದಿ ಪರ - ವಿರೋಧ ಚಳುವಳಿಗಳೆಲ್ಲಾ ರಾಜಕೀಯ ಪರಿಸ್ಥಿತಿಯನ್ನು ಕಲುಷಿತಗೊಳಿಸುತ್ತಿರುವಾಗ, ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ ಕುರಿತು ಜನತೆ ಗಮನ ಹರಿಸಿದಂತೆ ಕಂಡು ಬರುವುದಿಲ್ಲವೆಂದೂ. ಗಗನಕ್ಕೇರುತ್ತಿರುವ ಬೆಲೆ, ಮುಚ್ಚಲ್ಪಡುತ್ತಿರುವ ಕಾರ್ಖಾನೆಗಳು, ನಿರುದ್ಯೋಗ ಸಮಸ್ಯೆಗಳೆಲ್ಲಾ ಗಂಡಾಂತರದ ಅಂಚನ್ನು ತಪ್ಪಿದೆ. ಗಲ್ಫ್ ದೇಶಗಳ ಬಿಕ್ಕಟ್ಟು ಇವುಗಳನ್ನು ಮತ್ತಷ್ಟು ಗಂಭೀರ ಪರಿಸ್ಥಿತಿಗೆ ಒಯ್ದಿದೆ. ಆದ್ದರಿಂದ ನಮ್ಮ ಪಕ್ಷ ಎಡ ಮತ್ತು ಸಾಮೂಹಿಕ ಸಂಘಟನೆಗಳ ಸಹಾಯದಿಂದ ಸಂಯುಕ್ತ ಚಳುವಳಿ ನಡೆಸಲು ಮುಂದಾಗ ಬೇಕೆಂದೂ ರಾಮಚಂದ್ರನ್ ಹೇಳಿದರು.

- ಎನ್.ಕೆ. ಉಪಾಧ್ಯಾಯ

## ಈ ವಾರ...

ಪೋಲೆಂಡ್‌ನಲ್ಲಿ ನಿರುದ್ಯೋಗಿಗಳ ಸಂಖ್ಯೆ ಈಗಷ್ಟೆ 10ಲಕ್ಷ ಮುಟ್ಟಿದೆ.ಕ್ರಿಸ್‌ಮಸ್ ವೇಳೆಗೆ ಅದು ಕನಿಷ್ಠ 12.5 ಲಕ್ಷ ಆಗಲಿದೆ. ಹಾಗು ಮುಂದಿನ ವರ್ಷ 20 ಲಕ್ಷ ಆಗಲಿದೆ.- ಈಗ ಪೂರ್ವಯುರೋಪಿನ ಆರ್ಥಿಕತೆಗಳು ಯೋಜನೆಗಳಿಂದ ಮಾರುಕಟ್ಟೆ ಆರ್ಥಿಕತೆಯನ್ನು ಅಳವಡಿಸಿಕೊಳ್ಳುತ್ತಿರುವುದರಿಂದ ನಿರುದ್ಯೋಗ ಅನಿವಾರ್ಯವಾಗಿದೆ.ನಿರುದ್ಯೋಗಿಗಳ ಹೆಚ್ಚಳವೆಂದರೆ ಮಾರುಕಟ್ಟೆ ಕ್ರಾಂತಿಯಲ್ಲಿ ತನಗೆ ದೊರೆತ ವಿಜಯ ಎಂದು ಸಾಲಿಡಾರಿಟಿ ಭಾವನೆ. ಆದರೆ, ರಾಜಕೀಯ ಅಪಾಯದ ಮಾನದಂಡವೂ ಹೌದು. ಕಾರ್ಮಿಕರು ಅತೃಪ್ತರಾಗಿದ್ದಾರೆ.

'ಲಂಡನ್ ಟೈಮ್ಸ್' ವರದಿಯಲ್ಲಿ.

ತಮ್ಮ ಸಹೋದರರೊಂದಿಗಿನ ಧಾರ್ಮಿಕ ವಿವಾದಗಳನ್ನು ಬಗೆಹರಿಸಲು ಜನರನ್ನು ಪ್ರಚೋದಿಸುವವರು ಧಾರ್ಮಿಕ ಉದ್ದೇಶಗಳಿಂದ ಮಾರ್ಗದರ್ಶನ ಪಡೆದವರಲ್ಲ. ಅಂಥವುಗಳನ್ನು ಕಿಟಲೆ ಮಾಡುವವರ ವಿರುದ್ಧ ವ್ಯಾಪಕ ಪ್ರಚಾರ ಮಾಡುವ ಮೂಲಕ ತಡೆಗಟ್ಟಬೇಕು. ದುರದೃಷ್ಟವಶಾತ್, ರಾಷ್ಟ್ರೀಯ ವಾಹಿನಿಯ ಪ್ರಮುಖ ರಾಜಕೀಯ ಪಕ್ಷಗಳು ಬೆಂಬಲಿಸುವುದರೊಂದಿಗೆ ಇಂಥ ಶಕ್ತಿಗಳಿಗೆ ಗೌರವ ಸಿಗುವ ಪರಿಸ್ಥಿತಿ ಒದಗಿ ಬರುತ್ತಿದೆ. ಕೋಮುವ್ಯಾಧಿಯ ಅಪಾಯವನ್ನು ಈಗ ರಾಜಕಾರಣಿಗಳು ಕಡೆಗಣಿಸಿದರೆ ಮುಂದಿನ ಹಂತದಲ್ಲಿ ಅದನ್ನು ನಿಯಂತ್ರಿಸುವುದು ಕಷ್ಟವಾಗಲಿದೆ ಎನ್ನುವುದನ್ನು ಮನಗಾಣಬೇಕಾಗಿದೆ.

'ದಿ ಹಿಂದೂಸ್ಥಾನ್ ಟೈಮ್ಸ್'
ಸಂಪಾದಕೀಯ ನವೆಂಬರ್16

ಕೊಲ್ಲಿ ಬಿಕ್ಕಟ್ಟಿನಿಂದಾಗಿ ಈಗಾಗಲೇ ವಿಶ್ವದ ಹಲವು ರಾಷ್ಟ್ರಗಳ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಕೌಟಿಯಲ್ಲಿ ಅಮೇರಿಕ ಸೇನೆ ನೆಲೆ ಹೂಡಿದ್ದರಿಂದಾಗಿಯೇ ಹಲವು ರಾಷ್ಟ್ರಗಳ ಮೇಲೆ ಹೊರೆ ಬಿದ್ದಿದೆ. ಸೌದಿಯಲ್ಲಿ ತನ್ನ ಸೇನೆ ನೋಡಿಕೊಳ್ಳಲು ಅಮೇರಿಕಕ್ಕೆ ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ತಗಲಿದ ವೆಚ್ಚ 2500 ಲಕ್ಷ ಡಾಲರ್‌ಗಳು. ಸೌದಿಯಲ್ಲಿ 1991ನೇ ಸಾಲಿನಲ್ಲಿ ಶಸ್ತ್ರಾಸ್ತ್ರ ಸಂಗ್ರಹಣೆಗಾಗಿ ಕನಿಷ್ಠವೆಂದರೂ 15000 ಲಕ್ಷ ಡಾಲರ್‌ಗಳು ಖರ್ಚಾಗಬಹುದು.ಈಗಿನ ಲೆಕ್ಕದ ಪ್ರಕಾರ ಸೌದಿ ಅರೇಬಿಯಾದಲ್ಲಿರುವ ತನ್ನ ಸೇನೆಯನ್ನು ವ್ಯವಸ್ಥಿತವಾಗಿ ನೋಡಿಕೊಳ್ಳಲು ಪ್ರತಿದಿನಕ್ಕೆ ತಗಲುತ್ತಿರುವ ವೆಚ್ಚ ನೂರು ಲಕ್ಷ ಡಾಲರ್‌ಗಳು. 54 ದೇಶಗಳು ಅಮೆರಿಕಕ್ಕೆ ಬೆಂಬಲ ಘೋಷಿಸಿದ್ದು ಆರ್ಥಿಕ ನೆರವು ನೀಡಲು ಒಪ್ಪಿದೆ. ಸೌದಿ 800 ಲಕ್ಷ, ಕುವೈತ್ 400 ಲಕ್ಷ, ಜಪಾನ್ 400 ಲಕ್ಷ ಡಾಲರ್‌ಗಳನ್ನು ಕೊಡಲು ಒಪ್ಪಿವೆ. ಈ ಎಲ್ಲಾ ಖರ್ಚು ಮಾನವನ ಕೊಳ್ಳುವ ಶಕ್ತಿಯನ್ನೂ ಕಡಿಮೆ ಮಾಡುತ್ತವೆ. ಅವನನ್ನು ಆರ್ಥಿಕ ಸಂಕಷ್ಟಕ್ಕೆ ದೂಡುತ್ತವೆ.ಇಂಥ ಯುದ್ಧ ಅಗತ್ಯವೇ ಎಂಬ ಪ್ರಶ್ನೆಯನ್ನು ಸೌದಿಯಲ್ಲಿರುವ ಅಮೆರಿಕಾದ ಸೈನಿಕರು ಹಾಕುತ್ತಿದ್ದಾರೆ.

'ಪ್ರಜಾವಾಣಿ' ಲೇಖನ ನವೆಂಬರ್ 18

ಶಾಲೆಗೆ ಹೋಗುವ ಮಕ್ಕಳಿಗೆ ವರ್ಷಕ್ಕೊಮ್ಮೆ ಸಡಗರದ ದಿನ ಬರುತ್ತದೆ. ದೊಡ್ಡವರ ಭಾಷಣ ಕೇಳಲೇ ಬೇಕಾದ ಮಕ್ಕಳ ದಿನಾಚರಣೆ ಅದು. ದೇಶದ ಪ್ರಧಾನಮಂತ್ರಿಯಿಂದ ಹಿಡಿದು ಗ್ರಾಮದ ಹಿರಿಯ ಧುರೀಣರವರೆಗು ಮಕ್ಕಳೆದುರು ಮಕ್ಕಳ ಕ್ಷೇಮ ಕಲ್ಯಾಣಗಳ ಬಗ್ಗೆ ಈ ದಿನ ಗಂಭೀರ ಚಿಂತನೆ ಮಾಡುತ್ತಾರೆ. ಶಾಲೆಯನ್ನೇ ನೋಡಿರದ ಕೂಲಿ ಮಕ್ಕಳಿಗಾಗಲೀ, ಶಾಲೆಯಲ್ಲಿ ಶಿಕ್ಷಕರನ್ನೇ ಕಂಡಿರದ ಲಕ್ಷಾಂತರ ಮಕ್ಕಳಿಗಾಗಲೀ ಸಧ್ಯಕ್ಕೆ ಈ ಚಿಂತನೆಯ ಬಿಸಿ ತಟ್ಟುವುದಿಲ್ಲ. ಶಾಲೆಗೆ ಕಾಲಿಡುವ ಮೊದಲೇ ನ್ಯೂನ ಪೋಷಣೆಯಿಂದಾಗಿ, ರೋಗಪೀಡಿತರಾಗಿ ಕಣ್ಣುಮುಚ್ಚುವ ಎಳೆಮಕ್ಕಳಂತೂ ಈ ವಾರ್ಷಿಕ ದಿನಾಚರಣೆಯಿಂದ ದೂರವೇ ಆಗಿರುತ್ತಾರೆ.

ಸಂಪಾದಕೀಯದಲ್ಲಿ 'ಪ್ರಜಾವಾಣಿ '
16.11.90

ಅಧಿಕಾರಿಗಳ ವರ್ಗಾವರ್ಗಿಯನ್ನೇ ಆಡಳಿತಾತ್ಮಕ ಬದಲಾವಣೆ ಎಂದು ಅನೇಕರು ಭಾವಿಸುತ್ತಾರೆ.ಇನ್ನು ಕೆಲವರು ಎಲ್ಲಾ ವರ್ಗಾವರ್ಗಿಯನ್ನು ಜಾತಿಯ ದೃಷ್ಟಿಯಿಂದಲೇ ನೋಡುತ್ತಾರೆ. ರಾಜಕಾರಣಿ-ಅಧಿಕಾರಿಗಳ ನಡುವಣ ಸಂಬಂಧ ಹೇಗಿರಬೇಕೋ ಹಾಗಿಲ್ಲದಿರುವುದರಿಂದ ಈ ವಿಧದ ಲೆಕ್ಕಾಚಾರ ಸಾಧ್ಯ. ಆದರೆ ಆ ದೃಷ್ಟಿಕೋನ ಸರಿಯಲ್ಲ. ಅಧಿಕಾರಿಗಳ ವರ್ಗಾವರ್ಗಿಯಿಂದ ಆಡಳಿತದಲ್ಲಿ ಸುಧಾರಣೆಯಾಗಬೇಕಾದರೆ ಮೇಲ್ಮಟ್ಟದಲ್ಲಿ ಹಿಡಿತ ಇರಬೇಕು. ಆ ಹಿಡಿತ, ನಿಯಮಗಳಿಂದ ಬರುವುದಿಲ್ಲ. ರಾಜಕೀಯ ಇಚ್ಛಾಶಕ್ತಿಯಿಂದಲೇ ಅದು ಬರಬೇಕು. ಸಧ್ಯಕ್ಕಂತೂ ಈಗಿನ ಮಂತ್ರಿಗಳು ಆ ಹಿಡಿತವನ್ನು ತೋರಿಸಿಲ್ಲ. ಕೆಲವರು ದರ್ಪ ತೋರಿಸಿರಬಹುದು. ದರ್ಪಕ್ಕೂ ಹಿಡಿತಕ್ಕೂ ವ್ಯತ್ಯಾಸವಿದೆ.

'ಕನ್ನಡ ಪ್ರಭ' ನಗರ ಪ್ರದಕ್ಷಿಣೆ ಅಂಕಣದಲ್ಲಿ
ನವೆಂಬರ್ 19

**ಚಾಟಿಯೇಟು**

ಬೋಫೋರ್ಸ್ ಬಗ್ಗೆ ತನಿಖೆ ನಡೆಸುವುದು ಪ್ರಧಾನಿ ಹಿಂಸದಲ್ಲಿ, ಸಚ್ ಇನ್ಸ್‌ಪೆಕ್ಟರ್ ಅಧ್ಯಕ್ಷ ಮಾಡುತ್ತಾನೆ.-'ಪ್ರಧಾನಿ' ಚಂದ್ರಶೇಖರ್
—— ಆಹಾ! 'ಗುರುವಿಗೆ' ತಕ್ಕ 'ದಕ್ಷಿಣೆ'.

## ಬೀಡಿ ಕಾರ್ಮಿಕರಿಂದ ಬೇಡಿಕೆ ವಾರಾಚರಣೆ

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷರಾದ ಕೆ. ಮುಂಡಪ್ಪನವರ ಅಧ್ಯಕ್ಷತೆಯಲ್ಲಿ ನವೆಂಬರ್ 7 ರಂದು ಬೀಡಿ ಕಾರ್ಮಿಕರ ಅಖಿಲ ಭಾರತ ಬೇಡಿಕೆಗಳ ವಾರಾಚರಣೆಯ ಸಭೆಯು ಜರುಗಿತು.

ಬೇಡಿಕೆಯ ಅನ್ವಯ ಸಾವಿರ ಬೀಡಿಗೆ ರೂ 25 ಕನಿಷ್ಠ ಕೂಲಿ, 1960 ರ ಗ್ರಾಹಕರ ಬೆಲೆ ಸೂಚ್ಯಂಕದ 680 ಪಾಯಿಂಟುಗಳ ಮೇಲಿನ ಪ್ರತಿ ಪಾಯಿಂಟಿಗೆ 5 ಪೈಸೆಯಂತೆ ತುಟ್ಟಿಭತ್ಯೆ, ಕೂಲಿಯ ಶೇಕಡ 20 ಬೋನಸ್ಸು, 6ದಿನಗಳ ಕೆಲಸ, ಹಾಗೂ ಬೀಡಿ ಕಾರ್ಮಿಕರಿಗೆ ವೆಲ್‌ಫೇರ್ ಫಂಡಿನಿಂದ ಸಿಗುವ ಎಲ್ಲಾ ಸವಲತ್ತುಗಳ ಬೇಡಿಕೆಗಳಿಗೆ ಸಿ.ಐ.ಟಿ.ಯು. ನೇತೃತ್ವದ ಬೀಡಿ ಕೆಲಸಗಾರರ ಸಂಘ ಸಂಪೂರ್ಣ ಬೆಂಬಲ ಘೋಷಿಸಿತು. ಮಾತ್ರವಲ್ಲದೆ ಧೀರ ಹೋರಾಟಕ್ಕೆ ಮುಂದಾಗ ಬೇಕೆಂದು ಕರೆ ನೀಡಿತು.

## ರಾಜ್ಯದ ಪತ್ರಿಕೆಗಳು

ಪುಟ 2ರಿಂದ

ಇದು ರಾಷ್ಟ್ರೀಯ ಹಾಗೂ ಹಿಂದಿ ಪತ್ರಿಕೆಗಳ ಸ್ಥಿತಿಯಾದರೆ ರಾಜ್ಯದ ಪತ್ರಿಕೆಗಳ ಸ್ಥಿತಿ ಏನು? ಪತ್ರಿಕೆಗಳ ಆಯಕಟ್ಟಿನ ಸ್ಥಾನದಲ್ಲಿರುವ ಪತ್ರಕರ್ತರು ಪತ್ರಿಕೆಯ ನೀತಿ ಸರಿಯಾಗಿದ್ದರೂ ಸುದ್ದಿ ಪ್ರಕಟಿಸುವಾಗ ಚಾಕಚಕ್ಯತೆ ತೋರಿದ್ದಾರೆ. ರಾಮಭಕ್ತ, ಕರ ಸೇವಕರ ಸುದ್ದಿಪ್ರಕಟಿಸಿದ್ದಾರೆ ಎಂದು ಲಂಕೇಶ್ ಪತ್ರಿಕೆ ವರದಿಮಾಡಿದೆ. ರಾಜ್ಯ ಪತ್ರಿಕೆಗಳಲ್ಲೂ 'ಕಾವಿ' ಛಾಯೆ‌ಇಣುಕಿದೆ.

ಈ ಎಲ್ಲಾ ವರದಿಗಳು ಅನೇಕ ಪತ್ರಿಕೆಗಳು ಆರ್‌ಎಸ್‌ಎಸ್‌ನ ಬಣ್ಣದ ತಗಡಿನ ತುತ್ತೂರಿಯಾದದ್ದನ್ನು ಬಣ್ಣಿಸಿದೆ. ಮತ್ತೆ ಪತ್ರಿಕಾ ರಂಗದಲ್ಲಿ ನಡೆಯುತ್ತಿರುವ ಮೌಲ್ಯಮಾಪನ ಕಾವಿ ಪತ್ರಕರ್ತರು, ಚರ್ಚೆ ಕಾವಿಇಲ್ಲದ ಪತ್ರಕರ್ತರನ್ನು ಸ್ಪಷ್ಟವಾಗಿ ವಿಭಜಿಸಿದೆ. ಈ ಮೌಲ್ಯಮಾಪನಗಳಿಂದ 'ಬಣ್ಣದ ತುತ್ತೂರಿ ಹಾಳಾಯ್ತು ಜಂಬದ ಕೋಳಿಗೆ ಗೋಳಾಯ್ತು' ಎನ್ನುವಂತಾಗಬೇಕು.

## ವಿ.ಹೆಚ್.ಪಿ ಯೋಜನೆಗೆ ತಕ್ಕ ಪ್ರತ್ಯುತ್ತರ ನೀಡಬೇಕು

ಅಯೋಧ್ಯೆಯಲ್ಲಿ ಮಸೀದೆಯನ್ನು ಕೆಡವಿ ದೇವಸ್ಥಾನ ಕಟ್ಟಲು ತಮ್ಮ ಉದ್ರೇಕಕಾರಿ ಚಳುವಳಿಯನ್ನು ಡಿಸೆಂಬರ್ 6 ರಿಂದ ಮುಂದುವರಿಸಲು ವಿಶ್ವ ಹಿಂದೂ ಪರಿಷತ್ತು ನಿರ್ಧರಿಸುವುದನ್ನು ಸಿ.ಪಿ.ಐ. (ಎಂ) ಪೊಲಿಟ್ ಬ್ಯುರೋ ಬಲವಾಗಿ ಖಂಡಿಸಿದೆ.

ವಿ.ಹೆಚ್.ಪಿ. ಘೋಷಿಸಿರುವ ಕಾರ್ಯಕ್ರಮ ದೇಶದಲ್ಲಿ ಇನ್ನಷ್ಟು ಕೋಮು ಭಾವನೆಗಳನ್ನು ಉದ್ರೇಕಿಸುವ ಒಂದು ದುಷ್ಟ ಯೋಜನೆ ಅಯೋಧ್ಯೆಯಲ್ಲಿ ಸತ್ತವರ ಅಸ್ಥಿಯನ್ನು ದೇಶದ ವಿವಿಧ ಭಾಗಗಳಿಗೆ ಕೊಂಡೊಯ್ಯುವುದು ಅಲ್ಪ ಸಂಖ್ಯಾತ ಕೋಮಿನ ವಿರುದ್ಧ ಭಾವೋದ್ರೇಕ ಎಬ್ಬಿಸುವ ಉದ್ದೇಶದಿಂದ ಕೂಡಿದ್ದು ಎಂದು ಹೇಳಿರುವ ಪಿ.ಬಿ. ತನ್ನ 'ಕರಸೇವೆ' ಆಂದೋಲನದ ಬೆನ್ನ ಹಿಂದೆ ನಡೆದ ಕೋಮುಗಲಭೆಗಳಲ್ಲಿ ಸತ್ತ . ನೂರಾರು ಜನಗಳ ಬಗ್ಗೆ ಇದೇ ವಿ.ಹೆಚ್.ಪಿ. ಯಾವುದೇ ಬೇಸರ ವ್ಯಕ್ತಪಡಿಸಿಲ್ಲ ಎಂಬುದನ್ನು ಗಮನಿಸಿದೆ.

ವಿ.ಹೆಚ್.ಪಿ.ಯ ಹೊಸ ಚಳುವಳಿಯ ಯೋಜನೆಗಳು ಪಂಜಾಬ್ ಹಾಗೂ ಕಾಶ್ಮೀರದಲ್ಲಿ ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಬೆದರಿಕೆಗಳನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ಹಿಂದೂಗಳ ಭಾವನೆಗಳೊಂದಿಗೆ ವಿ.ಹೆಚ್.ಪಿ. ಆಟವಾಡಬಯಸುತ್ತಿದೆ. ಆದರೆ ಹೆಚ್ಚೆಚ್ಚು ಹಿಂದೂಗಳು ಇದರ ಹಿಂದಿರುವ ವಿ.ಹೆಚ್.ಪಿ. - ಬಿಜೆಪಿ ಮುಖಂಡರ ರಾಜಕೀಯ ಆಟವನ್ನು ಅರಿತುಕೊಳ್ಳಲಾರಂಭಿಸುತ್ತಾರೆ ಎಂದು ಅಭಿಪ್ರಾಯಪಟ್ಟಿರುವ ಪೊಲಿಟ್ ಬ್ಯೂರೋ ಜಾತ್ಯತೀತತೆ ಮತ್ತ ಕೋಮುಸೌಹಾರ್ದದ ರಕ್ಷಣೆಗೆ ಜನರನ್ನು ಅಣಿನೆರೆಸಿ ಪ್ರತಿ - ಚಳುವಳಿ ಸಂಘಟಿಸಿ ಇದನ್ನು ವಿರೋಧಿಸಬೇಕೆಂದು ಜಾತ್ಯತೀತ ಶಕ್ತಿಗಳಿಗೆ ಕರೆ ನೀಡಿದೆ.

ವಿ.ಹೆಚ್.ಪಿ. ಕಾರ್ಯಕ್ರಮ ಸೃಷ್ಟಿಸುವ ಯಾವುದೇ ದುಷ್ಟ ಕೃತ್ಯಗಳನ್ನು ತಡೆಗಟ್ಟಲು ರಾಜ್ಯ ಸರಕಾರಗಳು ಹಾಗೂ ಕೇಂದ್ರಸರ್ಕಾರ ಪೂರ್ಣ ಜವಾಬ್ದಾರಿ ಹೊರುತ್ತವೆ ಎಂದು ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ನಿರ್ದೇಶಿಸುತ್ತಾ ನಗ್ನ ಕೋಮುವಾದೀ ಚಟುವಟಿಕೆಗಳನ್ನು ತಡೆಗಟ್ಟಲು. ಅಲ್ಪಸಂಖ್ಯಾತರಿಗೆ ಸಾಕಷ್ಟು ರಕ್ಷಣೆ, ಭದ್ರತೆ ನೀಡಲು ದೃಢ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

## ಎರಡು ಸಂಪಾದಕೀಯಗಳು

ರಾಮಜನ್ಮಭೂಮಿ ಕಾರಣಕ್ಕಾಗಿ 'ಕಾವಿ ಪತ್ರಿಕೋದ್ಯಮ' ಚಾಲ್ತಿಗೆ ಬರುತ್ತಿರುವಂತೆಯೇ ಮಹಿಳೆಯರ ಸ್ಥಾನಮಾನವನ್ನು ಸಮಾನತೆಗಾಗಿ ಅವರ ಹೋರಾಟವನ್ನು ಖಂಡಿಸಿ ಹೇಳಿಕೆನೀಡಿರುವ ಶ್ರೇಷ್ಠನ್ಯಾಯಾಧೀಶ ರಂಗನಾಥ ಮಿಶ್ರಾ ಅವರ ಪ್ರಕರಣ ಇದಕ್ಕೆ ಇನ್ನಷ್ಟು ಕುಮ್ಮಕ್ಕು ನೀಡಿದೆ.

"ಮಹಿಳೆಯರಿಗೆ ಸಮಾನತೆಬೇಡ. ಅವರು ಮನೆಯಲ್ಲಿರಲು ಯೋಗ್ಯ" ಎಂದೆಲ್ಲಾ ಹೇಳಿಕೆ ನೀಡಿರುವ ಮಿಶ್ರಾ ರವರ ಬಗ್ಗೆ ಟೈಮ್ಸ್ ಆಫ್ ಇಂಡಿಯಾ ಮತ್ತು ಪ್ರಜಾವಾಣಿ ಬರೆದಿರುವ ಸಂಪಾ ದಕೀಯಗಳಲ್ಲಿ ಇರುವ ಅಜಗಜಾಂತರ ವ್ಯತ್ಯಾಸ 'ಕಾವಿ ಪತ್ರಿಕೋದ್ಯಮ'ದ ಮತ್ತೊಂದು ಮುಖವನ್ನು ಬಟಾ ಬಯಲು ಮಾಡಿದೆ.

ಟೈಮ್ಸ್ ಆಫ್ ಇಂಡಿಯಾ ತನ್ನ ಸಂಪಾದಕೀಯದಲ್ಲಿ ಮಿಶ್ರರ ಹೇಳಿಕೆ ಖಂಡಿಸಿ ಇಂತಹ ಶ್ರೇಷ್ಠ ನ್ಯಾಯಾಧೀಶರು ಯಾವರೀತಿಯ ತೀರ್ಪುನೀಡಲು ಸಾಧ್ಯ? ಎಂದುಪ್ರಶ್ನಿಸಿದೆ: ಮಹಿಳೆಯರು ಕಚೇರಿಗಳಲ್ಲಿ ಲಿಂಗಭೇದದ ಸಮಸ್ಯೆ ಎದುರಿಸುವುದನ್ನು ನ್ಯಾಯಾಂಗದ ಮುಂದಿಟ್ಟಾಗ ಇವರು ಏನು ನ್ಯಾಯ ನೀಡುತ್ತಾರೆ? ಫಾತಿಮಾ ಬೀವಿ ಸುಪ್ರೀಂಕೋರ್ಟ್ ಪ್ರಥಮ ನ್ಯಾಯಾಧೀಶರಾಗಿರುವುದನ್ನು ಹೇಗೆ ಸಹಿಸುತ್ತಾರೆ ಎಂದು ಪ್ರಶ್ನಿಸಿದೆ.

ಮಿಶ್ರಾರವರ ಹೇಳಿಕೆ ಹೊಲಗದ್ದೆಗಳಲ್ಲಿ, ಕಚೇರಿಗಳಲ್ಲಿ ಮೈಮುರಿದು ದುಡಿಯುತ್ತಿರುವ ಲಕ್ಷಾಂತರ ಹೆಣ್ಣುಮಕ್ಕಳಿಗೆ ಮಾಡಿದ ಅವಮಾನ. ಮಿಶ್ರಾ ಈ ರೀತಿಯ ಹೇಳಿಕೆ ನೀಡುವುದರ ಮೂಲಕ ಇತಿಹಾಸದ ಕಸದ ಬುಟ್ಟಿ ಸೇರಿ ಹೋಗಿರುವ ಇವರ ಪೂರ್ವಿಕರ ಮಾತುಗಳನ್ನೇ ಪುನರುಚ್ಛರಿಸಿದ್ದಾರೆ ಎಂದು ಖಂಡಿಸಿದೆ.

ಮಿಶ್ರಾ ತಮ್ಮ ಹೇಳಿಕೆಯ ಬಗ್ಗೆ ಸರಿಯಾದ ಸ್ಪಷ್ಟನೆ ನೀಡಲು ಸಾಧ್ಯವಾಗದಿದ್ದರೆ ಅವರು ಆಸ್ಥಾನದಲ್ಲಿ ಮುಂದುವರಿಯುವುದರ ಬಗ್ಗೆ ಗಂಭೀರ ಪ್ರಶ್ನೆಗಳನ್ನೆತ್ತಬೇಕಾಗುತ್ತದೆ ಎಂದಿದೆ.

ಆದರೆ ಈ ಪ್ರಶ್ನೆಗೆ ಸಂಬಂಧಿಸಿದಂತೆ 'ಪ್ರಜಾವಾಣಿ'ಪತ್ರಿಕೆಗೆ ಯಾವುದೇ ರೀತಿಯ ನಿಲುವು ತಳೆಯಲು ಸಾಧ್ಯವಾಗಿಲ್ಲ. ಓದುಗರ ಅಭಿಪ್ರಾಯ ರೂಪಿಸ ಬೇಕಾಗಿರುವ ಪತ್ರಿಕೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಸಂಪಾದಕೀಯ ಬರೆದಿದೆ. ಮಿಶ್ರಾರವರ ಹೇಳಿಕೆ "ಸ್ವೀಕೃತವಾಗಲಿಕ್ಕಿಲ್ಲ" "ಅಸಂಗತವೆನಿಸಲು ಸಾಧ್ಯವಿದೆ" ಎನ್ನುವ ಹಾರಿಕೆ ಅಭಿಪ್ರಾಯ ನೀಡುತ್ತಾ ಮಿಶ್ರಾ ರವರ ಮಾತುಗಳಲ್ಲಿ "ಹೆಣ್ಣನ್ನು ಹೀಯಾಳಿಸುವ ಧೋರಣೆಯಿಲ್ಲ, ಅದಕ್ಕೆ ಬದಲಾಗಿ ಆಕೆಗೆ ಅತ್ಯುನ್ನತ ಗೌರವ ಸಲ್ಲಬೇಕು ಎಂದೇ ಹೇಳಿದ್ದಾರೆ. ಆದರೆ ಅವರು ಆಕೆಗೆ ಗಂಡು ಜತೆ ಸಮಾನವಾಗಿ ನಿಲ್ಲುವ ಅವಕಾಶ ಕೊಡಲು ಸಿದ್ಧರಿಲ್ಲ. ಬಹುಶಃ ಈ ಧೋರಣೆ ಒಪ್ಪಿಕೊಳ್ಳುವವರೂ ಹಲ ವಾರುಮಂದಿ ಇರಬಹುದು ಸ್ತ್ರೀಯರಲ್ಲೂ ಈ ಮಾತುಗಳಿಗೆ ತಲೆದೂಗುವವರು ಇರಬಹುದು ಎನ್ನುವ ಮೂಲಕ ಮಿಶ್ರಾ ರವರ ಪರೋಕ್ಷ ವಕಾಲತ್ತು ವಹಿಸಿಕೊಂಡಿದೆ.

ಇಷ್ಟೇ ಅಲ್ಲದೆ ಇನ್ನೂ ಮುಂದುವರಿದು "ಮಹಿಳಾ ಸಮಾಜದ ಕಾರ್ಯಕರ್ತೆಯರು ನ್ಯಾಯಾಧೀಶರು ಕ್ಷಮಾಪಣೆ ಕೇಳಬೇಕೆಂದಿರುವುದು ಅತಿಎನಿಸಬಹುದಾದರೂ ಪ್ರಗತಿ ಪಥದಲ್ಲಿರುವ ಮಹಿಳೆಯರ ಭಾವನೆಗಳಿಗೆ ಅವರು ಧ್ವನಿ ಕೊಡುತ್ತಿದ್ದಾರೆಂದು ಧಾರಾಳವಾಗಿ ಹೇಳಬಹುದು" ಎಂದುಬರೆಯುವುದರ ಮೂಲಕ ತಮಗೆ ಇದು ಇಷ್ಟವಾಗುವುದಿಲ್ಲ.ಕೆಲವರಿಗೆ ಇದು ಇಷ್ಟವಾಗಬಹುದು ಎನ್ನುವ ಅಭಿಪ್ರಾಯ ವ್ಯಕ್ತಪಡಿ ಸಿದ್ದಾರೆ. ಇದು ಮಹಿಳಾಚಳುವಳಿಯ ಸುಧೀರ್ಘ ಹೋರಾಟಕ್ಕೆ ಮಾಡಿದ ಅವಮಾನ.

ಮತ್ತೆ ಇದು 'ಕಾವಿ' ಮನಸ್ಸನ್ನೇ ಬಿಂಬಿಸಿದೆ. ಮಹಿಳೆಯನ್ನು ದೇವತೆಗೆ ಹೋಲಿಸುತ್ತಲೇ ಆಕೆಯನ್ನು ಅಡಿಗಲ್ಲಾಗಿಸಿಕೊಳ್ಳುವ ಮತಾಂಧರಿಗೆ ಈ 'ಕಾವಿ'ಸಂಪಾದಕೀಯ ಮತ್ತಷ್ಟು ಕುಮ್ಮಕ್ಕುನೀಡಿದೆ.

Printed and published by P.Ramachandra Rao on behalf of communist Party of India (Marxist), Karnatak a State Committee, 95A, 2nd Cross, Muneshwara Block, Palace Guttahalli, Bangalore - 560003 Phone : 366489. Editor : P. RAMACHANDRA RAO.